



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 4 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 287 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


# 'ಬಂಡೆ' ವಿರುದ್ಧ ಬಂಡಾಯ!

## ಮಠಾಧೀಶರ ನೇತೃತ್ವದಲ್ಲಿ ಅಹಿಂದ ಸಮಾವೇಶಕ್ಕೆ ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿದ ಸಚಿವರ ಸಿದ್ಧತೆ

**ಬೆಂಗಳೂರು, ಫೆ.3(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಬಂಡೆದ್ದಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಸಚಿವರು, ಬೃಹತ್ ಅಹಿಂದ ಸಮಾವೇಶ ನಡೆಸಲು ತೀರ್ಮಾನಿಸಿದ್ದಾರೆ.**

ಅಹಿಂದ ಸಭೆಯನ್ನು ನಾವು ಆಯೋಜಿಸಿದರೆ, ಶಿವಕುಮಾರ್ ವರಿಷ್ಠರ ಮೇಲೆ ಒತ್ತಡ ತಂದು ಅದನ್ನು ತಡೆಯುವ ಪ್ರಯತ್ನ ಮಾಡುತ್ತಾರೆ. ಇದರ ಬದಲು, ಅಹಿಂದದ ವಿವಿಧ ಸಮಾಜದ ಮಠಾಧೀಶರ ಮೂಲಕ ಬೃಹತ್ ಸಮಾವೇಶವನ್ನು ಮಧ್ಯ ಕರ್ನಾಟಕದಲ್ಲಿ ಆಯೋಜಿಸಲು ತೀರ್ಮಾನಿಸಿದ್ದಾರೆ. ಸಮಾವೇಶ ನಡೆಸುವ ಉದ್ದೇಶದಿಂದಲೇ ಕೆಲವು ಮಠಾಧೀಶರನ್ನು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರ ವಿಧಾನಸೌಧದ ಕೊಠಡಿಗೆ ಕರೆಸಿಕೊಂಡ ಈ ಸಚಿವರುಗಳು, ಅವರ ಮನವೊಲಿಸಿ ಅಹಿಂದ ಸಮಾವೇಶದ ನೇತೃತ್ವ ವಹಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ. ಸಮಾವೇಶದ ಉಸ್ತುವಾರಿ ಎಲ್ಲವನ್ನೂ ನಾವು ಮಾಡುತ್ತೇವೆ. ಆದರೆ, ನಿಮ್ಮ ನಾಯಕತ್ವದಲ್ಲಿ ಸಭೆ ನಡೆಯುತ್ತದೆ. ಆ ಸಭೆಗೆ ಅಹಿಂದ ವರ್ಗಗಳಿಗೆ ಸೇರಿದ ಮುಖಂಡರುಗಳಿಗೆ ಮಾತ್ರ ಆಹ್ವಾನ ನೀಡಿ.

ಸಭೆಯಲ್ಲಿ ಸಮಾಜಕ್ಕೆ ಆಗುತ್ತಿರುವ ಅನ್ಯಾಯವನ್ನು ನೀವೇ ಬಿಡಿಸಿಡಿ, ಅಷ್ಟೇ ಅಲ್ಲ, ಸರ್ಕಾರದಿಂದ ಏನಾಗಬೇಕೆಂದು ಹಕ್ಕೊತ್ತಾಯ ಮಾಡಿ. ಸ್ವಾಮೀಜಿಗಳು ಈ ರೀತಿ ಮಾಡುವುದರಿಂದ ಅಹಿಂದ ವರ್ಗದ ಜನರಿಗೆ ಸರ್ಕಾರದ ಒಂದಷ್ಟು ಸವಲತ್ತು ದೊರೆಯುವ ಜೊತೆಗೆ ನಮ್ಮ ಒಗ್ಗಟ್ಟು ಬಲಗೊಳ್ಳುತ್ತದೆ. ಮುಂದಿನ ದಿನಗಳಲ್ಲಿ ಸರ್ಕಾರದ ನಾಯಕತ್ವದಲ್ಲೂ ಬದಲಾವಣೆ ತಳ್ಳಿಹಾಕುವಂತಿಲ್ಲ, ಇಂತಹ ಸನ್ನಿವೇಶದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಮುಖ್ಯಮಂತ್ರಿ ಆಗಲು ಈ ಸಮಾವೇಶ ಸಹಕಾರಿಯಾಗುತ್ತದೆ ಎಂದಿದ್ದಾರೆ. ಡಾ.ಪರಮೇಶ್ವರ್ ಕೊಠಡಿಯಲ್ಲಿ ನಡೆದ ■6ನೇ ಪುಟಕ್ಕೆ

### 2028ರವರೆಗೆ ಕಾಂಗ್ರೆಸ್ ಸರ್ಕಾರ ಉಳಿಯಲ್ಲ

**ಪಕ್ಷದ ಶಾಸಕರಲ್ಲಿನ ಅತೃಪ್ತಿಯೇ ಅಸ್ಥಿರತೆಗೆ ಕಾರಣವಾಗಲಿದೆ**



**ಬೆಂಗಳೂರು:** ಕರ್ನಾಟಕದಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರ 2028ರವರೆಗೆ ಉಳಿಯುವುದಿಲ್ಲ. ಆ ಪಕ್ಷದ ಶಾಸಕರಲ್ಲಿ ಹೆಚ್ಚುತ್ತಿರುವ ಅತೃಪ್ತಿಯೇ ಅಸ್ಥಿರತೆಗೆ ಕಾರಣವಾಗಲಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರಲ್ಲಿ ಅಸಮಾಧಾನ ಹೆಚ್ಚಾಗುತ್ತಿದೆ, ಯಾವಾಗ ಸ್ಫೋಟಗೊಳ್ಳುತ್ತದೆ ಎಂಬುದು ನಮಗೆ ತಿಳಿದಿಲ್ಲ, ಕಾದು ನೋಡೋಣ, ಪ್ರತಿಪಕ್ಷಗಳು ಸರ್ಕಾರ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿವೆ ಎಂಬುದು ಸರಿಯಲ್ಲ ಎಂದರು. ಕಾಂಗ್ರೆಸ್ ಸರ್ಕಾರವನ್ನು ಉರುಳಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂಬುದು ನಿಜವಲ್ಲ, ಅವರ ಶಾಸಕರು ಮತ್ತು ಜನರೇ ಸರ್ಕಾರದ ಅಡಿಪಾಯ ಅಸ್ಥಿರಗೊಳಿಸುತ್ತಿದ್ದಾರೆ, ಹಣಕಾಸಿನ ಮುಗ್ಗಟ್ಟಿನಿಂದಾಗಿ ಆಡಳಿತ ಪಕ್ಷದ ಶಾಸಕರು ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡಲು ಸಾಧ್ಯವಾಗುತ್ತಿಲ್ಲ, ಇದು ಪಕ್ಷದೊಳಗೆ ವ್ಯಾಪಕ ಅಸಮಾಧಾನಕ್ಕೆ ಕಾರಣವಾಗಿದೆ. ಸರ್ಕಾರದ ಕಾರ್ಯವೈಖರಿ ಬಗ್ಗೆ ಶಾಸಕರಲ್ಲಿ ವ್ಯಾಪಕ ಅಸಮಾಧಾನ ಇರುವುದು ಶೀಘ್ರವೇ ಬಯಲಿಗೆ ಬಂದು ಸರ್ಕಾರ ಬೀಳಲು ಕಾರಣವಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಸಲಹೆಗಾರ ಸ್ಥಾನಕ್ಕೆ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಜನವರಿ 31ರಂದೇ ರಾಜೀನಾಮೆ ನೀಡಿದ್ದರೂ ಕಾರಣಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದಿದ್ದಾರೆ ಎಂದರು.

# ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಸ್ಥಳಾಂತರಕ್ಕೆ ತೀವ್ರ ವಿರೋಧ

●ಸರ್ಕಾರಿ ಭವನ, ಪೀಪಲ್ಸ್ ಪಾರ್ಕ್‌ಗೆ ಹೊಂದಿಕೊಂಡ ಪಾಳು ಜಾಗ ಬಳಸಿಕೊಂಡು ಹಾಲಿ ಬಸ್ ನಿಲ್ದಾಣ ವಿಸ್ತರಣೆಗೆ ಆಗ್ರಹ ●ಬನ್ನಿಮಂಟಪಕ್ಕೆ ಬಸ್ ನಿಲ್ದಾಣ ಸ್ಥಳಾಂತರ ಮಾಡುವುದರಿಂದ ಶೇ.85ರಷ್ಟು ಜನರಿಗೆ ಅನಾನುಕೂಲ; ಪ್ರವಾಸೋದ್ಯಮಕ್ಕೂ ಭಾರಿ ಪೆಟ್ಟು ಬೀಳುವ ಸಾಧ್ಯತೆ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿದರು.

ಮೈಸೂರು,ಫೆ.3(ಎಂಟಿವೈ)– ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣವನ್ನು ಬನ್ನಿಮಂಟಪಕ್ಕೆ ಸ್ಥಳಾಂತರಿಸುವ ಪ್ರಕ್ರಿಯೆಯಿಂದ ಹಿಂದೆ ಸರಿದು ಸರ್ಕಾರಿ ಅತಿಥಿ ಗೃಹದ ಪಕ್ಕದ 5 ಎಕರೆ, ಪೀಪಲ್ಸ್ ಪಾರ್ಕ್‌ಗೆ ಹೊಂದಿಕೊಂಡಂತೆ ಇರುವ ನಾಲ್ಕು ಎಕರೆ ಜಾಗವನ್ನು ಬಳಸಿಕೊಂಡು ಬಸ್ ನಿಲ್ದಾಣ ವಿಸ್ತರಣೆಗೆ ಕ್ರಮ ಕೈಗೊಳ್ಳುವಂತೆ ಮೈಸೂರು ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣ ಉಳಿಸಿ ಹೋರಾಟ ಸಮಿತಿ ಅಧ್ಯಕ್ಷ ರವಿಶಾಸ್ತ್ರಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮಾಂತರ ಬಸ್ ನಿಲ್ದಾಣವನ್ನು ಬನ್ನಿಮಂಟಪಕ್ಕೆ ಸ್ಥಳಾಂತರಿಸುವುದರಿಂದ ಜನರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಮೈಸೂರು ನಗರದ ಶೇ.85ರಷ್ಟು ಜನಸಂಖ್ಯೆ, ಪ್ರವಾಸಿ ತಾಣಕ್ಕೆ ಈಗ ಇರುವ ಹಳೆಯ ಗ್ರಾಮಾಂತರ ಬಸ್ ನಿಲ್ದಾಣ ಸಹಕಾರಿಯಾಗಿದೆ. ಬನ್ನಿಮಂಟಪದ ಕಡೆ ಶೇ.15ರಷ್ಟು ಜನಸಂಖ್ಯೆಯಿದ್ದು, ಸುತ್ತಮುತ್ತ ಯಾವುದೇ ಪ್ರವಾಸಿ ತಾಣವಿಲ್ಲ. ಅಲ್ಲದೆ, ನಾಡಹಬ್ಬ ದಸರಾ ಮಹೋತ್ಸವದ ಸಂದರ್ಭದಲ್ಲಿ 45 ದಿನ ಗಜಪಡೆ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ತಾಲೀಮು ನಡೆಸುವುದರಿಂದ ಗ್ರಾಮಾಂತರ ಬಸ್ ನಿಲ್ದಾಣ ಬನ್ನಿಮಂಟಪಕ್ಕೆ ಸ್ಥಳಾಂತರಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

**ಸಿಎಂ ಸಾಕಷ್ಟು ಕೊಡುಗೆ ನೀಡಿದ್ದಾರೆ:** ಮೈಸೂರಿನವರೇ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ 3500 ಕೋಟಿ ರೂ.ವೆಚ್ಚದ ಅಭಿವೃದ್ಧಿ ಕಾಮಗಾರಿಯನ್ನು ■6ನೇ ಪುಟಕ್ಕೆ

### ಪಾಲಿಕೆ ನೂತನ ಆಯುಕ್ತರ ದಿಢೀರ್ ನಗರ ಪ್ರದಕ್ಷಿಣೆ

■ಪುಟ–3




## ರಾಜಕಾರಣಿಗಳು, ಅಧಿಕಾರಿಗಳ ಬೇಜವಾಬ್ದಾರಿತನ; ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿ

# ಇಬ್ಬರ ಸಾವು; ಒಬ್ಬ ನಾಪತ್ತೆ, ಮತ್ತೊಬ್ಬನ ರಕ್ಷಣೆ




ನಾಲೆಗೆ ಉರುಳಿ ಬಿದ್ದ ಕಾರನ್ನು ಹೊರತೆಗೆಯುತ್ತಿರುವುದು.

●ಮಂಡ್ಯದ ಬಳಿ ದುರ್ಘಟನೆ ●ನಾಲೆಗೆ ತಡೆಗೋಡೆ ಇಲ್ಲದೇ ನಡೆದುಹೋಯ್ತು ದುರಂತ ●ಈ ಹಿಂದೆಯೂ ಹಲವು ಘಟನೆ ನಡೆದಿದ್ದರೂ ಎಚ್ಚೆತ್ತುಕೊಳ್ಳದ ಜಿಲ್ಲಾಡಳಿತ

ಮಂಡ್ಯ, ಫೆ.3– ಅಧಿಕಾರಿಗಳ ತೀವ್ರ ನಿರ್ಲಕ್ಷ್ಯತೆಯಿಂದಾಗಿ ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲೆಯು ಸಾವಿನ ಗುಂಡಿಯಾಗಿ ಪರಿಣಮಿಸುತ್ತಿದೆ. ನಾಲೆಗೆ ರಕ್ಷಣಾ ತಡೆಗೋಡೆ ನಿರ್ಮಿಸದ ಪರಿಣಾಮ ಪದೇ ಪದೆ ಈ ನಾಲೆಗೆ ವಾಹನಗಳು ಉರುಳಿಬಿದ್ದು ಹಲವರು ಪ್ರಾಣ ಕಳೆದುಕೊಂಡಿದ್ದರೂ ಅಧಿಕಾರಿಗಳಂತೂ ಇನ್ನೂ ಎಚ್ಚೆತ್ತಿಲ್ಲ ಎಂಬ ದೂರುಗಳು ನಿತ್ಯವೂ ಕೇಳಿಬರುತ್ತಿವೆ.

ಇಂದು(ಸೋಮವಾರ) ಮಧ್ಯಾಹ್ನ 12.30ರ ಸುಮಾರಿನಲ್ಲಿ ಮಂಡ್ಯ ತಾಲೂಕಿನ ಮಾಚನಹಳ್ಳಿ ಗ್ರಾಮದ ಬಳಿ ವಿಶ್ವೇಶ್ವರಯ್ಯ ನಾಲೆಗೆ ಇಂಡಿಕಾ ಕಾರು(ಕೆ.ಎ.09–ಪಿ2960) ಉರುಳಿಬಿದ್ದು ಇಬ್ಬರು ಸಾವಿಗೀಡಾದರೆ, ಓರ್ವನನ್ನು ಗ್ರಾಮಸ್ಥರು ರಕ್ಷಿಸಿದ್ದಾರೆ. ಮತ್ತೋರ್ವ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಆತನಿಗಾಗಿ ಅಗ್ನಿಶಾಮಕ ದಳ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ. ಮೃತರನ್ನು ಹಾಲಹಳ್ಳಿ ಗ್ರಾಮದ ಫಯಾಜ್, ■6ನೇ ಪುಟಕ್ಕೆ



ಕಾರ್ಯಾಚರಣೆಯಲ್ಲಿ ತೊಡಗಿರುವ ಅಗ್ನಿಶಾಮಕ ಸಿಬ್ಬಂದಿ

# ಈ ವರ್ಷ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ಇಲ್ಲ



ಮಧು ಬಂಗಾರಪ್ಪ

ಬೆಂಗಳೂರು, ಫೆ.3– ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚುವರಿ ಗ್ರೇಸ್ ಮಾರ್ಕ್ಸ್ ಕೊಟ್ಟು ವಿವಾದಕ್ಕೀಡಾಗಿದ್ದ ಶಿಕ್ಷಣ ಇಲಾಖೆ, ಈ ವರ್ಷ ಗ್ರೇಸ್ ಮಾರ್ಕ್ಸ್ ಕೊಡುವುದಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಶೀಘ್ರವೇ ಬರಲಿದೆ ಕಳೆದ ವರ್ಷ ವೆಬ್‌ಕಾಸ್ಟ್ ಮಾಡುವುದರಿಂದ ಕಡಿಮೆ ಫಲಿತಾಂಶ ಬಂದಿತ್ತು. ಈ ಹಿನ್ನೆಲೆಯಲ್ಲಿ ಫಲಿತಾಂಶ ವೃದ್ಧಿಗೆ ಏನು ಮಾಡಬೇಕು ಎಂದು ಚರ್ಚೆ ಮಾಡಿದೆವು. ಈ ನಿಟ್ಟಿನಲ್ಲಿ ಇಲಾಖೆ ಕೆಲಸ ಮಾಡಿದೆ. ಪ್ರತಿ ಜಿಲ್ಲೆಯ ಸಿಇಓಗಳು ಈ ಬಾರಿ ನಮಗೆ ಹೆಚ್ಚು ಸಹಕಾರ ಕೊಟ್ಟಿದ್ದಾರೆ. ಮಕ್ಕಳಿಗೆ ಪರೀಕ್ಷಾ ಸಿದ್ಧತೆಗೆ ನಾವು ಮಾರ್ಗೋಪಾಯಗಳನ್ನ ಸಿದ್ಧ ಮಾಡಿದ್ದೇವೆ ಎಂದು ತಿಳಿಸಿದರು. 3 ಪರೀಕ್ಷೆ ಪದ್ಧತಿ ಈಗ ಮಕ್ಕಳಿಗೆ ಅರ್ಥವಾಗಿದೆ. ಒಂದು ವೇಳೆ ಫೇಲ್ ಆದರೆ ಮತ್ತೆ ಶಾಲೆಗೆ ಸೇರುವ ವ್ಯವಸ್ಥೆಯೂ ಈಗ ಮಕ್ಕಳಿಗೆ ಅರ್ಥ ವಾಗಿದೆ. ವಿದ್ಯಾರ್ಥಿಗಳಿಗೆ ಇರುವ ಸಮಸ್ಯೆ ಬಗ್ಗೆ ಇಂದು ರಿವ್ಯೂ ಮೀಟಿಂಗ್ ಮಾಡಿದ್ದೇವೆ. ಎಲ್ಲಾ ಜಿಲ್ಲೆಯ ಡಿಸಿ, ಸಿಇಓಗಳ ಜೊತೆ ಚರ್ಚೆ ಮಾಡಿದ್ದೇವೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಜಾಸ್ತಿ ಆಗಲಿದೆ. ಮಕ್ಕಳಿಗೆ ಒತ್ತಡ ಹಾಕಬಾರದು ಎಂದು ಸೂಚನೆ ನೀಡಿದ್ದೇನೆ. ಸಿಎಂ ಅವರು ಸಭೆಯಲ್ಲಿ ಗರಂ ಆಗಿದ್ದರು. ಗ್ರೇಸ್ ಮಾರ್ಕ್ಸ್ ಕೊಡಬಾರದಿತ್ತು ಎಂದು ಹೇಳಿದರು. ಈ ಬಾರಿ ಯಾವುದೇ ಕಾರಣಕ್ಕೂ ಗ್ರೇಸ್ ಮಾರ್ಕ್ಸ್ ಕೊಡೋದಿಲ್ಲ ಎಂದರು.




# ವಿಜಯೇಂದ್ರನ ಕರ್ಮಕಾಂಡ ವಿವರಿಸಲು ದೆಹಲಿಗೆ ಹೊರಟಿದ್ದೇವೆ



ಯತ್ನಾಳ್

ವಿಜಯಪುರ, ಫೆ.3– ಯಡಿಯೂರಪ್ಪ ಮಗನ ಕರ್ಮಕಾಂಡ ವಿವರಿಸಲು ಮಂಗಳವಾರ ಮಧ್ಯಾಹ್ನ ದೆಹಲಿಗೆ ಹೊರಟಿದ್ದೇವೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇಷ್ಟು ದಿನ ತಟಸ್ಥರಿದ್ದವರು ಇದೀಗ ನಮ್ಮ ನಿಷ್ಠಾವಂತರ ಗುಂಪು ಸೇರಿದ್ದಾರೆ. ರಾಜ್ಯಾಧ್ಯಕ್ಷ ಸ್ಥಾನದ ಬಗ್ಗೆ ಹೈಕಮಾಂಡ್ ಗಮನಕ್ಕೆ ತರಲು ಹೊರಟಿದ್ದೇವೆ. ವಂಶಪಾರಂಪರಿಕ, ಕುಟುಂಬಶಾಹಿ ವಿರುದ್ಧ ನಮ್ಮ ಹೋರಾಟ ಇದೆ. ಯಡಿಯೂರಪ್ಪ ಅವರ ಮಗನ ಕರ್ಮಕಾಂಡದ ಬಗ್ಗೆ ವಿವರಿಸಲು ಹೊರಟಿದ್ದೇವೆ ಎಂದು ಕಿಡಿಕಾರಿದರು. ಇನ್ನು ಕುಟುಂಬಶಾಹಿ ರಾಜಕಾರಣ ಬಿಜೆಪಿಯಲ್ಲಿ ಕೊನೆಗೊಳ್ಳಬೇಕು. ಭ್ರಷ್ಟಾಚಾರ ಕುಟುಂಬ ಈ ರಾಜ್ಯದಿಂದ ■6ನೇ ಪುಟಕ್ಕೆ

### ಬಿಜೆಪಿಯಲ್ಲಿನ ಆಂತರಿಕ ಪ್ರಜಾಪ್ರಭುತ್ವ ಬೇರಾವ ಪಕ್ಷದಲ್ಲೂ ಇಲ್ಲ



ಬೆಂಗಳೂರು, ಫೆ.3(ಕೆಎಂಶಿ)– ಭಾರತೀಯ ಜನತಾ ಪಾರ್ಟಿಯಲ್ಲಿನ ಆಂತರಿಕ ಪ್ರಜಾಪ್ರಭುತ್ವ ಯಾವುದೇ ರಾಜಕೀಯ ಪಕ್ಷದಲ್ಲಿ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಮರ್ಥಿಸಿಕೊಂಡಿದ್ದಾರೆ. ಪಕ್ಷದಲ್ಲಿ ಎಲ್ಲಾ ಮಟ್ಟದಲ್ಲೂ ವ್ಯವಸ್ಥಿತ ಸಂಘಟನಾ ಚುನಾವಣೆ ನಡೆಯುತ್ತದೆ, ಈ ವ್ಯವಸ್ಥೆ ಬಿಜೆಪಿಯಲ್ಲಿ ಮಾತ್ರ ಸಾಧ್ಯ. ಪಕ್ಷದ ಕೇಂದ್ರ ವರಿಷ್ಠರ ನಿರ್ಧಾರದಂತೆ ಮಂಡಲ ಮಟ್ಟದಿಂದ ಜಿಲ್ಲಾ ಮಟ್ಟ, ರಾಜ್ಯಾಧ್ಯಕ್ಷ ■6ನೇ ಪುಟಕ್ಕೆ

# ಮೈಸೂರು–ವಾರಣಾಸಿ ಎಕ್ಸ್‌ಪ್ರೆಸ್ ರೈಲಿಗೆ ಹೆಚ್ಚುವರಿ ಬೋಗಿ

**ಸಂಸದ ಯದುವೀರ್ ಮನವಿ ಹಿನ್ನೆಲೆಯಲ್ಲಿ ಮಹಾ ಕುಂಭಮೇಳಕ್ಕೆ ತೆರಳುವ ಮೈಸೂರು ಯಾತ್ರಿಗಳಿಗೆ ವ್ಯವಸ್ಥೆ**

●ಇಂದಿನಿಂದ ತಿಂಗಳ ಕಾಲ ಸೇವೆ ●ಪ್ರಯಾಗರಾಜ್‌ಗೆ ತೆರಳಲು ಹೆಚ್ಚು ಅನುಕೂಲ



"ಮಹಾಕುಂಭ ಮೇಳ 144 ವರ್ಷಗಳಿಗೊಮ್ಮೆ ನಡೆಯಲಿದೆ. ಈ ಪುಣ್ಯ ಕಾಲದಲ್ಲಿ ತೀರ್ಥ ಸ್ನಾನ ಮಾಡಲು ದೇಶದ ಬಹುತೇಕ ಜನರು ಬಯಸುತ್ತಾರೆ. ನಮ್ಮ ಕ್ಷೇತ್ರದ ಜನರಿಗೆ ಅನುಕೂಲವಾಗಲೆಂದು ರೈಲ್ವೆ ಇಲಾಖೆಗೆ ಪತ್ರ ಬರೆದಿದ್ದೆ. ಈಗಾಗಲೇ ಮೈಸೂರು–ವಾರಣಾಸಿ ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತಿದೆ. ಇದಕ್ಕೆ ಹೆಚ್ಚುವರಿ ಬೋಗಿಗಳನ್ನು ಅಳವಡಿಸಿದರೆ ನಮ್ಮ ಕ್ಷೇತ್ರದಿಂದ ಯಾತ್ರಿಗಳಿಗೆ ಅನುಕೂಲ ವಾಗಲಿದೆ ಎಂಬ ಆಲೋಚನೆ ಬಂದ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆ ಪತ್ರ ಬರೆದು ಮನವಿ ಸಲ್ಲಿಸಿದ್ದೆ. ಅದಕ್ಕೆ ಇಲಾಖೆ ಯಿಂದ ಸ್ಪಂದನೆ ಬಂದು ಫೆಬ್ರವರಿ 4ರಿಂದ ಹೆಚ್ಚುವರಿ ಬೋಗಿಗಳ ಸಂಚಾರ ಆರಂಭಿಸಲಾಗುತ್ತಿದೆ. **–ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು–ಕೊಡಗು ಸಂಸದ.**



ಮೈಸೂರು, ಫೆ.3–ಹಿಂದೂ ಧರ್ಮದ ಅತ್ಯಂತ ಭವ್ಯ ಹಾಗೂ ಧಾರ್ಮಿಕ ಶ್ರದ್ಧೆಯ ಮಹಾ ಕುಂಭಮೇಳಕ್ಕೆ ತೆರಳಲು ಮೈಸೂರು ಯಾತ್ರಾರ್ಥಿಗಳಿಗೆ ನೆರವಾಗಲೆಂದು ಮೈಸೂರು –ವಾರಣಾಸಿ ಎಕ್ಸ್‌ಪ್ರೆಸ್ ರೈಲಿಗೆ (22867) ಹೆಚ್ಚುವರಿ ಬೋಗಿಗಳ ಅಳವಡಿಸಬೇಕೆಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾಡಿದ ಮನವಿಗೆ ರೈಲ್ವೆ ಇಲಾಖೆ ಸ್ಪಂದಿಸಿದ್ದು, ಇದಕ್ಕೆ ಒಪ್ಪಿಗೆಯನ್ನೂ ನೀಡಿದೆ.

ಮಹಾ ಕುಂಭಮೇಳಕ್ಕೆ ಮೈಸೂರು–ಕೊಡಗು ಕ್ಷೇತ್ರದಿಂದ ತೆರಳುವ ಯಾತ್ರಿಗಳಿಗೆ ನೆರವಾಗಲೆಂದು ಹೆಚ್ಚುವರಿ ಬೋಗಿಗಳನ್ನು ಅಳವಡಿಸಬೇಕು ಎಂದು ರೈಲ್ವೆ ಇಲಾಖೆಗೆ ಸಂಸದ ಯದುವೀರ್ ಪತ್ರ ಬರೆದು ಮನವಿ ಮಾಡಿದ್ದರು.

ಮೈಸೂರು–ವಾರಣಾಸಿ ಎಕ್ಸ್‌ಪ್ರೆಸ್ ರೈಲು ಪ್ರಯಾಗ್‌ರಾಜ್ ಮೂಲಕ ಹಾದು ಹೋಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಬೋಗಿಗಳನ್ನು ಅಳವಡಿಸಿದರೆ ಅನುಕೂಲವಾಗುತ್ತದೆ. ಹೀಗಾಗಿ ಹೆಚ್ಚುವರಿ ಕೋಚ್ ಅನ್ನು ಅಳವಡಿಸಬೇಕು ಎಂದು ಮಾಡಿದ ಮನವಿಗೆ ಸ್ಪಂದಿಸಿರುವ ರೈಲ್ವೆ ಇಲಾಖೆ, ಮೈಸೂರು–ವಾರಣಾಸಿ ಎಕ್ಸ್‌ಪ್ರೆಸ್ ರೈಲಿಗೆ ಹವಾನಿಯಂತ್ರಿತ ಹೆಚ್ಚುವರಿ ಬೋಗಿಯನ್ನು ಅಳವಡಿಸಲು ಸಮ್ಮತಿಸಿದೆ. ಫೆ.4ರಿಂದ ಮೈಸೂರು–ವಾರಣಾಸಿ ಎಕ್ಸ್‌ಪ್ರೆಸ್ ರೈಲಿಗೆ ಹೆಚ್ಚುವರಿ ಬೋಗಿಗೆ ಅನುವು ಮಾಡಿಕೊಡಲಾಗುವುದು ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ಸಂಸದರಿಗೆ ಮಾಹಿತಿ ನೀಡಿದ್ದಾರೆ.

## ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದ ವಿರುದ್ಧ ಮತ್ತೊಂದು ಭೂ ಅಕ್ರಮದ ಆರೋಪ

# ಬೇನಾಮಿ ಆಸ್ತಿ ಸಂಪಾದನೆ ಸಂಬಂಧ ಲೋಕಾಯುಕ್ತ ಎಸ್ಪಿಗೆ ದೂರು ಸಲ್ಲಿಸಿದ ಸ್ನೇಹಮಯಿ ಕೃಷ್ಣ

●ಮೊದಲು ಸಿಎಂ ಭಾವಮೈದ, ನಂತರ ಸಿಎಂ ಪತ್ನಿ ಬಳಿಕ ಸಿಎಂ ಪುತ್ರನಿಗೆ ಹಸ್ತಾಂತರ ●ಅನ್ಯಕ್ರಾಂತ ಮಾಡಲು ಪ್ರಭಾವ: ಆರ್‌ಟಿಸಿಯಲ್ಲಿ ಇನ್ನೂ ಭಾವಮೈದನ ಹೆಸರೇ ಉಲ್ಲೇಖ ●ಮುಖ್ಯಮಂತ್ರಿ ಸಿದ್ದರಾಮಯ್ಯ ಆಸ್ತಿ ಬಗ್ಗೆ ತನಿಖೆ ಮಾಡಿ, ಸತ್ಯಾಂಶ ತಿಳಿಸಿ; ವಿಳಂಬ ಮಾಡಿದರೆ ಕಾನೂನು ಹೋರಾಟದ ಎಚ್ಚರಿಕೆ



ಸ್ನೇಹಮಯಿ ಕೃಷ್ಣ

ಮೈಸೂರು, ಫೆ.3(ಬಿಎಲ್‌ಯು)– ಮುಡಾದಿಂದ ಅಕ್ರಮವಾಗಿ 14 ನಿವೇಶನ ಪಡೆದಿರುವ ಬಗ್ಗೆ ಲೋಕಾಯುಕ್ತ ಹಾಗೂ ಇಡಿ ತನಿಖೆ ನಡೆಯುತ್ತಿರುವ ಸಂದರ್ಭದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಕುಟುಂಬ ಮತ್ತೊಂದು ಭೂ ಅಕ್ರಮ ಎಸಗಿದೆ ಎಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಯಲ್ಲಿ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರಿಗೆ ಸ್ನೇಹಮಯಿ ಕೃಷ್ಣ, ತಮ್ಮ ಆರೋಪ ಕುರಿತಂತೆ ಸಿದ್ದರಾಮಯ್ಯ ಕುಟುಂಬದ ವಿರುದ್ಧ ದಾಖಲಾತಿ ಸಮೇತ ದೂರು ನೀಡಿದ್ದಾರೆ.

"ಬಹುಶಃ ನಮ್ಮ ಕಚೇರಿಯ ಟಪಾಲು ವಿಭಾಗಕ್ಕೆ ದೂರು ನೀಡಿರುತ್ತಾರೆ. ಆ ದೂರನ್ನು ಓದಿದ ನಂತರ ಪ್ರತಿಕ್ರಿಯೆ ನೀಡುತ್ತೇನೆ. **–ಟಿ.ಜೆ.ಉದೇಶ್, ಲೋಕಾಯುಕ್ತ ಎಸ್ಪಿ**



ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂಬರ್ 464 ರ 3.16 ಎಕರೆ ಭೂ ಅಕ್ರಮದ ಮಾದರಿಯಲ್ಲಿ ಸಿದ್ದರಾಮಯ್ಯ ಕುಟುಂಬ ಮತ್ತೊಂದು ಬೇನಾಮಿ ಆಸ್ತಿ ಗಳಿಸಿದೆ ಎಂದು ಆರೋಪ ಮಾಡಿದ್ದಾರೆ.

ಮೈಸೂರಿನ ಆಲನಹಳ್ಳಿ ಗ್ರಾಮದ ಸರ್ವೆ ನಂಬರ್ 113/4ರಲ್ಲಿ ಒಂದು ಎಕರೆ ಭೂಮಿಯನ್ನು ಸಿದ್ದರಾಮಯ್ಯ ಭಾವಮೈದ ಬಿ.ಎಂ.ಮಲ್ಲಿಕಾರ್ಜುನಸ್ವಾಮಿ, ಡಿಸೆಂಬರ್ 15, 1983 ರಂದು ಖರೀದಿ ಮಾಡಿದ್ದಾರೆ. ತರುವಾಯ ಇದೇ ಭೂಮಿಯನ್ನು ಸಿದ್ದರಾಮಯ್ಯ ಪ್ರಭಾವ ಬಳಸಿ ಜೂನ್ 22, 2006 ರಲ್ಲಿ ಅನ್ಯಕ್ರಾಂತ ಮಾಡಿಸಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆಪಾದಿಸಿದ್ದಾರೆ. ತರುವಾಯ ಬಿ.ಎಂ.ಮಲ್ಲಿಕಾರ್ಜುನ ಸ್ವಾಮಿ ಅವರು ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಅರಿಶಿನ ಕುಂಕುಮಕ್ಕೆಂದು ಅಕ್ಟೋಬರ್ 20, 2010 ರಂದು ದಾನ ಮಾಡಿ, ಪತ್ರ ನೋಂದಣಿ ಮಾಡಿಕೊಟ್ಟಿದ್ದಾರೆ ಎಂದು ದೂರಿದ್ದಾರೆ. ನಂತರ ಪಾರ್ವತಿ ಅವರು ತಮ್ಮ ಪುತ್ರ ಯತೀಂದ್ರ ಅವರಿಗೆ ಒಂದು ತಿಂಗಳ ಒಳಗೆ ಇದೇ ಆಸ್ತಿಯನ್ನು ನವೆಂಬರ್ 11, 2010ರಂದು ದಾನಪತ್ರದ ಮೂಲಕ ನೋಂದಣಿ ಮಾಡಿಕೊಟ್ಟಿದ್ದಾರೆ ಎಂದು ಆಪಾದಿಸಿದ್ದಾರೆ.

ಸಿದ್ದರಾಮಯ್ಯ ಕುಟುಂಬದಲ್ಲಿ ಒಬ್ಬರಿಂದ ಒಬ್ಬರಿಗೆ ಆಸ್ತಿ ವರ್ಗಾವಣೆಗೊಂಡ ನಂತರ ಯತೀಂದ್ರ ಅವರು ಮಾರ್ಚ್ 23, 2011 ರಂದು ಬೇರೆಯವರಿಗೆ ಕ್ರಯಪತ್ರದ ನೋಂದಣಿ ಮಾಡಿಕೊಟ್ಟಿದ್ದು, ಯಾರಿಗೆ ಮಾರಾಟ ಮಾಡಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ. ಈ ಎಲ್ಲಾ ಬೆಳವಣಿಗೆ ಮಧ್ಯೆ ಆಲನಹಳ್ಳಿ ಗ್ರಾಮದ ಸರ್ವೆ ನಂಬರ್ 113/4 ರ ಒಂದು ಎಕರೆ ಭೂಮಿಯ ಆರ್‌ಟಿಸಿಯಲ್ಲಿ ಈಗಲೂ ಮಲ್ಲಿಕಾರ್ಜುನಸ್ವಾಮಿ ಅವರಿಗೆ ಸೇರಿರುವ ಕೃಷಿ ಭೂಮಿ ಎಂಬ ಉಲ್ಲೇಖವಿದ್ದು, ಅಚ್ಚರಿಗೆ ಕಾರಣವಾಗಿದೆ. ಇದರ ಮಧ್ಯೆ ಜುಲೈ 11, 1996 ರಂದು ಹೊರಡಿಸಿರುವ ರಾಜ್ಯಪತ್ರದ ಪ್ರಕಾರ ಈ ಭೂಮಿಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಭೂ ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಉಲ್ಲೇಖವಿದೆ ■6ನೇ ಪುಟಕ್ಕೆ

"ಸ್ನೇಹಮಯಿ ಕೃಷ್ಣನ ಪ್ರಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅವರ ಕುಟುಂಬಸ್ಥರು ಏನನ್ನೂ ಖರೀದಿ ಮಾಡಬಾರದೆ. ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರಿಗೆ ತವರು ಮನೆಯವರು ಅರಿಶಿನ ಕುಂಕುಮಕ್ಕೆ ದಾನವಾಗಿ ಜಮೀನು ನೀಡಿದರೆ ಅದರಲ್ಲಿ ತಪ್ಪು ಹುಡುಕುವ ಈತ ಸುಳ್ಳು ದೂರು ನೀಡುತ್ತಿದ್ದಾನೆ. ಸಿದ್ದರಾಮಯ್ಯ ಕುಟುಂಬ ಟಾರ್ಗೆಟ್ ಮಾಡಿರುವ ಸ್ನೇಹಮಯಿ ಕೃಷ್ಣ, ಅವರ ವೈಯಕ್ತಿಕ ವಿಚಾರಗಳನ್ನು ಕೆದಕಿ ಪ್ರತಿದಿನ ಒಂದಲ್ಲಾ ಒಂದು ದೂರು ನೀಡುತ್ತಿದ್ದಾನೆ. ಬಹಳಷ್ಟು ರಾಜಕಾರಣಿಗಳನ್ನು ಬಿಟ್ಟು ಸಿದ್ದರಾಮಯ್ಯ ಕುಟುಂಬವನ್ನು ಏಕೆ ಆತ ಗುರಿಯಾಗಿಸಿದ್ದಾನೆ. ಈತನ ಹಿಂದೆ ಯಾರಿದ್ದಾರೆ ಎಂಬ ಬಗ್ಗೆ ತನಿಖೆ ನಡೆಯುವುದು ಅತ್ಯವಶ್ಯ. ಈ ಸಂಬಂಧ ಶೀಘ್ರವೇ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸ್ನೇಹಮಯಿ ಕೃಷ್ಣ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆ ಮಾಡಿ ತೀರ್ಮಾನಿಸುತ್ತೇನೆ. **–ಎಂ.ಲಕ್ಷ್ಮಣ, ಕೆಪಿಸಿಸಿ ವಕ್ತಾರ**



## ಕ್ಯಾತನಹಳ್ಳಿಯಲ್ಲಿ ತೀರ್ಥಂಕರ ವಿಗ್ರಹ ಪತ್ತೆ



ಕ್ಯಾತನಹಳ್ಳಿ ಗ್ರಾಮದ ಬಳಿಯ ಹೊಲದಲ್ಲಿ ತೀರ್ಥಂಕರ ವಿಗ್ರಹ ದೊರೆತಿದೆ.

ಮೈಸೂರು, ಫೆ. 3– ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ಬಳಿ ಹೊಲದಲ್ಲಿ ಟ್ರ್ಯಾಕ್ಟರ್‌ನಿಂದ ಉಳುಮೆ ಮಾಡುವಾಗ ತೀರ್ಥಂಕರ ವಿಗ್ರಹ ದೊರೆತಿದೆ.

ಸರಗೂರಿನ ಸೋಮಪ್ರಭ, ಪುಟ್ಟರಾಜು, ಮೈಸೂರಿನ ಪ್ರಸನ್ನ ಕುಮಾರ್, ಶ್ರೀಮತಿ ನಾಗರತ್ನ ನಾಗರಾಜ್, ಚಂದ್ರ ಪ್ರಕಾಶ್ ಹಾಗೂ ಅನೇಕ ಜೈನ ಬಾಂಧವರು ಸ್ಥಳಕ್ಕೆ ಭೇಟಿ ನೀಡಿದರು.

ಸುಮಾರು 5 ಅಡಿ ಎತ್ತರ ಇರುವ ಜಿನಬಿಂಬದ ಎರಡು ಕಡೆ ಯಕ್ಷ ಯಕ್ಷಿಯ ಶಿಲ್ಪ ಇದೆ. ಆದರೆ ಲಾಂಛನ ಇಲ್ಲ. ಇದರಿಂದ ಯಾವ ತೀರ್ಥಂಕರ ವಿಗ್ರಹ ಎಂಬುದನ್ನು ಗುರುತಿಸಲಾಗಿಲ್ಲ. ಹೊಲದಲ್ಲಿ ಉಳುಮೆ ಕೆಲಸ ಮುಂದುವರೆಸುವುದರಿಂದ ಗ್ರಾಮದ ಯಜಮಾನರನ್ನು ಸಂಪರ್ಕಿಸಿ ಮುಖಂಡರೊಡನೆ ಸಮಾಲೋಚಿಸಿ ವಿಗ್ರಹವನ್ನು ಸಮೀಪದ ಕ್ಯಾತನಹಳ್ಳಿ ದೇವಸ್ಥಾನದಲ್ಲಿ ಸಂರಕ್ಷಿಸಲಾಗಿದೆ.

## ಕೇಂದ್ರದ ಬಜೆಟ್‌ನಲ್ಲಿ ಆಂಧ್ರ, ಬಿಹಾರಕ್ಕೆ ಬೆಣ್ಣೆ, ಕರ್ನಾಟಕಕ್ಕೆ ಸುಣ್ಣ



ಬಿ.ಸುಬ್ರಹ್ಮಣ್ಯ

ಮೈಸೂರು, ಫೆ. 3– ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಮತ್ತೆ ಬಿಹಾರ, ಆಂಧ್ರಪ್ರದೇಶಗಳಿಗೆ ಬೆಣ್ಣೆ ಕೊಟ್ಟು, ಕರ್ನಾಟಕದ ಕಣ್ಣಿಗೆ ಸುಣ್ಣ ಹಚ್ಚಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಅಸಮಾಧಾನ ಹೊರಹಾಕಿದ್ದಾರೆ.

ನಿರ್ಮಲಾ ಸೀತಾರಾಮನ್ ಅವರು 12 ಲಕ್ಷ ರೂ.ವರೆಗೆ ಟ್ಯಾಕ್ಸ್ ಕಟ್ಟುವಂತಿಲ್ಲ ಅಂತಾರೆ. ಆದರೆ, ಭಾರತದ 140 ಕೋಟಿ ಜನಸಂಖ್ಯೆಯಲ್ಲಿ ತೆರಿಗೆದಾರರು ಎಷ್ಟು ಜನ ಇದ್ದಾರೆ. ಈ ನಿಯಮ ಅನುಕೂಲ ಆಗುವುದು ತೆರಿಗೆದಾರರಿಗೆ ಮಾತ್ರ, ಇದು ಅಧಿವೇಶನದ ಬಳಿಕ ಟ್ಯಾಕ್ಸ್ ಸ್ಲ್ಯಾಬ್ ಘೋಷಣೆ ಮಾಡ್ತೀವಿ ಎಂದು ಹೇಳಿದ್ದಾರೆ. ಆ ನಂತರ ಏನು ಬೆಳವಣಿಗೆ ಆಗುತ್ತದೆ ಎಂಬುದನ್ನು ಕಾದುನೋಡಬೇಕಿದೆ. ಏಕೆಂದರೆ ಕೇಂದ್ರದ ಬಜೆಟ್ ಕೇವಲ ದೊಡ್ಡ ದೊಡ್ಡ ಘೋಷಣೆಗಳಿಗೆ ಮಾತ್ರ ಸೀಮಿತವಾಗುತ್ತಿದೆ. ಕಾರ್ಯರೂಪಕ್ಕೆ ಬರುವುದು ವಿರಳ ಎಂದು ಸುಬ್ರಹ್ಮಣ್ಯ ಅಸಮಾಧಾನ ಹೊರ ಹಾಕಿದ್ದಾರೆ.

2023ರ ಬಜೆಟ್‌ನಲ್ಲಿ ತುಂಗ ಭದ್ರಾ ಯೋಜನೆಗೆ 5,300 ಕೋಟಿ ರೂ. ಘೋಷಣೆ ಮಾಡಿದ್ದರು. ಈವರೆಗೆ ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ಇವರನ್ನು ನಂಬೋದು ಹೇಗೆ? ಕರ್ನಾಟಕಕ್ಕೆ ಈ ಬಜೆಟ್‌ನಲ್ಲಿ ಹೇಳುವಂತಹ ಯಾವುದೇ ಅನುಕೂಲವಾಗಿಲ್ಲ. ಕರ್ನಾಟಕದಿಂದ ಆಯ್ಕೆಯಾಗಿರುವ ಆಡಳಿತ ಪಕ್ಷದ ಸಂಸದರು ರಾಜ್ಯದ ಜನರ ನಿರೀಕ್ಷೆಗೆ ಅನುಗುಣವಾಗಿ ಅನುದಾನ ತರುವಲ್ಲಿ ಮತ್ತೆ ವಿಫಲವಾಗಿದ್ದಾರೆ. ಈ ಬಜೆಟ್‌ನಲ್ಲೂ ಬಿಜೆಪಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಬಿಹಾರ, ಆಂಧ್ರಪ್ರದೇಶಕ್ಕೆ ಬೆಣ್ಣೆ ಕೊಟ್ಟು, ಕರ್ನಾಟಕಕ್ಕೆ ಸುಣ್ಣ ಕೊಟ್ಟಿದೆ. ಅದರ ಬದಲು ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜಗಳಿಗೆ ಸಹಾಯಧನ ನೀಡಿದ್ದರೆ, 140 ಕೋಟಿ ಜನರಿಗೂ ಅನುಕೂಲವಾಗುತ್ತಿತ್ತು ಎಂದು ಸುಬ್ರಹ್ಮಣ್ಯ ಹೇಳಿದ್ದಾರೆ.

## 'ಗಾಂಧೀಮರ' ಕವನ ಸಂಕಲನ ಬಿಡುಗಡೆ




ಗಾಂಧೀಮರ' ಕವನ ಸಂಕಲನವನ್ನು ಸಾಹಿತಿ ಸಿಪಿಕೆ ಬಿಡುಗಡೆ ಗೊಳಿಸಿದರು.


ಮೈಸೂರು, ಫೆ. 3– ಮೈಸೂರಿನ ಕ್ರಿಯಾ ಅಭಿವ್ಯಕ್ತಿ ಸಾಂಸ್ಕೃತಿಕ ಘಟಕದ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ಹುತಾತ್ಮರಾದ ಸರ್ವೋದಯ ದಿನದ ಸಂದರ್ಭವನ್ನು ನೆನೆದು ಕವನ ಸಂಕಲನ ರೂಪದಲ್ಲಿ ಹೊರತಂದಿರುವ ಸಾಹಿತಿ ಡಾ.ನೀ.ಗೂ.ರಮೇಶ್‌ರವರ 'ಗಾಂಧೀಮರ' ಕವನ ಸಂಕಲನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಲೋಕಾರ್ಪಣೆಗೊಂಡಿತು.

ಗಾಂಧೀಮರ ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಖ್ಯಾತ ಕವಿ, ವಿಮರ್ಶಕರಾದ ಪ್ರೊ.ಸಿ.ಪಿ.ಕೃಷ್ಣ ಕುಮಾರ್ (ಸಿ.ಪಿ.ಕೆ), ಗಾಂಧೀ ಅವರು ಎಂದೆಂದಿಗೂ ಕಲಾತೀತರು. ಜನಪರ, ಜೀವಪರ ಕಾಳಜಿವುಳ್ಳ ಶಾಂತಿಪ್ರಿಯರಾಗಿದ್ದರು. ಸರ್ವೋದಯ ಮಂತ್ರ ಇಂದು ಗರ್ವೋದಯವಾಗಿದೆ ಅಧಿಕಾರದ ಅಮಲು ಎಲ್ಲೆಲ್ಲೂ ಕಾಣುತ್ತಿದ್ದೇವೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇತ್ತೀಚಿನ ದಿನಗಳಲ್ಲಿ ಓದುವವರ ಸಂಖ್ಯೆಗಿಂತ ಬರೆಯುವವರ ಸಂಖ್ಯೆಯೇ ಜಾಸ್ತಿ. ಕಾವ್ಯದ ಅವಲೋಕನಕ್ಕಿಂತ ಗದ್ಯದ ಬರವಣಿಗೆ ಹೆಚ್ಚುತ್ತಿರುವುದನ್ನು ಕಾಣಬಹುದಾಗಿದೆ ಎಂದರು.

ಗಾಂಧೀ ಆಶಯಗಳನ್ನು ಕುರಿತು ಗಾಂಧೀವಾದಿ ಹಾಗೂ ನಿವೃತ್ತ ಪ್ರಾಧ್ಯಾಪಕಿ ಎಚ್.ಜೆ.ಸರಸ್ವತಿ ಮಾತನಾಡಿದರು. ವೇದಿಕೆಯಲ್ಲಿ ಗಾಂಧೀಮರ ಕೃತಿಯ ಕರ್ತೃ ಡಾ.ನೀ.ಗೂ.ರಮೇಶ್ ಕೃತಿಕಾರರ ನುಡಿಗಳನ್ನಾಡಿದರು. ಸ್ಪಂದನ ಸಾಂಸ್ಕೃತಿಕ ಪರಿಷತ್‌ನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿ ಸ್ವಾಗತಿಸಿದರು. ಡಾ.ಆರ್.ಚಲಪತಿ, ಡಾ.ಶುಭಶ್ರೀ ಪ್ರಸಾದ್ ಕವಿತೆಗಳನ್ನು ವಾಚಿಸಿದರು. ಡಾ.ಜೆ.ಆರ್.ಪರಮೇಶ್, ಚಿಕ್ಕಮಳಲಿ ಆರ್.ಮಹದೇವ, ಶಭಾನ, ಉ.ಮ.ರೇವಣ್ಣ ಸಿಂಗಪುರ ಕವಿತೆಗಳ ಗಾಯನ ನಡೆಸಿಕೊಟ್ಟರು. ಕ್ರಿಯಾ ಅಭಿವ್ಯಕ್ತಿ ಸಂಸ್ಥೆಯ ಸಂಸ್ಥಾಪಕ ಹಾಗೂ ಲೇಖಕರು ಆದ ಪ್ರಸನ್ನಕುಮಾರ್ ಕೆರಗೂಡು ಉಪಸ್ಥಿತರಿದ್ದರು.

## ಮೈಸೂರಿನ ಇಬ್ಬರು ನಾಪತ್ತೆ






ಮೈಸೂರು,ಫೆ.3– 2023ನೇ ಇಸವಿ, ಮಾರ್ಚ್ 3ರಂದು ಸುಮಾರು 23 ವರ್ಷದ ರಾಕೇಶ್.ಬಿ ಎಂಬುವವರು ಕಾಣೆಯಾಗಿದ್ದು, ಮೈಸೂರು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 23 ವರ್ಷ ವಯಸ್ಸಾಗಿದ್ದು, 6 ಅಡಿ ಎತ್ತರ, ಕನ್ನಡ, ತೆಲುಗು, ಇಂಗ್ಲೀಷ್ ಭಾಷೆ ಮಾತನಾಡುತ್ತಾರೆ. ಕೋಲುಮುಖ, ಸಾಧಾರಣ ಮೈಕಟ್ಟು, ಕಪ್ಪು ತಲೆಗೂದಲು, ಹಣೆಯ ಮೇಲೆ ಗಾಯದ ಗುರುತು ಇರುತ್ತದೆ.

2021ನೇ ಸೆ.10 ರಂದು ಸುಮಾರು 53 ವರ್ಷದ ರಾಮೇಗೌಡ ಎಂಬುವವರು ಕಾಣೆಯಾಗಿದ್ದು, ಮೈಸೂರು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕನ್ನಡ ಭಾಷೆ ಮಾತ ನಾಡುತ್ತಾರೆ. ಸುಮಾರು 5.0 ಅಡಿ ಎತ್ತರ, ಕೋಲುಮುಖ, ಸಾಧಾರಣ ಮೈಕಟ್ಟು, ಕಪ್ಪು ಮೈಬಣ್ಣ, ಕಪ್ಪು ತಲೆ ಕೂದಲು ಇರುತ್ತದೆ.

ವ್ಯಕ್ತಿಗಳ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ದೂ.ಸಂ: 08212418324, 9480802247 ಅನ್ನು ಸಂಪರ್ಕಿಸಬಹುದು ಎಂದು ಕುವೆಂಪುನಗರ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ



ಕೆ.ಟಿ.ವಿಶ್ವೇಶ್ವರಯ್ಯ

ಮೈಸೂರು, ಫೆ. 3– ಮೈಸೂರಿನ ಶಕ್ತಿನಗರದ ಅಧ್ಯಯನ ಶಾಲೆ ಹತ್ತಿರದ ನಿವಾಸಿ ಹಾಗೂ ನಿವೃತ್ತ ಮೈಸೂರು ಕಾವಾ ಮ್ಯಾನೇಜರ್ ಕೆ.ಟಿ. ವಿಶ್ವೇಶ್ವರಯ್ಯ (69) ಅವರು ಹೃದಯ ಸಂಬಂಧಿ ಕಾಯಿಲೆಯಿಂದ ಸೋಮವಾರ ಬೆಳಗ್ಗೆ ಮೈಸೂರಿನ ನಾರಾಯಣ ಹೃದಯಾಲಯದಲ್ಲಿ ನಿಧನರಾದರು.

ಮೃತರು ಪತ್ನಿ ಶ್ರೀಮತಿ ಪದ್ಮಾವತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಾಳೆ (ಮಂಗಳವಾರ) ಬೆಳಿಗ್ಗೆ 10.30 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರಘಾಟ್‌ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಫೆ.12–14ರವರೆಗೆ ಜಾಗತಿಕ ಹೂಡಿಕೆದಾರರ ಸಮಾವೇಶ

## 10 ಲಕ್ಷ ಕೋಟಿ ರೂ. ಹೂಡಿಕೆ ಗುರಿ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್



ಫೆಬ್ರವರಿ 12ರಿಂದ 14ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶ ಸಂಬಂಧ ಡಿಸಿಎಂ ಡಿ.ಕೆ.ಶಿವಕುಮಾರ್ ಉನ್ನತ ಮಟ್ಟದ ಸಮಿತಿ ಸಭೆ ನಡೆಸಿದರು.

ಬೆಂಗಳೂರು, ಫೆ.3– ಫೆಬ್ರವರಿ 12ರಿಂದ 14ರವರೆಗೆ ಇಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಸಕಲ ಸಿದ್ಧತೆಗಳೂ ಮುಗಿದಿದ್ದು, 10 ಲಕ್ಷ ಕೋಟಿ ರೂ. ಹೂಡಿಕೆ ಆಕರ್ಷಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಫೆ.11ರ ಸಂಜೆಯೇ ಸಮಾವೇಶವನ್ನು ಉದ್ಘಾಟಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸಮಾವೇಶದ ಸಿದ್ಧತೆ ಮತ್ತು ನಾನಾ ಇಲಾಖೆಗಳ ನಡುವಿನ ಸಮನ್ವಯಕ್ಕೆ ಸಂಬಂಧಿಸಿದಂತೆ ತಮ್ಮ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ನಡೆದ ಉನ್ನತ ಮಟ್ಟದ ಸಮಿತಿಯ ಸಭೆಯಲ್ಲಿ ಅವರು ಮಾತನಾಡಿದರು. ಸಭೆಯಲ್ಲಿ ಬೃಹತ್–ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಉಪಸ್ಥಿತರಿದ್ದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವ ಕುಮಾರ್ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಿದರು.

ಈಗಾಗಲೇ 2,000ಕ್ಕೂ ಹೆಚ್ಚು ಹೂಡಿಕೆದಾರರು ಸಮಾವೇಶದಲ್ಲಿ ಪಾಲ್ಗೊಳ್ಳಲು ಆಸಕ್ತಿ ತೋರಿ, ನೋಂದಾಯಿಸಿಕೊಂಡಿದ್ದಾರೆ. ಸಮಾವೇಶದಲ್ಲಿ 18 ದೇಶಗಳು ಪಾಲ್ಗೊಳ್ಳುತ್ತಿದ್ದು, ಈ ಪೈಕಿ 9 ದೇಶಗಳು ಪ್ರತ್ಯೇಕ ಪೆವಿಲಿಯನ್ ಹೊಂದಿರಲಿವೆ. ಈ ಸಂದರ್ಭದಲ್ಲಿ 60ಕ್ಕೂ ಹೆಚ್ಚು ಉದ್ಯಮ ಪರಿಣತರು ಗೋಷ್ಠಿಗಳಲ್ಲಿ ಮಾತನಾಡಲಿದ್ದಾರೆ. ಜೊತೆಗೆ ಸರ್ಕಾರವು ರಾಜ್ಯದಲ್ಲಿ ಹೂಡಿಕೆಗೆ ಇರುವ ಪ್ರಶಸ್ತ ಅವಕಾಶಗಳನ್ನು ಮತ್ತು ನಮ್ಮಲ್ಲಿರುವ ಉದ್ಯಮ ಸ್ನೇಹಿ ನೀತಿ ಹಾಗೂ ಪ್ರೋತ್ಸಾಹಕ ಕ್ರಮಗಳನ್ನು ಹೂಡಿಕೆದಾರರಿಗೆ ಮನವರಿಕೆ ಮಾಡಿಕೊಡಲಿದೆ ಎಂದು ಹೇಳಿದ್ದಾರೆ.

ಈ ಸಮಾವೇಶಕ್ಕೆ ಎಂ.ಬಿ.ಪಾಟೀಲರು ಕಳೆದ ಕೆಲವು ತಿಂಗಳುಗಳಿಂದಲೇ ಶ್ರಮಿಸುತ್ತಿದ್ದಾರೆ. ಇದರ ಭಾಗವಾಗಿ ಅಮೆರಿಕ, ಯೂರೋಪ್, ದಕ್ಷಿಣ ಕೊರಿಯಾ, ಜಪಾನ್ ದೇಶಗಳಲ್ಲಿ ಅವರು ಉನ್ನತ ಮಟ್ಟದ ನಿಯೋಗದೊಂದಿಗೆ ತೆರಳಿ ರೋಡ್–ಶೋ ಮತ್ತು ಹೂಡಿಕೆದಾರರ ಜೊತೆ ಮಾತುಕತೆಗಳನ್ನು ನಡೆಸಿದ್ದಾರೆ. ಸಮಾವೇಶದಲ್ಲಿ ಕೈಗಾರಿಕಾ ಬೆಳವಣಿಗೆಗೆ ಪೂರಕವಾದ ಇನ್ನೂ ಹಲವು ನೀತಿಗಳನ್ನು ಅನಾವರಣಗೊಳಿಸಲಾಗುವುದು ಎಂದು ವಿವರಿಸಿದ್ದಾರೆ.

> ಸಮಾವೇಶದಲ್ಲಿ ರಫ್ತಿಗೆ ಉತ್ತೇಜನ ನೀಡುವಂತಹ 2025–30ರವರೆಗಿನ ಐದು ವರ್ಷಗಳ ನೂತನ ಕೈಗಾರಿಕಾ ನೀತಿಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದರಲ್ಲಿ ಡಾ.ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ಮತ್ತು ಅತೀ ಹಿಂದುಳಿದ ಜಿಲ್ಲೆಗಳಲ್ಲಿ ಹೂಡಿಕೆ ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. ಸುಲಲಿತ ವಹಿವಾಟು ಸಂಸ್ಕೃತಿ ಮತ್ತು ಏಕಗವಾಕ್ಷಿ ವ್ಯವಸ್ಥೆಗೆ ಕೂಡ ಚಾಲನೆ ನೀಡಲಾಗುವುದು. ಬಹುತೇಕ ಜಾಗತಿಕ ಮಟ್ಟದ ಕಂಪನಿಗಳೆಲ್ಲವೂ ಬೆಂಗಳೂರಿನಲ್ಲಿ ಆರ್ & ಡಿ ಕೇಂದ್ರಗಳನ್ನು ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜಿಸಿಸಿ) ಹೊಂದಿವೆ. ಆದ್ದರಿಂದ ಸ್ಥಳೀಯ ಮಟ್ಟದಲ್ಲೇ ಉತ್ಪಾದನೆಯೂ ಆಗುವಂತೆ ನೋಡಿಕೊಳ್ಳಲು ಸರಕಾರ ಉಪಕ್ರಮಗಳನ್ನು ತೆಗೆದುಕೊಳ್ಳಲಿದೆ. ಪರಿಸರಸ್ನೇಹಿ ಇಂಧನ ಮತ್ತು ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಗೂ ಗಮನಹರಿಸಲಾಗುವುದು. **–ಎಂ.ಬಿ.ಪಾಟೀಲ್, ಸಚಿವ**

**ಪ್ರಗತಿಯ ಮರುಕಲ್ಪನೆ ಥೀಮ್:** ಜಾಗತಿಕ ಹೂಡಿಕೆದಾರರ ಸಮಾವೇಶವು 'ಪ್ರಗತಿಯ ಮರುಕಲ್ಪನೆ' ಎನ್ನುವ ಪ್ರಧಾನ ಥೀಮ್ ಒಳಗೊಂಡಿದ್ದು, ತಂತ್ರಜ್ಞಾನ–ಚಾಲಿತ, ಪರಿಸರಸ್ನೇಹಿ, ಒಳಗೊಳ್ಳುವಿಕೆ ಮತ್ತು ಕ್ಷಮತೆ (Tech-driven, Green, Inclusive & Resilient) ಎನ್ನುವ ನಾಲ್ಕು ಉಪ ಆಶಯಗಳನ್ನು ಹೊಂದಿದೆ. ದಾವೋಸ್ ಆರ್ಥಿಕ ಶೃಂಗಸಭೆಯಲ್ಲಿನ ಕೆಲವು ಅತ್ಯುತ್ತಮ ಅಂಶಗಳನ್ನೂ ಇಲ್ಲಿ ಅಳವಡಿಸಿಕೊಂಡಿದ್ದೇವೆ. ಅಂತಿಮ ಹಾಕುವ ಒಡಂಬಡಿಕೆಗಳ ಪೈಕಿ ಶೇಕಡ 70–80ರಷ್ಟಾದರೂ ನಿಜವಾದ ಹೂಡಿಕೆಯಾಗಿ ಪರಿವರ್ತನೆಯಾಗಬೇಕು ಎನ್ನುವುದು ಸರಕಾರದ ಗುರಿಯಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

## ಹರಿಗಿರಿ ಸೇವಾ ಟ್ರಸ್ಟ್‌ನ ಭೂಮಿ ಕಬಳಿಕೆ ಯತ್ನ: ಹರಿಹರ ಆನಂದಸ್ವಾಮಿ ಆರೋಪ

ಮೈಸೂರು,ಫೆ.3(ಎಂಟಿವೈ)– ಮೈಸೂರು ತಾಲೂಕಿನ ಕಸಬಾ ಹೋಬಳಿ ಬೋಗಾದಿ ಗ್ರಾಮದ ಹರಿಗಿರಿ ಸೇವಾ ಪ್ರತಿಷ್ಠಾನಕ್ಕೆ ಸೇರಿದ ಜಮೀನನ್ನು ಭೂಮಾಫೀಯಾದ ಕೈವಾಡದಿಂದ ವ್ಯಕ್ತಿಯೊಬ್ಬರು ಕಬಳಿಸಲು ಮುಂದಾಗಿದ್ದಾರೆ ಎಂದು ಮುಖಂಡ ಹರಿಹರ ಆನಂದಸ್ವಾಮಿ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 35 ವರ್ಷದ ಹಿಂದೆ ಹರಿಗಿರಿ ಸೇವಾ ಪ್ರತಿಷ್ಠಾನಕ್ಕೆ ಸರ್ಕಾರ ಜಿಲ್ಲಾಧಿಕಾರಿಗಳ ಮೂಲಕ 25 ಗುಂಟೆ ಜಮೀನು ಮಂಜೂರು ಮಾಡಿತ್ತು. ಈ ಭೂಮಿಗೆ ಅಂದಿನಿಂದಲೂ ಹರಿಗಿರಿ ಸೇವಾ ಪ್ರತಿಷ್ಠಾನವು ಕಂದಾಯ ಕಟ್ಟಿಕೊಂಡು ಬಂದಿದೆ. ಆದರೆ, ಭೂಮಾಫಿಯಾ, ಈ ಜಾಗಕ್ಕೆ ಕಾಂಪೌಂಡ್ ನಿರ್ಮಿಸಲು ಆಗಾಗ್ಗೆ ಅಡ್ಡಿಯುಂಟು ಮಾಡುತ್ತ, ಜಾತಿ ಸಂಘರ್ಷಕ್ಕೆ ಕಾರಣರಾಗುತ್ತಿದ್ದಾರೆ. ಗ್ರಾಮದಲ್ಲಿ ಎಲ್ಲ ಸಮುದಾಯದವರು ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಆದರೆ ರವಿ ಎಂಬ ಓರ್ವ ವ್ಯಕ್ತಿ ಆಗಾಗ್ಗೆ ಜಾಗಕ್ಕೆ ಸಂಬಂಧಿಸಿದಂತೆ ಕಿರುಕುಳ ನೀಡುತ್ತಿದ್ದಾರೆ ಇದರಿಂದ ಸಾಮರಸ್ಯ ಕದಡುತ್ತಿದೆ ಎಂದು ಆರೋಪಿಸಿದರು.

ಫೆ.2ರಂದು ಪೊಲೀಸರ ರಕ್ಷಣೆ ಕೋರಿ, ಇಲಾಖೆಗೆ ಅದರ ಹಣವನ್ನೂ ಪಾವತಿಸಿ ಕಾಂಪೌಂಡ್ ನಿರ್ಮಿಸುವ ಕಾರ್ಯ ಆರಂಭಿಸುತ್ತಿದ್ದಂತೆಯೇ ಗಾಂಜಾ ಸೇವಿಸಿದ್ದ ಕೆಲ ಯುವಕರ ಗುಂಪು ಗಲಾಟೆ ಮಾಡಿದೆ. ಸ್ಥಳದಲ್ಲಿದ್ದ ಬೆರಳೆಣಿಕೆಯಷ್ಟೇ ಪೊಲೀಸರು ದಾಂಧಲೆ ಮಾಡಲು ಮುಂದಾದ ಗುಂಪನ್ನು ಚದುರಿಸಲು ವಿಫಲವಾಗಿದ್ದಾರೆ.

ಎಲ್ಲ ದಾಖಲಾತಿಗಳು ಟ್ರಸ್ಟ್ ಪರವಾಗಿಯೇ ಇರುವುದನ್ನು ಮೇಲಾಧಿಕಾರಿಗಳು ಗಮನಿಸಿದ್ದಾರೆ. ಹೀಗಿದ್ದರೂ ತೊಂದರೆ ನೀಡುವ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸುತ್ತಿಲ್ಲ. ಆತನ ಪ್ರಚೋದನೆ ಯಿಂದ ಗ್ರಾಮದಲ್ಲಿ ಜಾತಿ ಸಂಘರ್ಷ ಉಂಟಾದರೆ ಅದಕ್ಕೆ ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತವೇ ಕಾರಣ. ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಸ್ಥಳದಲ್ಲಿ ಧರಣಿ ನಡೆಲಾಗುತ್ತಿದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸೋಮಯ್ಯ ಮಲೆಯೂರು, ನಂಜುಂಡಸ್ವಾಮಿ, ನಾಗರಾಜ, ಚೋರನಹಳ್ಳಿ ಶಿವಣ್ಣ ಇದ್ದರು.

## ಚೇತನೋತ್ಸವ; ಶಾಸ್ತ್ರೀಯ ನೃತ್ಯಗಳ ಉತ್ಸವ, ವಸಂತ ಪಂಚಮಿ ಹಬ್ಬ

### ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್‌ನಿಂದ ಕಾರ್ಯಕ್ರಮ



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಏರ್ಪಡಿಸಿದ್ದ ಚೇತನೋತ್ಸವಕ್ಕೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಚಾಲನೆ ನೀಡಿದರು. ಪಿ.ಎಂ.ರಾಧಾಕೃಷ್ಣ, ಎಸ್‌ಬಿಎಂ ಮಂಜು, ಅನಿತಾ ಸದಾನಂದ ಶುಕ್ಲಾ, ಡಾ.ಚೇತನಾ ರಾಧಾಕೃಷ್ಣ ಇದ್ದರು.

ಮೈಸೂರು,ಫೆ.3–ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ನಗರದ ಜಗನ್ಮೋಹನ ಅರಮನೆಯಲ್ಲಿ ಚೇತನೋತ್ಸವ– ಶಾಸ್ತ್ರೀಯ ನೃತ್ಯಗಳ ಉತ್ಸವ ಹಾಗೂ ವಸಂತ ಪಂಚಮಿ ಹಬ್ಬ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಯುವಪ್ರತಿಭೆಗಳ ಪ್ರೋತ್ಸಾಹಕ್ಕೆ ಅಕಾಡೆಮಿಯು ವೇದಿಕೆ ಒದಗಿಸಿದೆ. ಇದನ್ನು ಸದುಪಯೋಗ ಮಾಡಿಕೊಂಡು ಪ್ರತಿಭೆ ಅನಾವರಣ ಮಾಡಬೇಕು. ಪೋಷಕರು ಕೂಡ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಉತ್ತೇಜನ ನೀಡಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಮಮ್ಮಿ ಮಿಲ್ ಫುಡ್ಸ್‌ನ ಸಂಸ್ಥಾಪಕ ನಿರ್ದೇಶಕಿ ಅನಿತಾ ಸದಾನಂದ ಶುಕ್ಲಾ ಮಾತನಾಡಿ, ಚೇತನಾ ರಾಧಾಕೃಷ್ಣ ಅವರು ಮಕ್ಕಳಿಗೆ ಅತ್ಯುತ್ತಮವಾಗಿ ಭರತನಾಟ್ಯ ಕಲಿಸುತ್ತಾರೆ. ಅವರ ಶಿಷ್ಯಂದಿರು ದೇಶ–ವಿದೇಶಗಳಲ್ಲಿ ಇದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಮಾತನಾಡಿ, ಭರತನಾಟ್ಯದಲ್ಲಿ ವಿವಿಧ ಆಂಗಿಕ ಕಸರತ್ತು ಪ್ರದರ್ಶಿಸುವುದರಿಂದ ದೈಹಿಕ ಸದೃಢತೆ ಜೊತೆಗೆ ಏಕಾಗ್ರತೆಯೂ ಮೂಡುತ್ತದೆ. ಎಂದರು.

ಅಕಾಡೆಮಿ ಸಂಸ್ಥಾಪಕಿ ಡಾ.ಚೇತನಾ ರಾಧಾಕೃಷ್ಣ ಪ್ರಾಸ್ತಾವಿಕ ಮಾತನಾಡಿ, ಅಕಾಡೆಮಿಯು ಪ್ರತಿ ವರ್ಷ ಮೈಸೂರು ಹಾಗೂ ಮಂಡ್ಯದಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬರುತ್ತಿದೆ. ಮಕ್ಕಳ ಪ್ರತಿಭೆಗೆ ವೇದಿಕೆ ಒದಗಿಸುವುದರ ಜೊತೆಗೆ ಗುರುವಿಗೆ ಶಿಷ್ಯರು ಗುರು ವಂದನೆ ಸಲ್ಲಿಸುವ ಸಂಪ್ರದಾಯಕ್ಕೂ ಅವಕಾಶ ಮಾಡಿಕೊಡಲಾಗುತ್ತಿದೆ ಎಂದರು.

ಅಕಾಡೆಮಿ ವ್ಯವಸ್ಥಾಪಕ ನಿರ್ದೇಶಕ ಪಿ.ಎಂ.ರಾಧಾಕೃಷ್ಣ ಇದ್ದರು. ರಾಜನ್ ನಿರೂಪಿಸಿದರು. ವಿದಾತ್ರಿ ಪ್ರಾರ್ಥಿಸಿದರು.


**ಭರತನಾಟ್ಯ ಪ್ರಸ್ತುತಿ:** ದಿಶಾ ವಿಶ್ವನಾಥ ಪಾಟೀಲ, ಎಸ್.ಕನಿಷ್ಕ, ಎಂ.ಕುಸುಮಿತಾ, ಎಂ.ವಿದುಲಾ, ನಿತ್ಯಪುಷ್ಪಾ ವಿಶ್ವನಾಥ್, ಪಿ.ಪ್ರಣವಿ, ಪಿ.ರುಚಿತಾ, ಚರಿಷ್ಮಾ ದೀಪಕ್, ಓ.ದಾತ್ರಿ, ಸಿದ್ಧಿ ಸಂಕಲ್ಪ, ಧೈರ್ಯ ಚಂದೋರ್ಕರ್, ವಿ.ಮನಸ್ವಿನಿ, ಪಿ.ವಿ.ಐಶ್ವರ್ಯ, ವಿ.ಐಶ್ವರ್ಯ, ಎಸ್.ಹಾಸಿನಿ, ಎಸ್.ಅದಿತಿ, ಸಾನ್ವಿ ದೇಸಾಯಿ, ಎನ್.ಹನ್ಸಿಕಾ, ಶಾರ್ವರಿ ಅಜೇಯ ಕುಲಕರ್ಣಿ, ಮಹಿಮಾ ಭಟ್, ರಿಧಿ ರಾಜೇಶ್, ಸಹನಾ ಭಟ್, ಡಿ.ಹಿತಾ, ಎಂ.ಬಿ.ದೀಕ್ಷು, ಆರಾಧನಾ ಪ್ರದೀಪ, ಪಿ.ಯಾದವಿ ಕೃಷ್ಣ, ಜಿ. ಪ್ರಜ್ಞಾ ಭರತನಾಟ್ಯ ಪ್ರಸ್ತುತಪಡಿಸಿ, ಮನರಂಜಿಸಿದರು. ಎಂ.ಎಲ್.ರಾಜನ್, ಕೇರಳದ ನಾರಾಯಣ ಮತ್ತು ತಂಡ, ಜನಾರ್ಧನ್, ನವನೀತ್ ಪ್ರಸಾದ್, ಎಸ್.ಕಿರಣ್, ನಮ್ರತಾ ಕೇಶವ್, ಎಲ್.ಕೆ.ಆಚಾರ್ಯ ಇನ್ನಿತರರು ಇದ್ದರು.

## ಫೆ.10ರಂದು ಕಾಯಕ ಶರಣರ ಜಯಂತಿ

ಮೈಸೂರು,ಫೆ. 3–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಾಯಕ ಶರಣರ ಜಯಂತಿಯನ್ನು ಫೆ.10 ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದ ರಾಮಯ್ಯ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಹೆಚ್.ಡಿ ಕೋಟೆ ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**4.02.2025 ಮಂಗಳವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025**
**ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,**
**ತಿಥಿ: ಷಷ್ಠಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ಗಂಟೆಗೆ ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತ ಪಿತ್ತ) ಚಿಕಿತ್ಸಾ ಶಿಬಿರ; ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಮೈಸೂರು ಯೋಗ ಅಸೋಸಿಯೇಷನ್, ಶ್ರೀ ರಾಮಕೃಷ್ಣ ಸೇವಾ ಪ್ರತಿಷ್ಠಾನ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ :** ರಥಸಪ್ತಮಿ ಪ್ರಯುಕ್ತ ಸಾಮೂಹಿಕ 108 ಸೂರ್ಯ ನಮಸ್ಕಾರಗಳು ಹಾಗೂ ಸೂರ್ಯ ಯಜ್ಞ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಸೂರ್ಯ ಭಗವಾನರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಹಿರಿಯ ಯೋಗಾಚಾರ್ಯ ಬಿ.ಎನ್.ಎಸ್. ಅಯ್ಯಂಗಾರ್, ಪ್ರಾಸ್ತಾವಿಕ ನುಡಿ : ಅಸೋಸಿಯೇಷನ್ ಅಧ್ಯಕ್ಷ ಡಾ.ಸಿ. ರಮೇಶ್ ಶೆಟ್ಟಿ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಪ್ರತಿಷ್ಠಾನ ಅಧ್ಯಕ್ಷ ಡಿ. ಮಾದೇಗೌಡ, ಕಿರು ಹೊತ್ತಿಗೆ ಬಿಡುಗಡೆ: ಪ್ರಮತಿ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಎಚ್.ವಿ. ರಾಜೀವ್, ಸ್ಥಳ: ಶ್ರೀ ರಾಮಕೃಷ್ಣ ಪರಮಹಂಸರ ಪುತ್ಥಳಿ ಎದುರು, ರಾಮಕೃಷ್ಣನಗರ, ಬೆಳಗ್ಗೆ 5.30ಕ್ಕೆ.

■ **ಮೈಸೂರು ಯೋಗ ಒಕ್ಕೂಟ :** ವಾರ್ಷಿಕೋತ್ಸವ ಮತ್ತು ರಥಸಪ್ತಮಿ ಪ್ರಯುಕ್ತ ಸಾಮೂಹಿಕ 108 ಸೂರ್ಯ ನಮಸ್ಕಾರ, ಸೂರ್ಯ ಯಜ್ಞ ಕಾರ್ಯಕ್ರಮ, ಉದ್ಘಾಟನೆ : ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಮಣ್ಯ, ಅಧ್ಯಕ್ಷತೆ : ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್. ಚಂದ್ರಶೇಖರ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 5.45ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಓಡಿಪಿ :** ಕ್ಯಾನ್ಸರ್ ದಿನದ ಅಂಗವಾಗಿ ಕ್ಯಾನ್ಸರ್ ರೋಗಿಗಳಿಗೆ ಸಹಾಯಹಸ್ತ ಕಾರ್ಯಕ್ರಮ, ಅಧ್ಯಕ್ಷತೆ: ಫಾ. ಅಲ್ಫ್ರೆಡ್ ಮೆಂಡೊನ್ಸ, ಉದ್ಘಾಟನೆ : ಎಡ್ವರ್ಡ್ ಸಲ್ಡಾನಾ, ಮುಖ್ಯ ಅತಿಥಿಗಳು : ಡಾ. ನಿಶ್ಚಲ್‌ರಾಜ್, ಶ್ರೀಮತಿ ಲತಾಕೃಷ್ಣ, ಸ್ಥಳ: ಓಡಿಪಿ ಸಂಸ್ಥೆ, ಬೆಳಗ್ಗೆ 10.30ಕ್ಕೆ.

■ **ಸಂತ ಫಿಲೋಮಿನಾ ಕಾಲೇಜು, ಕನ್ನಡ ವಿಭಾಗ, ನವಕರ್ನಾಟಕ ಪ್ರಕಾಶನ :** ಬೃಹತ್ ಪುಸ್ತಕ ಪ್ರದರ್ಶನ, ಉದ್ಘಾಟನೆ : ಸಂತ ಫಿಲೋಮಿನಾ ಕಾಲೇಜು ರೆಕ್ಟರ್ ರೆ.ಫಾ. ಡಾ.ಲೂರ್ದ್ ಪ್ರಸಾದ್ ಜೋಸೆಫ್, ಕೃತಿಗಳ ಲೋಕಾರ್ಪಣೆ : ಲೇಖಕ ಅಬ್ದುಲ್ ರಶೀದ್, ಅಧ್ಯಕ್ಷತೆ : ಸಂತ ಫಿಲೋಮಿನಾ ಕಾಲೇಜು ಪ್ರಿನ್ಸಿಪಾಲ್ ಡಾ.ರವಿ ಜೆ.ಡಿ.ಸಲ್ಡಾನ್ಹಾ, ಉಪಸ್ಥಿತರು : ನವಕರ್ನಾಟಕ ಪ್ರಕಾಶನ ವ್ಯವಸ್ಥಾಪಕ ಎನ್.ಕೆ. ಸತ್ಯನಾರಾಯಣ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಎ.ಟಿ. ಸದೆಬೋಸ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ದೀಪಿಕಾ ಪಾಂಡುರಂಗಿ, ಎಸ್. ಸಂಗೀತಾ, ಜಯಂತಿ. ವಿ. ಭಟ್, ವ್ಯಾಖ್ಯಾನ–ಡಾ. ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್.ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 8.30 ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿ.ಎಸ್.ಕೇಶವಚಂದ್ರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್. ಎಂ.ಎಸ್.

**ಮಧ್ಯಾಹ್ನ:** 12.05 ವನಿತಾ ವಿಹಾರ–ಸಾಧಕಿಯರೊಂದಿಗೆ ಸಂವಾದ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ. ಪುಷ್ಪಾವತಿ. ಎಂ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಕೀರ್ತನ. ವಿ., 12.35 ದೇವರನಾಮ, 12.45 ಯಾರು ಕಾಣದ ಪ್ರವಾಸ ತಾಣ–ಮಂಡ್ಯ ಜಿಲ್ಲೆ ಹುಲಿಕೆರೆಯ ಸುರಂಗನಾಲೆಯನ್ನು ಪರಿಚಯಿಸುತ್ತಾರೆ ಸಿರಿ ಮೈಸೂರು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಸರ್ವರಿಗೂ ಸೂರು ಯೋಜನೆ ಕುರಿತು ಪ್ರದೀಪ್ ಅವರಿಂದ ಮಾಹಿತಿ, 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು. ಎಂ. ನಾಗರಾಜ್, 4.00 ಕಥಾ ಕಾಲಕ್ಷೇಪ–ಸಂಪೂರ್ಣ ರಾಮಾಯಣ–ಯುದ್ಧ ಕಾಂಡ, ಪ್ರಸ್ತುತಿ: ವಿದ್ವಾನ್. ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ಕೃಷಿ ತಾಂತ್ರಿಕತೆ ಹಾಗೂ ವಿಸ್ತರಣಾ ತಂತ್ರಜ್ಞಾನಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ–ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ನಿರ್ದೇಶಕರಾದ ಡಾ.ಎಸ್. ಗಾಂಧಿದಾಸ್, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಸಂಸದ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಪಂ.ಕಾರ್ತಿಕ್ ಕುಮಾರ್–ಸಿತಾರ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು. ಎಸ್. ರಾಜಲಕ್ಷ್ಮಿ –ವೀಣಾ ವಾದನ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜ ಆರಾಧನೆ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ದಿಲೀಪ್ ಸಿಂಹ ಅವರಿಂದ ಗಾಯನ, ಸಹಕಾರ : ವಿದುಷಿ ಸಿ.ವಿ. ಶ್ರುತಿ, ವಿದ್ವಾನ್ ದೀಪಿಕಾ ಶ್ರೀನಿವಾಸನ್, ವಿದ್ವಾನ್ ಕೆ.ಎಂ. ಲಿಖಿತ್, ಸ್ಥಳ: ಶ್ರೀ ಕೃಷ್ಣ ಗಾನಸಭಾ, ಶ್ರೀ ಕೃಷ್ಣ ಮಂದಿರ, 3ನೇ ಹಂತ, ಗೋಕುಲಂ, ಸಂಜೆ 6 ರಿಂದ 8.30 ರವರೆಗೆ.

### ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

■ **ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು (ಹೆಚ್.ಡಿ. ಕೋಟೆ) :** 23ನೇ ವಾರ್ಷಿಕ ವಿಶೇಷ ಶಿಬಿರ–2024–25, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 7ಕ್ಕೆ ಸರಳ ವ್ಯಾಯಾಮ, ಬೆಳಗ್ಗೆ 8.30 ರಿಂದ ಶ್ರಮದಾನ, ಗ್ರಾಮ ಸಮೀಕ್ಷೆ, ಸಂಜೆ 4ಕ್ಕೆ ಉಪನ್ಯಾಸ, ಅಧ್ಯಕ್ಷೆ : ಕಾಲೇಜು ಪ್ರಿನ್ಸಿಪಾಲ್ ಡಾ. ಜೆ.ಎನ್. ವೆಂಕಟೇಶ್, ಉಪಸ್ಥಿತರು : ನಿವೃತ್ತ ಪ್ರಾಧ್ಯಾಪಕ ಪ್ರೊ. ಚಂದ್ರೇಗೌಡ, ಸ್ಥಳ: ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

# ಪಾಲಿಕೆ ನೂತನ ಆಯುಕ್ತರ ದಿಢೀರ್ ನಗರ ಪ್ರದಕ್ಷಿಣೆ

ಮೈಸೂರು, ಫೆ.3(ಆರ್‌ಕೆ)–ಇತ್ತೀಚೆಗೆ ಮೈಸೂರು ಮಹಾನಗರಪಾಲಿಕೆ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಐಎಎಸ್ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಇಂದು ವಿವಿಧ ವಾರ್ಡ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜನವರಿ 27ರಂದು ಅಧಿಕಾರ ವಹಿಸಿಕೊಂಡ ನಂತರ ಕಚೇರಿಯ ಇಂಜಿನಿಯರಿಂಗ್, ಆರೋಗ್ಯ, ವಾಹನ, ಕಂಪ್ಯೂಟರ್, ರೆವಿನ್ಯೂ ಸೇರಿದಂತೆ ವಿವಿಧ ಶಾಖೆಗಳಿಗೆ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳು, ಸಿಬ್ಬಂದಿ ಕಾರ್ಯವೈಖರಿ ಹಾಗೂ ಕಾರ್ಯವೈಖರಿ ಬಗ್ಗೆ ಮಾಹಿತಿ ಪಡೆದುಕೊಂಡ ಶೇಖ್ ತನ್ವೀರ್ ಆಸಿಫ್, ಅಂದೇ ಪಾಲಿಕೆಯ ಎರಡು ವಲಯ ಕಚೇರಿಗಳಿಗೂ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಮರುದಿನದಿಂದ ನಿತ್ಯವೂ ನಾಲ್ಕೈದು ವಾರ್ಡ್‌ಗಳಿಗೆ ಭೇಟಿ ನೀಡಿ ಅಲ್ಲಿನ ಸ್ವಚ್ಛತೆ, ಕಸ ಸಂಗ್ರಹಣೆ, ವಿಲೇವಾರಿ, ಕುಡಿಯುವ ನೀರಿನ ಸರಬರಾಜು, ಪಾರ್ಕ್ ನಿರ್ವಹಣೆ, ಒಳಚರಂಡಿ ವ್ಯವಸ್ಥೆ, ಬೀದಿದೀಪ ಹಾಗೂ ಪ್ರಗತಿಯಲ್ಲಿರುವ ಸಿವಿಲ್ ಕಾಮಗಾರಿಗಳನ್ನು ಪರಿಶೀಲಿಸುವ ಕಾರ್ಯ ಆರಂಭಿಸಿದ್ದಾರೆ. ಅದೇ ರೀತಿ ಇಂದೂ ಇಂಜಿನಿಯರಿಂಗ್ ಶಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಮೈಸೂರಿನ ಮಹಾತ್ಮ ಗಾಂಧಿ ರಸ್ತೆ, ಗುಂಡೂರಾವ್‌ನಗರ, ಅಗ್ರಹಾರ, ಚಾಮುಂಡಿಪುರಂ ಹಾಗೂ ಸುತ್ತಲಿನ ವಾರ್ಡ್‌ಗಳಿಗೆ ಭೇಟಿ ನೀಡಿ, ರಸ್ತೆಬದಿ ಕಸ ಸುರಿಯುತ್ತಿರುವುದು, ಒಳಚರಂಡಿ ಅವ್ಯವಸ್ಥೆ ಬಗ್ಗೆ



ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಸೋಮವಾರ ಮೈಸೂರು ನಗರದಾದ್ಯಂತ ಪ್ರದಕ್ಷಿಣೆ ನಡೆಸಿ ಪರಿಶೀಲಿಸಿದರು. ಉಪಆಯುಕ್ತ (ಅಭಿವೃದ್ಧಿ) ಕೆ.ಜೆ.ಸಿಂಧು, ಎಕ್ಸಿಕ್ಯೂಟಿವ್ ಇಂಜನಿಯರ್ ಮಹೇಶ್ ಹಾಗೂ ಇತರರು ಈ ವೇಳೆ ಉಪಸ್ಥಿತರಿದ್ದರು.

ಪರಿಶೀಲಿಸಿದಾಗ ರಾತ್ರಿ ವೇಳೆ ಸಾರ್ವಜನಿಕರು ಕಸ ತಂದು ಬಿಸಾಡುತ್ತಿರುವುದು ಕಂಡುಬಂದಿತು.

ಪಾಲಿಕೆ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡದೆ ಕೇವಲ ಇಂಜಿನಿಯರ್‌ಗಳ ಜೊತೆ ಮುಂಜಾನೆ ರೌಂಡ್ಸ್ ಮಾಡಿದ ಆಯುಕ್ತ ವಾರ್ಡ್‌ಗಳಲ್ಲಿ ಕಸ ಬಿದ್ದಿರುವುದನ್ನು ಫೋಟೋ ತೆಗೆದು ಸ್ಥಳದ ಮಾಹಿತಿಯೊಂದಿಗೆ ಆರೋಗ್ಯ ಶಾಖೆ ಅಧಿಕಾರಿಗಳಿಗೆ ರವಾನಿಸಿ ಈ ಪರಿಪಾಠ ಹಲವು ದಿನಗಳಿಂದ ನಡೆಯುತ್ತಿದ್ದರೂ ತಾವು ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು. ಅಲ್ಲದೆ ಪ್ಲಾಸ್ಟಿಕ್ ನಿಷೇಧ ಜಾರಿಯಿದ್ದರೂ ಅಂಗಡಿಗಳಲ್ಲಿ ಮಾರಾಟವಾಗುತ್ತಿರುವುದು, ಟೀ ಶಾಪ್‌ಗಳಲ್ಲಿ ಗಾಜಿನ ಲೋಟದ ಬದಲು ಪ್ಲಾಸ್ಟಿಕ್ ಅಥವಾ ಪೇಪರ್ ಗ್ಲಾಸ್ ಬಳಕೆಯನ್ನು ಏಕೆ ನಿಯಂತ್ರಿಸುತ್ತಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು. 15 ದಿನದೊಳಗೆ ಬೀದಿಬದಿಯಲ್ಲಿ ಕಸ ಸುರಿಯುವುದನ್ನು ತಡೆಗಟ್ಟುವುದು ಹಾಗೂ ಮನೆ ಮನೆಯಿಂದ ಕಸ ಸಂಗ್ರಹಿಸುವವರು ಕಟ್ಟುನಿಟ್ಟಾಗಿ ಹಸಿ ಮತ್ತು ಒಣ ಕಸ ಬೇರ್ಪಡಿಸಿ ನೀಡಬೇಕೆಂದು ನಿವಾಸಿಗಳಿಗೆ ತಾಕೀತು ಮಾಡಬೇಕು. ಜೊತೆಗೆ ಸಾರ್ವಜನಿಕರಿಗೆ ಈ ಬಗ್ಗೆ ತಿಳುವಳಿಕೆ ನೀಡಿ ವಿಶ್ವಾಸದಿಂದ ಸ್ವಚ್ಛತೆ ಕಾಪಾಡುವಂತೆ ಮಾಡಬೇಕು ಅಥವಾ ಕಾನೂನಿನಡಿ ಲಭ್ಯವಿರುವ ಅಧಿಕಾರವನ್ನು ಚಲಾಯಿಸಿ ಎಲ್ಲೆಂದರಲ್ಲಿ ಕಸ ಸುರಿಯುವವರ ಬಗ್ಗೆ ಕ್ರಮ ವಹಿಸಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ವಹಿಸಲಾಗುವುದು ಎಂದು ಆಯುಕ್ತ ಆಸಿಫ್ ಎಚ್ಚರಿಕೆ ನೀಡಿದರು.

ಇಂದಿನ ನಗರ ಪ್ರದಕ್ಷಿಣೆ ವೇಳೆ ಆಯುಕ್ತರ ಜೊತೆ ಪಾಲಿಕೆ ಉಪ ಆಯುಕ್ತರಾದ (ಅಭಿವೃದ್ಧಿ) ಕೆ.ಜೆ. ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಹೇಶ್, ವಾಣಿವಿಲಾಸ ವಾಟರ್‌ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶಿಲ್ಪ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಚೇತನ್ ಹಾಗೂ ಇತರರು ಉಪಸ್ಥಿತರಿದ್ದರು.

> “ ಈ ಕುರಿತಂತೆ ‘ಮೈಸೂರು ಮಿತ್ರ’ನಿಗೆ ಪ್ರತಿಕ್ರಿಯೆ ನೀಡಿದ ಆಯುಕ್ತರು, ಇಂದೋರ್ ನಗರದಲ್ಲಿ ಶೇ.95ರಷ್ಟು ಜನರು ಕಸವನ್ನು ವಿಂಗಡಿಸಿ ನೀಡುತ್ತಾರೆ. ಹಾಗೂ ಎಲ್ಲೆಂದರಲ್ಲಿ ಕಸ ಬಿಸಾಡುವ ಅಭ್ಯಾಸವಿಲ್ಲ. ಅಲ್ಲಿ ಸ್ವಚ್ಛತೆ ಬಗ್ಗೆ ಜನರಿಗೆ ಜಾಗೃತಿ ಇದ್ದು, ಅದನ್ನು ಚಾಚೂ ತಪ್ಪದೆ ಪಾಲಿಸುತ್ತಿರುವುದರಿಂದಲೇ ಇಂದೋರ್ ಹಲವು ವರ್ಷ ಸ್ವಚ್ಛ ನಗರ ಪ್ರಶಸ್ತಿ ಪಡೆಯಲು ಸಾಧ್ಯವಾಗಿದೆ. ಸ್ವಚ್ಛತೆ ಕಾಪಾಡುವುದು ಕೇವಲ ಪಾಲಿಕೆ ಆಯುಕ್ತರು, ಅಧಿಕಾರಿಗಳಿಂದ ಮಾತ್ರ ಸಾಧ್ಯವಿಲ್ಲ. ಸಾರ್ವಜನಿಕರು, ಸಂಘ–ಸಂಸ್ಥೆಗಳು, ಪರಿಸರ ಪ್ರೇಮಿಗಳು ಈ ಪವಿತ್ರ ಕಾರ್ಯದಲ್ಲಿ ಕೈಜೋಡಿಸಬೇಕು. ಆಗ ಮಾತ್ರ ಸ್ವಚ್ಛತೆ, ನೈರ್ಮಲ್ಯ, ಆರೋಗ್ಯ, ಪರಿಸರವನ್ನು ಉತ್ತಮ ರೀತಿಯಲ್ಲಿ ಇರಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಬಾರಿ ಸ್ವಚ್ಛ ಸರ್ವೇಕ್ಷಣಾ ಅಭಿಯಾನದಲ್ಲಿ ಸಾಂಸ್ಕೃತಿಕ ನಗರ ಮೈಸೂರು ಸ್ವಚ್ಛ ನಗರಿ ಎಂಬ ಬಿರುದು ಪಡೆಯಲು ಈಗಿನಿಂದಲೇ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿ ಕಟ್ಟುನಿಟ್ಟಾಗಿ ಪಾಲಿಸುವಂತಾಗಬೇಕು. ಈ ನಿಟ್ಟಿನಲ್ಲಿ ನಾಗರಿಕರು ಪಾಲಿಕೆ ಅಧಿಕಾರಿಗಳೊಂದಿಗೆ ಕೈಜೋಡಿಸಬೇಕೆಂದು ತಿಳಿಸಿದರು.

## ಯುಜಿಸಿ: ಫೆ.5ಕ್ಕೆ ಉನ್ನತ ಶಿಕ್ಷಣ ಸಚಿವರ ರಾಷ್ಟ್ರೀಯ ಸಮಾವೇಶ

**ಬೆಂಗಳೂರು:** ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕುಲಪತಿಗಳ ನೇಮಕ ಒಳಗೊಂಡಂತೆ ಪ್ರಕಟಿಸಿರುವ ಕರಡು ನಿಯಮಾವಳಿಗಳ ಕುರಿತು ಚರ್ಚಿಸಲು ಫೆ 5ರಂದು ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ಸಚಿವರ ರಾಷ್ಟ್ರೀಯ ಸಮಾವೇಶ ಆಯೋಜಿಸಲಾಗಿದೆ.

ಸಮಾವೇಶದಲ್ಲಿ ಕಾಶ್ಮೀರ, ಹಿಮಾಚಲ ಪ್ರದೇಶ, ಜಾರ್ಖಂಡ್, ತೆಲಂಗಾಣ, ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಉನ್ನತ ಶಿಕ್ಷಣ ಸಚಿವರು ಭಾಗವಹಿಸುತ್ತಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾವೇಶ ಉದ್ಘಾಟಿಸುವರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತರಿರುವರು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾಹಿತಿ ನೀಡಿದ್ದಾರೆ.

ದೆಹಲಿ ಚುನಾವಣೆ ಕಾರಣ ಅಲ್ಲಿನ ಸಚಿವರು ಪಾಲ್ಗೊಳ್ಳುತ್ತಿಲ್ಲ. ಕೆಲ ರಾಜ್ಯಗಳ ಪ್ರಾದೇಶಿಕ ಪಕ್ಷಗಳು ಎನ್‌ಡಿಎ ಜೊತೆ ಮೈತ್ರಿಯ ಕಾರಣಕ್ಕಾಗಿ ಬಹಿರಂಗ ವಿರೋಧವನ್ನು ವ್ಯಕ್ತಪಡಿಸಿಲ್ಲ. ಆದರೂ, ಎನ್‌ಡಿಎ ಮೈತ್ರಿಕೂಟದ ಜೆಡಿಯು, ಟಿಡಿಪಿ ಹಾಗೂ ಎಲ್‌ಜೆಪಿ ಪಕ್ಷಗಳು ಈಗಾಗಲೇ ಅತೃಪ್ತಿ ಹೊರಹಾಕಿವೆ ಎಂದು ಹೇಳಿದ್ದಾರೆ.

# ಭಾರತದ ಗಡಿಯಲ್ಲಿ ಚೀನಾ ಅತಿಕ್ರಮಣಕ್ಕೆ ಮೇಕ್ ಇನ್ ಇಂಡಿಯಾ ವೈಫಲ್ಯ ಕಾರಣ

### ರಾಹುಲ್‌ಗಾಂಧಿ ಲೋಕಸಭೆಯಲ್ಲಿ ಭಾಷಣ



ನವದೆಹಲಿ: ಸಂಸತ್ ಬಜೆಟ್ ಅಧಿವೇಶನ ಆರಂಭದ ದಿನ ಉಭಯ ಸದನಗಳನ್ನುದ್ದೇಶಿಸಿದ್ದ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿರುವ ವಿಪಕ್ಷ ನಾಯಕ ರಾಹುಲ್ ಗಾಂಧಿ ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ.

ಲೋಕಸಭೆಯಲ್ಲಿ ಮಾತನಾಡಿರುವ ರಾಹುಲ್ ಗಾಂಧಿ, ರಾಷ್ಟ್ರಪತಿಗಳ ಭಾಷಣದಲ್ಲಿ ಸರ್ಕಾರ ಮಾಡಿರುವ ಕೆಲಸಗಳ ಅದೇ ಹಳೆಯ ಪಟ್ಟಿಯೇ ಇದೆ. ಹೊಸತೇನೂ ಇಲ್ಲ ಎಂದು ಹೇಳಿದ್ದಾರೆ.

ಇದೇ ವೇಳೆ ಸರ್ಕಾರವನ್ನು ಟೀಕಿಸಿರುವ ರಾಹುಲ್ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ಯೋಜನೆ ವಿಫಲವಾಗಿದೆ. ದೇಶದ ಉತ್ಪಾದನಾ ಕ್ಷೇತ್ರ 60 ವರ್ಷಗಳಲ್ಲೇ ಕುಸಿತ ಕಂಡಿದೆ. ಪ್ರಧಾನಿಯವರು 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮವನ್ನು ಪ್ರಸ್ತಾಪಿಸಿದರು, ಅದು ಒಳ್ಳೆಯ ಐಡಿಯಾ ಎಂದು ಭಾವಿಸುತ್ತೇನೆ. ನಾವು ಪ್ರತಿಮೆಗಳು, ಕಾರ್ಯಗಳು ಮತ್ತು ಹೂಡಿಕೆಗಳನ್ನು ನೋಡಿದ್ದೇವೆ. (ಆದರೆ) ಫಲಿತಾಂಶವು ನಿಮ್ಮ ಮುಂದೆಯೇ ಇದೆ. ಉತ್ಪಾದನೆ 2014ರಲ್ಲಿ GDPಯ ಶೇಕಡಾ 15.3 ರಿಂದ ಇಂದು GDPಯ ಶೇಕಡಾ 12.6ಕ್ಕೆ ಇಳಿದಿದೆ. ಇದು 60 ವರ್ಷಗಳಲ್ಲಿ ಉತ್ಪಾದನೆ ವಲಯದಲ್ಲಿ ದಾಖಲಾಗಿರುವ ಅತ್ಯಂತ ಕಡಿಮೆ ಪಾಲು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ಪ್ರಧಾನಿಯನ್ನು ದೂಷಿಸುತ್ತಿಲ್ಲ ಎಂದು ಹೇಳಿದ್ದು, ಪ್ರಧಾನಿ ನರೇಂದ್ರ ಮೋದಿ ಪ್ರಯತ್ನಿಸಲಿಲ್ಲ ಎಂದು ಹೇಳುವುದು ನ್ಯಾಯಯುತವಲ್ಲ, ಪ್ರಧಾನಿಯವರು ಪ್ರಯತ್ನಿಸಿದರು, ಆದರೆ ಅವರು ವಿಫಲರಾದರು. ಮೇಕ್ ಇನ್ ಇಂಡಿಯಾ ಒಳ್ಳೆಯ ಪರಿಕಲ್ಪನೆ ಆಗಿತ್ತು, ಆದರೆ ಅದರಲ್ಲಿ ಮೋದಿ ವಿಫಲರಾದರು ಎಂಬುದು ಸ್ಪಷ್ಟವಾಗಿದೆ. ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

**ಚೀನಾ ಉತ್ಪನ್ನಗಳ ಅವಲಂಬನೆ:** ಭಾರತ ಚೀನ ಉತ್ಪನ್ನಗಳ ಮೇಲೆ ಹೆಚ್ಚು ಅವಲಂಬಿತವಾಗಿರುವುದು ಪ್ರಮುಖ ರಾಷ್ಟ್ರೀಯ ಕಾಳಜಿಯ ವಿಷಯವಾಗಿದೆ. ಭಾರತದ ಪ್ರದೇಶದ ಒಳಗೆ ಚೀನಾ ಪಡೆಗಳು ನುಗ್ಗಿವೆ, ನಮ್ಮ ಸೇನಾ ಮುಖ್ಯಸ್ಥರು ಚೀನಿಯರು ನಮ್ಮ ಪ್ರದೇಶದೊಳಗೆ ಇದ್ದಾರೆ ಎಂದು ಹೇಳಿದ್ದಾರೆ. ಇದು ಸತ್ಯ. ಚೀನಾ ನಮ್ಮ ಪ್ರದೇಶದೊಳಗೆ ಇರುವುದಕ್ಕೆ ಮುಖ್ಯ ಕಾರಣ, ಚೀನಾ ಈ ದೇಶದೊಳಗೆ ಕುಳಿತಿರುವುದಕ್ಕೆ ಕಾರಣ 'ಮೇಕ್ ಇನ್ ಇಂಡಿಯಾ' ವಿಫಲವಾಗಿರುವುದಾಗಿದೆ. ಚೀನಾ ಈ ದೇಶದೊಳಗೆ ಕುಳಿತಿರುವುದಕ್ಕೆ ಕಾರಣ ಭಾರತ ಹೆಚ್ಚು ಉತ್ಪಾದಿಸಲು ನಿರಾಕರಿಸುತ್ತಿರುವುದಾಗಿದೆ ಮತ್ತು ಭಾರತ ಉತ್ಪಾದನಾ ವಲಯದ ಕ್ರಾಂತಿಯನ್ನು ಮತ್ತೊಮ್ಮೆ ಚೀನಿಯರಿಗೆ ಬಿಟ್ಟು ಕೊಡಲಿದೆ ಎಂದು ನಾನು ಚಿಂತಿತನಾಗಿದ್ದೇನೆ ಎಂದು ರಾಹುಲ್ ಗಾಂಧಿ ಸ'ದ'ನ'ದ'ಲ್ಲಿ ಹೇಳಿದ್ದಾರೆ.

## ರಾಷ್ಟ್ರಪತಿ ವಿರುದ್ಧ ಹೇಳಿಕೆ: ಸೋನಿಯಾ ಗಾಂಧಿ ವಿರುದ್ಧ ಹಕ್ಕುಚ್ಯುತಿ ಮಂಡನೆ



**ನವದೆಹಲಿ:** ಕಳೆದ ವಾರ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು 'ಅವಮಾನಿಸಿದ್ದಾರೆ ಮತ್ತು ಮಾನಹಾನಿಕರ ಪದ' ಬಳಸಿದ್ದಾರೆ ಎಂದು ಆರೋಪಿಸಿ, ಬಿಜೆಪಿ ಸಂಸದರು ಸೋಮವಾರ ಕಾಂಗ್ರೆಸ್ ಸಂಸದೆ ಸೋನಿಯಾ ಗಾಂಧಿ ವಿರುದ್ಧ ಸಂಸತ್ತಿನಲ್ಲಿ ಹಕ್ಕುಚ್ಯುತಿ ನಿರ್ಣಯ ಮಂಡಿಸಿದರು.

ಸೋನಿಯಾ ಹೇಳಿಕೆ "ಅತ್ಯುನ್ನತ ಹುದ್ದೆಯ ಘನತೆಯನ್ನು ಕುಗ್ಗಿಸುವ" ಉದ್ದೇಶವನ್ನು ಹೊಂದಿದೆ ಎಂದು ಬಿಜೆಪಿ ಸಂಸದರು ಆರೋಪಿಸಿದ್ದಾರೆ.

"ರಾಜ್ಯಸಭಾ ಸದಸ್ಯೆ ಸೋನಿಯಾ ಗಾಂಧಿ ಅವರು ಇತ್ತೀಚೆಗೆ ಭಾರತದ ರಾಷ್ಟ್ರಪತಿಗಳ ವಿರುದ್ಧ ಬಳಸಿದ ಕೆಲವು ಅಸಂಸದೀಯ, ಅವಹೇಳನಕಾರಿ ಹೇಳಿಕೆಗಳ ಬಗ್ಗೆ ನಾವು ತೀವ್ರ ನಿರಾಶೆಯಿಂದ ಹಕ್ಕುಚ್ಯುತಿ ಮಂಡಿಸುತ್ತಿದ್ದೇವೆ. ಇದು ಗಂಭೀರ ಪರಿಗಣನೆ ಮತ್ತು ಶಿಸ್ತು ಕ್ರಮಕ್ಕೆ ಅರ್ಹವಾಗಿವೆ" ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ. ರಾಷ್ಟ್ರಪತಿಗಳು ಬಜೆಟ್ ಅಧಿವೇಶನಕ್ಕೆ ಮುಂಚಿತವಾಗಿ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ನಂತರ, ಮುರ್ಮು ಅವರು ಕೊನೆಯವರೆಗೂ ತುಂಬಾ ದಣಿದಿದ್ದರು. ಅವರಿಗೆ ಮಾತನಾಡಲು ಕಷ್ಟವಾಗುತ್ತಿತ್ತು. ಕಳಪೆ ವಿಷಯ" ಎಂದು ಕಾಂಗ್ರೆಸ್ ಮಾಜಿ ಮುಖ್ಯಸ್ಥೆ ಸೋನಿಯಾ ಗಾಂಧಿ ಹೇಳಿದ್ದರು.

## ಮೈಕ್ರೋ ಫೈನಾನ್ಸ್‌ನವರು ರೌಡಿಗಳ ಇಟ್ಟುಕೊಂಡು ಹಣ ವಸೂಲಿ ಮಾಡ್ತಿದ್ದಾರೆ

**ಬೆಂಗಳೂರು:** ಮೈಕ್ರೋ ಫೈನಾನ್ಸ್ ಕಂಪನಿಗಳು ಕಿರುಕುಳ ನೀಡದಂತೆ ಸಿಎಂ ಹಾಗೂ ಸಹಕಾರ ಸಚಿವರು ಈಗಾಗಲೇ ಆದೇಶ ಮಾಡಿದ್ದಾರೆ. ಆದರೆ ಕೆಲವು ಕಡೆ ರೌಡಿಗಳನ್ನು ಬಿಟ್ಟು ಹೆದರಿಸ್ತಾರೆ, ಹಣ ವಸೂಲಿ ಮಾಡ್ತಿ ದ್ದಾರೆ. ಹಾಗಾಗಿ ಆದಷ್ಟು ಬೇಗ ಜಾರಿಯಾಗುತ್ತೆ ಸುಗ್ರೀವಾಜ್ಞೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿದರು.

ಮೈಕ್ರೋ ಫೈನಾನ್ಸ್ ಮಸೂದೆ ಜಾರಿ ಬಗ್ಗೆ ಬೆಂಗಳೂರಿನಲ್ಲಿ ಮಾತನಾಡಿದ ಡಿಸಿಎಂ, ನಾವು ಬಿಲ್ ತರ್ತಿದ್ದೇವೆ. ಮುಖ್ಯಮಂತ್ರಿಗಳಿಗೆ ಆರೋಗ್ಯ ಸರಿಯಿಲ್ಲ. ಒಂದೆರಡು ದಿನ ವಿರಾಮದ ನಂತರ ಬರ್ತಾರೆ. ಆಮೇಲೆ ಸುಗ್ರೀವಾಜ್ಞೆ ಬಗ್ಗೆ ಕ್ರಮ ಜರುಗಿಸ್ತಾರೆ ಎಂದರು. ಮೈಸೂರು, ಬೆಂಗಳೂರು, ರಾಮನಗರ ಸೇರಿದಂತೆ ಎಲ್ಲೆಡೆ ಮೈಕ್ರೋ ಫೈನಾನ್ಸ್ ಕಿರುಕುಳ ಪ್ರಕರಣಗಳು ಬೆಳಕಿಗೆ ಬರ್ತಿದೆ. ಈಗಾಗಲೇ ಸಿಎಂ, ಸಹಕಾರ ಸಚಿವರು ಕಿರುಕುಳ ನೀಡದಂತೆ ಆದೇಶ ಮಾಡಿದ್ದಾರೆ. ಬಡವರನ್ನ ನಾವು ರಕ್ಷಣೆ ಮಾಡಬೇಕು. ಆದರೆ ಎಲ್ಲ ಪಕ್ಷದ ಕಾರ್ಯಕರ್ತರಿಗೆ ಹೇಳ್ತೇನೆ. ಕಿರುಕುಳ ಗಮನಕ್ಕೆ ತರುವಂತೆ ಮನವಿ ಮಾಡುತ್ತೇನೆ. ಪ್ರತಿ ಜಿಲ್ಲಾ ಕಚೇರಿಗಳಿಗೂ ಈ ಬಗ್ಗೆ ಹೇಳಿದ್ದೇವೆ. ಎಸ್ಪಿಗಳೊಂದಿಗೂ ಸಭೆ ಮಾಡ್ತೇವೆ. ಸುಗ್ರೀವಾಜ್ಞೆ ಆದಷ್ಟು ಬೇಗ ಜಾರಿಯಾಗುತ್ತೆ ಎಂದು ನುಡಿದರು.

ಇನ್ನೂ ಜೆಡಿಎಸ್ ಶಾಸಕರ ಸಂಪರ್ಕ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾನು ಯಾರ ಜೊತೆಯೂ ಮಾತನಾಡಿಲ್ಲ. ಜೆಡಿಎಸ್ ಶಾಸಕರ ಜೊತೆ ಮಾತನಾಡಿಲ್ಲ. ಸ್ಥಳೀಯ ಮಟ್ಟದಲ್ಲಿ ಕಾರ್ಯಕರ್ತರಿಗೆ ನೋವಿದೆ.



ಅವರು ಎಷ್ಟು ದಿನ ಅಂತ ಕಾಯ್ತಾರೆ. ನಾನು ಯಾರ ಹೆಸರನ್ನೂ ಹೇಳಲ್ಲ. ಅವರಿಗೆ ನ್ಯಾಷನಲ್ ಪಾರ್ಟಿ ಸೇರಬೇಕೆಂಬ ಆಸೆ ಇದೆ. ಅದಕ್ಕೆ ಬನ್ನಿ, ಸೇರಿಕೊಳ್ಳಿ ಅಂದಿದ್ದೇನೆ. ನನ್ನ ಜೊತೆ ಯಾರೂ ಸಂಪರ್ಕ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

**ಅಶೋಕರಲ್ಲಿ ಜ್ಯೋತಿಷ್ಯ ಕೇಳ್ತೆನೆ:** ನವೆಂಬರ್ 15–16ರಂದು ಸಿಎಂ ಬದಲಾವಣೆ ಬಗ್ಗೆ ಅಶೋಕ್ ಭವಿಷ್ಯ ನುಡಿದ ಹೇಳಿಕೆಗೆ ಪ್ರತಿಕ್ರಿಯಿಸಿ, ನನಗೂ ಶಾಸ್ತ್ರದ ಬಗ್ಗೆ ಗೊತ್ತಿದೆ. ಅವರು ಬೋರ್ಡ್ ಯಾವಾಗ ಹಾಕಿಕೊಂಡ್ರೋ ಗೊತ್ತಿಲ್ಲ. ನಾನು ಶೀಘ್ರದಲ್ಲೇ ಅವರಿಂದ ಜ್ಯೋತಿಷ್ಯ ಕೇಳ್ತೇನೆ ಎಂದು ವ್ಯಂಗ್ಯವಾಡಿದರು.

ಇನ್ನೂ ರಾಜ್ಯ ಸರ್ಕಾರ ದಿವಾಳಿ ಆಗಿದೆ ಎಂಬ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿಕೆಗೆ ತಿರುಗೇಟು ನೀಡಿದ ಡಿಸಿಎಂ, ಪ್ರಧಾನಿಯವರು ಗ್ಯಾರಂಟಿ ಬಗ್ಗೆ ಏನು ಹೇಳಿದ್ದರು. 5 ಗ್ಯಾರಂಟಿ ಕೊಟ್ಟಾಗ ದಿವಾಳಿ ಅಂದಿದ್ದರು. ಬೆಲೆ ಏರಿಕೆಯಿಂದ ಹೆಣ್ಣುಮಕ್ಕಳು ತತ್ತರಿಸಿದ್ದಾರೆ. ಬೆಲೆ ಹೆಚ್ಚಾಗಿದೆ ಬದುಕೋಕೆ ಆಗಲ್ಲ ಅಂತಿದ್ದರು. ಅದಕ್ಕೆ ನಾವು ಗ್ಯಾರಂಟಿ ತಂದಿದ್ದು. ಈಗ ಅವರೇ ಎಲ್ಲಾ ಕಡೆ ಶುರು ಮಾಡಿದ್ದಾರೆ. ನಮ್ಮದು ದಿವಾಳಿ ಆಗಿದ್ಯಾ ಅನ್ನೋದನ್ನ ಅವರೇ ಹೇಳಲಿ. ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಘೋಷಣೆ ಮಾಡಿದ್ದರು. ಈವರೆಗೆ ಒಂದು ರೂಪಾಯಿ ಕೂಡ ಬಂದಿಲ್ಲ ಎಂದರು.

## ನಕ್ಕರೆ ಅದೇ ಸ್ವರ್ಗ

ಹುಡುಗ : ಸಿಸ್ಟರ್, ನಂಗೆ ಒಂದು ಬಾಟಲಿ ಬ್ಲಡ್ ಬೇಕು.
ನರ್ಸ್ : ಬ್ಲಡ್ ಗ್ರೂಪ್ ಹೇಳಿ.
ಹುಡುಗ : ಯಾವ್ದಾದ್ರು ಆಗುತ್ತೆ.
ನರ್ಸ್ : ಅದು ಹೇಗೆ ಆಗುತ್ತೆ?
ಹುಡುಗ : ಅದು ನನ್ನ ಗರ್ಲ್‌ಫ್ರೆಂಡ್‌ಗೆ ಲವ್ ಲೆಟರ್ ಬರೆಯೋಕೆ.

ಮೈಸೂರು ಮಿತ್ರ

ಮಂಗಳವಾರ, 4 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ.........

ಅತಿಯಾದ ರೂಪ ಸೀತೆಗೆ ಮುಳುವಾಯಿತು. ಅತಿಯಾದ ಗರ್ವ ರಾವಣನಿಗೆ ಕೇಡುಂಟು ಮಾಡಿತು. ಅತಿಯಾದ ದಾನ ಬಲಿಯನ್ನು ನಾಶ ಮಾಡಿತು. ಆದುದರಿಂದ ಯಾವುದೂ ಅತಿಯಾಗಬಾರದು.–ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆಯೆಂಬ ಮರ ಮುರಿಯಬಾರದು, ಮನಸ್ಸೆಂಬ ಮಾರ್ಗ ಕತ್ತರಿಸಬಾರದು.

## ನಿಮ್ಮ ಪತ್ರಗಳು

### ■ ಬಣ ಬಡಿದಾಟದಲ್ಲಿ ತೊಡಗಿರುವ ಬಿಜೆಪಿ, ಸಮರ್ಥ ವಿಪಕ್ಷವಾಗಿ ಕೆಲಸ ಮಾಡುವಲ್ಲಿ ವಿಫಲ

ಮಾನ್ಯರೆ,

ಆಂತರಿಕ ಕಲಹ–ಕಚ್ಚಾಟಗಳಿಂದಲೇ ಅಧಿಕಾರ ಕಳೆದುಕೊಂಡ ಬಿಜೆಪಿ ಇದೀಗ ವಿಪಕ್ಷವಾಗಿಯೂ ತನ್ನ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸದೇ ಕೇವಲ ಬಣ ಬಡಿದಾಟ ರಾಜಕೀಯದಲ್ಲೇ ಮಗ್ನವಾಗಿದ್ದು, ಪಕ್ಷದಲ್ಲಿನ ಆಂತರಿಕ ಬೇಗುದಿ ಭುಗಿಲೆದ್ದಿದೆ. ಕರ್ನಾಟಕದ ಮಟ್ಟಿಗಂತೂ ಭಾಜಪ ಈಗ ಭಾರಿ ಜಗಳ ಪಾರ್ಟಿ ಆಗಿ ಪರಿವರ್ತನೆ ಆಗುತ್ತಿದೆ. ಪಕ್ಷದ ಮುಖಂಡರಲ್ಲಿ ಸಾಮರಸ್ಯವಿಲ್ಲದೇ ಹಾದಿ ಬೀದಿಯಲ್ಲಿ ಬಣಗಳ ಬಡಿದಾಟ ತೀವ್ರವಾಗಿದೆ. ಶಿಸ್ತಿನ ಪಕ್ಷ, ಪ್ರಬುದ್ಧರ ಪಕ್ಷ ಎಂದೆಲ್ಲಾ ಕರೆಸಿಕೊಳ್ಳುತ್ತಿದ್ದ ಬಿಜೆಪಿ ಕರ್ನಾಟಕ ಘಟಕದಲ್ಲಿ ಅಶಿಸ್ತು ತಾಂಡವವಾಡುತ್ತಿದೆ.

ಕಾಂಗ್ರೆಸ್ ವಿರುದ್ಧ ಹರಿಹಾಯಬೇಕಾದ ಬಸನಗೌಡ ಪಾಟೀಲ್ ಯತ್ನಾಳ್‌ರು ತಮ್ಮದೇ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧವೇ ದಿನಂಪ್ರತಿ ಆರೋಪಗಳ ಸುರಿಮಳೆಯನ್ನೆ ಹರಿಸುತ್ತಿದ್ದು ಭಿನ್ನಮತದ ಜ್ವಾಲೆ ದಿನದಿಂದ ದಿನಕ್ಕೆ ಉಲ್ಬಣಿಸುತ್ತಿದೆ. ಪಕ್ಷದ ನಾಯಕರಲ್ಲೇ ಸಾಮರಸ್ಯ ಇಲ್ಲದಿರುವಾಗ ಇನ್ನು ಕಾರ್ಯಕರ್ತರಲ್ಲಿ ಉತ್ಸಾಹ ಮೂಡುವುದಾದರು ಹೇಗೆ ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಭಿನ್ನಮತಕ್ಕೆ ಮದ್ದು ಅರೆಯಬೇಕಾದ ಹೈಕಮಾಂಡ್ ನಾಯಕರು ಬಾಯಿಗೆ ಬೀಗ ಹಾಕಿಕೊಂಡಿರುವುದಾದರು ಏಕೆ? ಎಂಬ ಸಹಜ ಪ್ರಶ್ನೆ ಇಲ್ಲಿ ಎದುರಾಗುತ್ತಿದೆ.

ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನ ಹಾಗೂ ರಾಜ್ಯ ಅಧ್ಯಕ್ಷರ ಬದಲಾವಣೆ ಬಗ್ಗೆ ನಡೆಯುತ್ತಿದ್ದ ಜಟಾಪಟಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು "ಬಾಯಿ ಮುಚ್ಚಿಕೊಂಡು ಕೆಲಸ ಮಾಡಿ" ಎಂದು ಗುಟುರು ಹಾಕುವ ಮೂಲಕ ಹೈಕಮಾಂಡ್ ಶಕ್ತಿ ಏನೆಂಬುದನ್ನು ಸಾಬೀತುಪಡಿಸಿ ಕಾಂಗ್ರೆಸ್ ಬಹಿರಂಗ ಬಣ ಬಡಿದಾಟಕ್ಕೆ ಸ್ವಲ್ಪ ಬ್ರೇಕ್ ಹಾಕಿದ್ದಾರೆ. ಆದರೆ ಬಿಜೆಪಿ ಬಣ ಬಡಿದಾಟಕ್ಕೆ ಇತಿಶ್ರೀ ಹಾಡಲು ಹೈಕಮಾಂಡ್‌ಗೆ ಏಕೆ ಇಚ್ಛಾಶಕ್ತಿ ಇಲ್ಲವೆಂಬುದು ಇಲ್ಲಿ ನಿಗೂಢ ಪ್ರಶ್ನೆಯಾಗಿದೆ.

– ಹೆಚ್.ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು.

### ■ ಕುಂಭಮೇಳ ದುರಂತ ತಪ್ಪಿಸಬಹುದಿತ್ತು

ಮಾನ್ಯರೆ,

ಭಕ್ತಿಯಿಂದ ಪುಣ್ಯ ಸ್ನಾನ ಮಾಡಲು ತ್ರಿವೇಣಿ ಸಂಗಮದ ಟೆಂಟ್‌ಗಳಲ್ಲಿ ರಾತ್ರಿ ಮಲಗಿದ್ದ ಅಮಾಯಕ ಜನರ ಮೇಲೆ ಗುಂಪೊಂದು ಓಡಿದ್ದರಿಂದ ಪ್ರಯಾಗ್ ರಾಜ್‌ನಲ್ಲಿ ಉಂಟಾದ ಕಾಲ್ತುಳಿತದಲ್ಲಿ 30 ಜನರು ಪ್ರಾಣ ತೆರುವಂತಾದದ್ದು ವಿಷಾದನೀಯ. 2013ರಲ್ಲಿ ನಡೆದ ಕುಂಭಮೇಳದಲ್ಲೂ ಇದೇ ರೀತಿಯ ಅವಘಡ ಉಂಟಾಗಿ 42 ಜನರು ಪ್ರಾಣ ತೆತ್ತಿದ್ದು ತಿಳಿದಿದ್ದರೂ, ಉತ್ತರಪ್ರದೇಶ ಸರ್ಕಾರ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ಸರಿಯಾದ ಮುಂಜಾಗ್ರತೆ ಹಾಗೂ ಜನರಿಗೆ ಬೇಕಾದ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡದೆ ಇರುವುದು ಈ ಕಾಲ್ತುಳಿತ ಪ್ರಕರಣದಿಂದ ಸಾಬೀತಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಗೃಹ ಸಚಿವ ಅಮಿತ್ ಶಾ, ಪ್ರಧಾನಿ ನರೇಂದ್ರ ಮೋದಿಯವರು ಮಾಧ್ಯಮಗಳಲ್ಲಿ ಪ್ರಚಾರಕ್ಕೆ ಕೊಟ್ಟಷ್ಟು ಗಮನವನ್ನು ಯಾತ್ರಿಗಳಿಗೆ ಅದರಲ್ಲೂ ಸಾಮಾನ್ಯ ಜನರಿಗೆ ಸೌಲಭ್ಯ ಕಲ್ಪಿಸುವಲ್ಲಿ ಇರಲಿಲ್ಲ ಎನ್ನುವುದು ಇದರಿಂದ ತಿಳಿಯುತ್ತದೆ. ಕೇವಲ ವಿಐಪಿಗಳು ಹಾಗೂ ಕೆಲ ವಿದೇಶಿಯರಿಗೆ ಸೌಲಭ್ಯ ನೀಡಿ, ಪ್ರಚಾರ ಗಿಟ್ಟಿಸಿದ್ದಾರೆ ಅಷ್ಟೇ. ವಿಐಪಿ ಘಾಟ್‌ನಲ್ಲಿ ಒಬ್ಬನೇ ಒಬ್ಬ ವಿಐಪಿ ಇಲ್ಲದಿದ್ದರೂ ಅದನ್ನು ಸಾಮಾನ್ಯ ಜನರಿಗೆ ಮುಕ್ತ ಮಾಡದಿದ್ದುದೇಕೆ? ಮಹಾ ಕುಂಭಮೇಳ ಎಂದು ಭಾರಿ ಪ್ರಚಾರ ಮಾಡಿ 45 ಕೋಟಿ ಜನರು ಕುಂಭ ಸ್ನಾನ ಮಾಡುತ್ತಾರೆ ಎಂದು ಅಭಿಯಾನದ ರೀತಿ ಪ್ರಚಾರ ಮಾಡುವ ಅವಶ್ಯಕತೆ ಏನಿತ್ತು? ಅದೇನೇ ಮಾಡಿದರೂ ಒಂದು ಸ್ಥಳದಲ್ಲಿ ಏಕಕಾಲಕ್ಕೆ ಕೋಟ್ಯಾಂತರ ಜನರಿಗೆ ಒಂದೇ ಬಾರಿಗೆ ಸೌಲಭ್ಯ ಕಲ್ಪಿಸುವುದು ಸಾಧ್ಯವಿಲ್ಲ. ವಾಸ್ತವ ಹೀಗಿರುವಾಗ ಒಂದೇ ಬಾರಿಗೆ ಜನರನ್ನು ಬನ್ನಿ ಬನ್ನಿ ಎಂದು ದೇಶದ ವಿವಿಧ ಮೂಲೆಗಳಿಂದ ಆಹ್ವಾನಿಸುವುದೇಕೆ? 500 ವಿಶೇಷ ರೈಲುಗಳನ್ನು ಬಿಟ್ಟು ಜನರನ್ನು ಬರುವಂತೆ ಮಾಡಿದ್ದೇಕೆ? ಇಂತಹ ಮಹಾ ಸಮಾಗಮದಲ್ಲಿ ಸೌಲಭ್ಯಗಳು ಸಿಗುವುದು ದುಸ್ತರ ಎಂದು ತಿಳಿದಿದ್ದರೂ ಜನರು ಮುಗಿಬೀಳುವ ಇಂತಹ ಭಕ್ತಿಗೆ ಏನನ್ನಬೇಕು?

ಮಹಾ ಕುಂಭಮೇಳದ ದುರಂತದ ಹೊಣೆಯನ್ನು ಉತ್ತರಪ್ರದೇಶ ಸರ್ಕಾರ ಹೊತ್ತುಕೊಳ್ಳಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಸರ್ಕಾರ, ಜನರು ಇನ್ನಾದರೂ ಪಾಠ ಕಲಿಯಬೇಕು. ಇನ್ನು ಮುಂದಿನ ದಿನಗಳಲ್ಲಿ ಎಲ್ಲೆಡೆ ಜಾತ್ರೆಗಳು ಆರಂಭವಾಗುತ್ತವೆ. ಅದಕ್ಕೂ ಭಾರಿ ಪ್ರಚಾರ ಕೊಡಲಾಗುತ್ತದೆ. ಇಂತಹ ಕಡೆ ಅಪಾರ ಸಂಖ್ಯೆಯಲ್ಲಿ ಜನ ಸೇರುತ್ತಾರೆ. ಆದರೆ, ಯಾವ ಭದ್ರತಾ ವ್ಯವಸ್ಥೆ ಇಲ್ಲಿರುವುದಿಲ್ಲ. ಹಾಗಾಗಿ ನೂಕು ನುಗ್ಗಲು ಉಂಟಾದರೆ, ಕಾಲ್ತುಳಿತ ಸಂಭವಿಸಿದರೆ ಹೊಣೆ ಯಾರು? ಇದರ ಬಗ್ಗೆಯೂ ಸಂಬಂಧಿಸಿದ ಸ್ಥಳೀಯ ಆಡಳಿತ ಎಚ್ಚರ ವಹಿಸಬೇಕಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ■ ನಿಮ್ಮೀ ಬಜೆಟ್

ಮಾನ್ಯರೆ,

ಯಾವಾಗಲೂ ಕೇಂದ್ರ ಅರ್ಥ ಸಚಿವರ ಬಜೆಟ್ ಸುಲಭದಲ್ಲಿ ಯಾರಿಗೂ ಅರ್ಥ ಆಗಲ್ಲ. ಅದರಲ್ಲಿ ಆದಾಯ ತೆರಿಗೆ ಎಷ್ಟು ಅಂತ ನೋಡಿ ಏನೂ ಹೆಚ್ಚಿನ ಬದಲಾವಣೆ ಇಲ್ಲದಿದ್ದಿದ್ದು ನೋಡಿ ಸಾಮಾನ್ಯ ಜನರು ಎರಡು ದಿನ ಗೊಣಗಾಡಿಕೊಂಡು ಮತ್ತೆ ತೆರಿಗೆ ಕಟ್ಟಿ ಸುಮ್ಮನಾಗುತ್ತಿದ್ದರು. ಆದರೆ ಈ ಸಾರಿ ಬಜೆಟ್‌ನಲ್ಲಿ ನಿರ್ಮಲಮ್ಮ ಎಲ್ಲಾ ವೇತನದಾರರು, ಮಧ್ಯಮವರ್ಗದವರು ಸ್ವಲ್ಪ 'ನಿರುಮ್ಮಳಾಗಿ' ಇರುವಂತೆ ಬಜೆಟ್ ಮಂಡಿಸಿ ಇದು 'ನಿಮ್ಮೀ' ಬಜೆಟ್ ಅಂತ, ಮಧ್ಯಮ ವರ್ಗದವರಿಗೆ ಹೊರೆ ತಪ್ಪಿಸಿದ್ದಾರೆ. ಇವರ ಹೊಸ 'ಕರ' (tax) ವನ್ನು ಹೆಚ್ಚಿನವರು 'ಕರ'(ಕೈ)ಮುಗಿದು 'ಕರತಾಡನ' ಮಾಡಿ ಸ್ವಾಗತಿಸಿದರೆ ವಿರೋಧ ಪಕ್ಷದವರಿಗೆ ಏನು ಪ್ರತಿಕ್ರಿಯಿಸಬೇಕೆಂದು ತೋಚದೆ ತಲೆ ಮೇಲೆ 'ಕೈ'ಹೊತ್ತುಕೊಂಡು ಕುಳಿತಿರುವಂತಿದೆ.

ಸಂಬಳದಲ್ಲೂ, ಉದ್ಯಮಗಳಿಂದ ಬಂದ ಆದಾಯದಲ್ಲೂ ತೆರಿಗೆ ಕಟ್ಟಿ ಮತ್ತೆ ಖರೀದಿ ಮಾಡುವ ಎಲ್ಲಾ ವಸ್ತುಗಳಿಗೆ, ಪಡೆದುಕೊಳ್ಳುವ ಎಲ್ಲಾ ಸೇವೆಗಳಿಗೆ ಜಿಎಸ್‌ಟಿ ಕಟ್ಟಿ ಅರ್ಧ ಹಣ ತೆರಿಗೆ ರೂಪದಲ್ಲಿ ಸರ್ಕಾರದ ಹುಂಡಿಗೆ ವಾಪಸ್ಸು ಹಾಕುವ ಮಧ್ಯಮವರ್ಗದ ವೇತನದಾರರಿಗೆ, ಸಣ್ಣ ಉದ್ಯಮಿಗಳಿಗೆ ಈ ಬಜೆಟ್‌ನಲ್ಲಿ ಸ್ವಲ್ಪ ತೆರಿಗೆ ಭಾರ ಕಡಿಮೆ ಮಾಡಲಾಗಿದೆ.ಹೊಸದಾಗಿ ಕೆಲಸಕ್ಕೆ ಸೇರಿದವರಿಗೆ ಮತ್ತು ಹೊಸದಾಗಿ ಸಣ್ಣ ಉದ್ಯಮ ಪ್ರಾರಂಭಿಸುವವರಿಗೂ ಉತ್ತೇಜಿಸಿದಂತಾಗಿದೆ

ಈಗಲಾದರೂ ಮಧ್ಯಮವರ್ಗದವರ ಮೇಲೆ ಸ್ವಲ್ಪ ಸಹಾನುಭೂತಿ ತೋರಿಸಿದ 'ನಿರ್ಮಲ' ಮನಸ್ಸಿಗೆ 'ನಮೋ' ನಮಃ.

–ರಾಘವೇಂದ್ರ ಜೋಯಿಸ್, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

# ಇಳಿಸಂಜೆಯ ಗೆಳೆತನಕ್ಕೆ ವಯಸ್ಸಿನ ಹಂಗೇಕೆ!

ಇದೊಂದು ಸೀನಿಯರ್ ಸಿಟಿಜನ್ನುಗಳ ಇಳಿಸಂಜೆಯ ಗೆಳೆತನಕ್ಕೆ ಸಂಬಂಧಪಟ್ಟ ವಿಷಯ. ಎಲ್ಲರೂ ಒಂದಲ್ಲಾ ಒಂದು ದಿನ ಈ ಹಿರಿಯ ನಾಗರಿಕರ ಗುಂಪಿಗೆ ಸೇರಲೇಬೇಕಾಗಿರುವುದರಿಂದ ಇದು ಎಲ್ಲರ ವಿಷಯ. ಅಂದರೆ 'ಸಂಗಾತಿಯ companionshipಗೆ ಅವಕಾಶವಿರುವ ಈ ಕಾಲದ ಆಶಯ. ವಯಸ್ಸಿಗೆ ಬಂದವರು ಪ್ರೀತಿಸಿ ಮದುವೆಯಾಗುತ್ತಾರೆ. ಕೆಲವರು ಮದುವೆಯಾದ ಮೇಲೆ ಪ್ರೀತಿಸಲು ಶುರು ಮಾಡುತ್ತಾರೆ. ಇವೆರಡರ ನಡುವೆ ಬದುಕಿನ ಇಳಿಸಂಜೆಯಲ್ಲಿ ಆಸರೆಗಾಗಿ ಊರು ಗೋಲಾಗುವ ಕೆಲವರು ವಯಸ್ಸಿನ ಹಂಗು ತೊರೆದು ಜೊತೆಯಾಗುತ್ತಾರೆ. ಅದೇ ಬದುಕಿನ ಇಳಿ ಸಂಜೆಯ ಗೆಳೆತನ. ಅದಕ್ಕೆ ವಯಸ್ಸಿನ ಹಂಗು ತೊರೆಯಬೇಕಾ? ಎಂಬುದು ಸದ್ಯದ ಪ್ರಶ್ನೆ.



> ಸಂಗಾತಿತನಕ್ಕೆ, ಗೆಳೆತನಕ್ಕೆ, ಇಳಿಸಂಜೆಯಲ್ಲಿ ಹೊತ್ತು ಕಳೆಯುವ ಸಂತೋಷದಿಂದ ವಯಸ್ಸಿನ ಅಂತರಕ್ಕೆ ಕನಸುಗಳು ಬೇಕಿಲ್ಲ, ಒಂಟಿತನದ ಬೇಸರಕ್ಕೆ, ಮನಸ್ಸಿಗೆ ಮುದ ನೀಡುವ ಸಾಂತ್ವನ ಒಟ್ಟಿಗೆ ಕುಳಿತು ಕಾಫಿ ಕುಡಿಯುವಾಗ ಆಸೆಗೆ ಬಿದ್ದು ಕಾಫಿಗೆ ಸಕ್ಕರೆ ಹಾಕಿ ಕೊಳ್ಳಲು ಹೋದರೆ ನಮ್ಮನ್ನು ಕಣ್ಣಲ್ಲೇ ಗದರಿಸಿ ನಿಮಗೆ ಶುಗರಿದೆ ಬೇಡ ಎಂದು ತಡೆಯುವ ಆಸರೆಯ ಕೈ, ಅಪ್ಪಿತಪ್ಪಿ ಕನ್ನಡಕ ಕೈಜಾರಿ ಕೆಳಗೆ ಬಿದ್ದರೆ, ಬಿದ್ದ ಕನ್ನಡಕದ ಫ್ರೇಮು ಸರಿ ಮಾಡಿಕೊಡುವ ತನ್ನವರೆಂಬ ಆಧಾರದ ಊರುಗೋಲುಗಳು ಬದುಕಿನ ಮುಸ್ಸಂಜೆಯಲ್ಲಿರುವ ಎಲ್ಲರಿಗೂ ಸಿಗಲಿ.

ಅಕಸ್ಮಾತ್ ಮದುವೆಯಾದ ಆರಂಭದಲ್ಲಿದ್ದ ಸಡಗರದ ಅರುಣರಾಗ ಬರಬರುತ್ತಾ ಇಳಿಸಂಜೆಯ ಸಂಧ್ಯಾರಾಗವಾಗಿ ಪರಿವರ್ತಿತವಾಗುತ್ತದೆ. ಬದುಕು ತನ್ನ ಬಣ್ಣ ಬದಲಾಯಿಸಿರುತ್ತದೆ. ಇಂಥ ಇಳಿಸಂಜೆಯ ಹೊತ್ತಿನಲ್ಲಿ ಗಂಡನಿಗೆ ಹೆಂಡತಿ, ಹೆಂಡತಿಗೆ ಗಂಡ ಸಾಥ್ ಕೊಡುತ್ತಾ ಜೊತೆಗಿರುತ್ತಾರೆ. ಅಂಥ ಅಸಂಖ್ಯಾತ ಹಿರಿಯ ಜೀವಗಳು ನಮ್ಮ ಜೊತೆಗಿವೆ. ಆದರೆ ಈ ಬದುಕೆಂಬ ಮಾಯಾಜಿಂಕೆ ಯಾರ ಮಾತು ಕೇಳುತ್ತದೆ ಹೇಳಿ? ಓಡುವಾಗ ಕಾಲು ಮುರಿದುಕೊಂಡು ಅಂಗಾತ ಬಿದ್ದು ಆಕಾಶ ನೋಡುವಂತೆ, ಇಬ್ಬರಲ್ಲಿ ಯಾರಾದರೊಬ್ಬರು ಇಲ್ಲವಾಗಿಬಿಟ್ಟರೆ! ಅಥವಾ ಇದ್ದೂ ದೂರವಾಗಿ ಬಿಟ್ಟರೆ! ಅದರಂಥ ನರಕ ಮತ್ತೊಂದಿಲ್ಲ. ಅಂಥವರ ಮಾನಸಿಕ ಸ್ಥಿತಿಯನ್ನು ನೀವು ಊಹಿಸಿ ನೋಡಿ! ಇರುವ ಬಿ.ಪಿ., ಶುಗರ್‌ಗಳ ಜೊತೆ ಒಂಟಿತನ ಅನ್ನೋ ಪರಮ ಪಿಶಾಚಿ ಪ್ರತಿನಿತ್ಯ ಅವರನ್ನು ಹುರಿದು ಮುಕ್ಕುತ್ತಿರುತ್ತದೆ.

ಈ ಒಂಟಿತನ ಸಹಿಸಲಾರದೆ ಎಷ್ಟೋ ಜೀವಗಳು ಯಾರಿಗೂ ಹೇಳದಂತೆ ಅನ್ನನೀರು ಬಿಟ್ಟು ಅಸುನೀಗಿದವರಿದ್ದಾರೆ. ಸಾಹಿತಿ ದಂಪತಿಗಳಾದ ಡಾ.ಅನುಪಮಾ ನಿರಂಜನ ಅವರು ಒಬ್ಬರಿಗೊಬ್ಬರು ಆಸರೆಯಾಗಿರುವಷ್ಟು ದಿನ ಜೋಪಾನವಾಗಿದ್ದರು. ಕ್ಯಾನ್ಸರ್‌ನಂಥ ಖಾಯಿಲೆಯನ್ನೇ ಗೆದ್ದು ಸಾವನ್ನು ಪೋಸ್ಟ್‌ಪೋನ್ ಮಾಡುತ್ತಾ, ಜೀವವನ್ನು ದಕ್ಕಿಸಿಕೊಳ್ಳುತ್ತಾ ಬದುಕಿದವರು. ಆದರೆ ಒಬ್ಬರು ಹೊರಟುಹೋದ ಕೆಲಕಾಲದಲ್ಲೇ ಮತ್ತೊಬ್ಬರು ಹೊರಟು ನಿಂತುಬಿಟ್ಟರು.

ಒಂಟಿತನವೆಂಬ ಭಯಂಕರ ಭಸ್ಮಾಸುರ ಇಳಿಸಂಜೆಯ ಗೆಳೆತನಕ್ಕೆ ಸಂಚಕಾರ ತರುವ ಬೇಟೆಗಾರನಂತೆ ಸಂಚರಿಸುವ ಆಸಾಮಿ ಅಂತ ಎಲ್ಲರಿಗೂ ಗೊತ್ತಿರುವ ಸತ್ಯ. ಆದರೆ ಈ ಐವತ್ತು–ಅರವತ್ತರ ಆಸುಪಾಸಿನ ವಯಸ್ಸಿದೆಯಲ್ಲ. ಅದು ಇದೆಲ್ಲಕ್ಕಿಂತ ಡಿಫರೆಂಟು. ಅದು ನಮಗೆ ನಮ್ಮನ್ನು ಅರ್ಥ ಮಾಡಿಸುವ ಗಡಿಯಾರದ ಕಾಲ. ನಮ್ಮ ಆಸಕ್ತಿ, ಮನಸ್ಥಿತಿ ಎರಡನ್ನೂ ಅದು ನಿಯಂತ್ರಿಸುತ್ತದೆ. ಒಂದು ವೇಳೆ ದೇಹದಲ್ಲಿ ಕಸುವಿದ್ದು ಸ್ವಲ್ಪ ಲವಲವಿಕೆ ಇದ್ದರಂತೂ ಈ ಇಳಿಸಂಜೆಯ ಆಸುಪಾಸಿನಲ್ಲೂ ಮತ್ತೆ ತಾರುಣ್ಯ ತಲೆಯೆತ್ತುತ್ತದೆ. ಸಡಗರದ ಸಂಗಾತಿಗಾಗಿ ಮನಸ್ಸು ಒತ್ತಾಯಿಸುತ್ತದೆ. ಹಾಗೆ ಹುಟ್ಟುವ ಆತ್ಮೋಲ್ಲಾಸದ ಮನಸ್ಸಿನ ಪರಿಭಾಷೆಯೇ 'ಇಳಿಸಂಜೆಯ ಗೆಳೆತನ' ಕನ್ನಡದಲ್ಲಿ 'ಸಂಗಾತಿಯ ಸಾಂಗತ್ಯ' ಇಂಗ್ಲಿಷಿನ **companion** ಎಂಬ ಹೊಸ ಟ್ರೆಂಡು.

ಪಶ್ಚಿಮ ದೇಶಗಳಲ್ಲಿ ಇದು ಯಾವ ಕಾಲದಿಂದಲೋ ಚಾಲ್ತಿಯಲ್ಲಿದೆ. ಆದರೆ ನಮ್ಮಂಥಾ ದೇಶಗಳಲ್ಲಿ ಕೆಲವು ಪ್ರಸಿದ್ಧರು ಮಾತ್ರ ಇಂಥಾ ಇಳಿಸಂಜೆಯ ಸಂಗಾತಿತನವನ್ನು ಅಧಿಕೃತವಾಗಿ ಘೋಷಿಸಿಕೊಂಡಿದ್ದಾರೆ. ನಾವು ಮತ್ತು ನಮ್ಮ ಸಮಾಜ ಖಂಡಿತವಾಗಿಯೂ ಇದನ್ನು ಲೇವಡಿ ಮಾಡದೆ ಬೆಂಬಲಿಸಬೇಕು. ವಯಸ್ಸಿನ ಕಾರಣಕ್ಕೆ ಗೇಲಿ ಮಾಡಬಾರದು. ಹಾಗೆ ನೋಡಿದರೆ ಅರವತ್ತರ ನಂತರದ ಪ್ರೇಮ, ಎಲ್ಲ ವಾಂಛೆಗಳನ್ನು ದಾಟಿ ನದಿಯಾಗಿ ಹರಿವ ಗೆಳೆತನದ ಗುಲ್‌ಮೊಹರ್.

ಈ ಗುಲ್‌ಮೊಹರಿನ ಖದರಿಗೆ ಎಂತೆಂಥಾ ಹಿರಿಯ ಜೀವಗಳು ಸೇರ್ಪಡೆಯಾಗಿವೆ ಎಂದರೆ ಕೆಲ ವರ್ಷಗಳ ಹಿಂದೆ, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶ್ರೀ ದಿಗ್ವಿಜಯ್‌ಸಿಂಗ್, ಟಿ.ವಿ. ನಿರೂಪಕಿ ಅಮೃತಾರಾಯ್ ಅವರನ್ನು ಮದುವೆಯಾದರು ಅಂತ ಫೇಸ್‌ಬುಕ್‌ನಲ್ಲಿ ಪೋಸ್ಟ್ ಆಗಿತ್ತು. ಆಗ ಅಮೃತಾರಾಯ್‌ಗೆ 44 ವರ್ಷ, ಹಿರಿಯ ನಾಯಕ ದಿಗ್ವಿಜಯ್‌ಸಿಂಗ್‌ಗೆ 68 ವರ್ಷ. ಇವರಿಬ್ಬರೂ ಮದುವೆಯಾದರೆಂಬುದಕ್ಕಿಂತ ಹೆಚ್ಚಾಗಿ ಇವರಿಬ್ಬರ ವಯಸ್ಸಿನ ಅಂತರವನ್ನು ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಮಂದಿ ಆಕ್ಷೇಪಿಸಿದ್ದರಂತೆ. ಹಾಗಂತ ಸ್ವತಃ ಅಮೃತಾರಾಯ್ ತಮ್ಮ ಫೇಸ್‌ಬುಕ್‌ನಲ್ಲಿ ಬರೆದುಕೊಂಡು ಈ ವಿಷಯದಲ್ಲಿ ತನಗೆ ಧೈರ್ಯ ತುಂಬಿದವರನ್ನು ನೆನೆದು ಧನ್ಯವಾದ ಅರ್ಪಿಸಿದ್ದರು. ವಯಸ್ಸಿನ ಕಾರಣಕ್ಕೆ ಹಾಗೆ ಲೇವಡಿ ಮಾಡಿದವರ ಬಗ್ಗೆ ಅಮೃತ ತಲೆಕೆಡಿಸಿಕೊಳ್ಳಲಿಲ್ಲ. ಇದು ಆಕೆಯ ಬದುಕು, ಅದು ಆಕೆಯ ನಿರ್ಧಾರ, ಅಸಲಿಗೆ ಆಕೆಗೂ 44 ದಾಟಿತ್ತು. ಆಕೆಯದು ಅನುರಾಗದ ಅಲೆಗಳ ಮೇಲೆ ತೇಲುವ ವಯಸ್ಸೂ ಅಲ್ಲ. ಈ ಐವತ್ತು–ಅರವತ್ತರ ಆಸುಪಾಸಿನ ಮದುವೆಗಳಾಗಲಿ ಅಥವಾ ಗೆಳೆತನಗಳಾಗಲಿ ದೇಹವಾಂಛೆಯ ಆಕರ್ಷಣೆಗಾಗಿ ಹುಟ್ಟುವುದಿಲ್ಲ. ರಸಿಕತೆ, ತುಂಟತನ, ಸೆಕ್ಸ್, ರೋಮಾಂಚನಗಳಿಗಾಗಿ ಮೈತಳೆಯುವುದಿಲ್ಲ. ಅದು ಅವರಿಗಾಗಿಯೇ ಬೇಕಾದ ಒಂದು 'ಕಂಪ್ಯಾನಿಯನ್'. ಮಾತನಾಡುವುದಕ್ಕೆ, ಆಡಿದ ಮಾತುಗಳನ್ನು ಕೇಳಿಸಿಕೊಳ್ಳುವುದಕ್ಕೆ ನಮ್ಮದು ಅನ್ನುವ ಸ್ವಾರ್ಥಕ್ಕೆ ಒಂದು ಕಿವಿ, ಒಂದು ಬೊಗಸೆ ಪ್ರೀತಿ, ಎಲ್ಲಕ್ಕಿಂತ ಹೆಚ್ಚಾಗಿ ಮಕ್ಕಳನ್ನು ನೋಡಿಕೊಂಡ ಹಾಗೆ ನೋಡಿಕೊಳ್ಳುವ ಒಂದು ಮಮಕಾರ ಬೇಕು.

ಹೀಗೆ ಪರಸ್ಪರ ಭಾವತೀವ್ರತೆಗಳನ್ನು ಹಂಚಿಕೊಳ್ಳಲು ಈ ವಯಸ್ಸಿನಲ್ಲಿ ಯಾರಾದರೂ ಜೊತೆಯಾದರೆ ಅದು ಅವರ ಊರುಗೋಲು. ಅಂದು 30.62 ಕೋಟಿ ಆಸ್ತಿ ಇರುವ ದಿಗ್ವಿಜಯ್‌ಸಿಂಗ್‌ಜಿಯ ಆಸ್ತಿಗಾಗಿ ಅಮೃತಾ ವಯಸ್ಸಾದ ಅವರನ್ನು ವರಿಸಿದ್ದಾರೆ ಎನ್ನುವ ಲೆಕ್ಕಾಚಾರದ ಮಾತುಗಳು ಕೇಳಿಬಂದಿತ್ತು. ಅದಕ್ಕೆ ಆಕೆ ಕೊಟ್ಟ ಉತ್ತರ ತೀಕ್ಷ್ಣವಾಗಿಯೇ ಇತ್ತು, ಅವರ ಆಸ್ತಿಯನ್ನು ಅವರ ಮಕ್ಕಳ ಹೆಸರಿಗೆ ಬರೆದು ಬರಲಿ! ಇಷ್ಟು ವರ್ಷ ನಾನು ದುಡಿದ ದುಡ್ಡಿದೆ. ಅದರಿಂದ ಕುಟುಂಬದ ಹೊಣೆಯನ್ನು ನಾನು ಹೊರಬಲ್ಲೆ ಎಂಬ ದೃಢೀಕರಣವನ್ನು ಆಕೆ ಟ್ವೀಟ್ ಮಾಡಿದ್ದಳು. ಅಷ್ಟಕ್ಕೂ ಆಕೆ ಕೂಡ ವಿವಾಹಬಂಧನದ ಅನುಭವ ಇರೋ ಹೆಣ್ಣು ಮಗಳು. ಅಮೃತಾಗೆ ಈ ಹಿಂದೆಯೇ ಮದುವೆಯಾಗಿತ್ತು. ಆಕೆಯ ಗಂಡ ಆನಂದ್ ಮತ್ತು ಈಕೆ ಸ್ವಇಚ್ಛೆಯಿಂದ ವಿಚ್ಛೇದನಕ್ಕಾಗಿ ಸಮ್ಮತಿ ಸೂಚಿಸಿ ಅರ್ಜಿ ಹಾಕಿಕೊಂಡಿದ್ದರು. ಇವರಿಬ್ಬರ ಮದುವೆಯ ಸಂಬಂಧವನ್ನು ಆಕೆಯ ಮೊದಲ ಪತಿ ಆನಂದ್ ಗೌರವಿಸಿ ಆಗಿತ್ತು, ಆದುದರಿಂದಲೇ ಅವರ ಮದುವೆಗೆ ಆತ ಗ್ರೀನ್ ಸಿಗ್ನಲ್ ಕೊಟ್ಟಿದ್ದಾನೆ.

ಅದೇನೆ ಇರಲಿ, ಎಲ್ಲವೂ ಸರಿಯಿದ್ದ ಅನೇಕರಿಗೇನೆ ತಮ್ಮ ಮನದಾಳದ ಮಾತುಗಳನ್ನು ಹೇಳಿಕೊಳ್ಳಲಿಕ್ಕೆ ಒಬ್ಬ ಗೆಳೆಯನೋ, ಒಬ್ಬ ಗೆಳತಿಯೋ ಬೇಕೆಂಬ ಆಸೆಯಿರುತ್ತದೆ. ಆತ್ಮೀಯತೆಯ ಕಾರಣಕ್ಕಾಗಿಯೇ ಕೆಲವರು ಅಂತಹವರನ್ನು ಹುಡುಕುತ್ತಿರುತ್ತಾರೆ. ಹೆಂಡತಿಯಿದ್ದೂ ಬೇರೊಬ್ಬ ಹೆಣ್ಣು ಮಗಳ ಮುಂದೆ ಬೋರಲು ಬಿದ್ದ ಮನ ತನ್ನ ತಾಪತ್ರಯಗಳಿಗೆಲ್ಲಾ ಉತ್ತರ ಹುಡುಕಲು ಹಂಬಲಿಸುತ್ತದೆ. ಹೆಂಡತಿಯ ಜೊತೆ ಮನೆಯ ಜವಾಬ್ದಾರಿ ಹಂಚಿಕೊಳ್ಳುವ ಮನಸ್ಸು ಗೆಳತಿಯ ಜೊತೆ ಆತ್ಮನಿವೇದನೆಯ ಸಂಕಷ್ಟಕ್ಕಾಗಿ ಹಾತೊರೆಯುತ್ತಿರುತ್ತದೆ. ಹಾಗೆ ಕುದುರಿದ ಸಂಬಂಧಗಳಲ್ಲಿ ದೇಹಾಕರ್ಷಣೆಯನ್ನೂ ಮೀರಿದ ಬೇರೊಂದು ಆತ್ಮಾನುಸಂಧಾನ ಇರಬಹುದಲ್ಲವೆ? ಇವತ್ತು ಹಾಗೆ ಗುಟ್ಟಾಗಿದ್ದ ಸ್ನೇಹ ಸಂಬಂಧಗಳು ಬದುಕಿನ ಇಳಿ ಸಂಜೆಯ ಹೊತ್ತಿನಲ್ಲಿ ರಟ್ಟಾಗುತ್ತಿವೆ. ಒಗಟಿನಂತಿದ್ದ ಜೀವನಕ್ಕೆ ಅರ್ಥ ಹೇಳಿದಂತೆ, ಈ ವಿಷಯದ ಮೇಲೆಯೇ ಕವಿತಾ ಲಂಕೇಶ್, ಪ್ರೀತಿ–ಪ್ರೇಮ–ಪ್ರಣಯ, ಅಂತ ಒಂದು ಸಿನಿಮಾ ಮಾಡಿದ್ದು ನಿಮಗೆ ನೆನಪಿರಬೇಕು. ವಯಸ್ಸಾದ ಮೇಲೆ ಹುಟ್ಟುವ ಆ ಸಂಗಾತಿತನದ ಬೇಕು–ಬೇಡಗಳ ಜತನಗಳನ್ನು ನಟ ಅನಂತನಾಗ್–ಭಾರತಿ ವಿಷ್ಣುವರ್ಧನ್ ತುಂಬ ಚೆನ್ನಾಗಿ ಅಭಿನಯಿಸಿದ್ದರು.

ಪ್ರೀತಿಯೇ ಬೇರೆ, ಪ್ರೇಮವೇ ಬೇರೆ, ಪ್ರಣಯವೇ ಬೇರೆ. ಇಲ್ಲಿ ಅದಿರದಿದ್ದರೂ ನಡೆದು ಹೋಗುತ್ತದೆ ಜೀವನ. ಬೇಕಾಗಿರುವುದು ಜೊತೆಗಿರುವ ಗೆಳೆತನ ಅಷ್ಟೆ. ಅದಕ್ಕೆ ವಯಸ್ಸಿನ ಅಂತರ ಅಡ್ಡ ಬರುವುದಿಲ್ಲ. ಹಾಗೆ ನೋಡಿದರೆ ಬಹಳಷ್ಟು ಜನ ತಮಗಿಂತ ದೊಡ್ಡವರ ಜೊತೆ ಸ್ನೇಹ ಇಟ್ಟುಕೊಂಡಿರುತ್ತಾರೆ. ಕೆಲವರು ತಮಗಿಂತ ಚಿಕ್ಕವರ ಜತೆಯೂ ಸ್ನೇಹದ ಸಲುಗೆಯಿಂದಲೇ ಇರುತ್ತಾರೆ. ಪರಸ್ಪರ ಒಬ್ಬರನ್ನೊಬ್ಬರು ತುಂಬಾ ಹಚ್ಚಿಕೊಂಡಿರುತ್ತಾರೆ. ಅದು opposite sexನಲ್ಲೇ ಆಗಬೇಕಿಲ್ಲ. ಗಂಡೂ ಆಗಬಹುದು, ಹೆಣ್ಣು ಆಗಬಹುದು. ದೇಹಕ್ಕೆ ವಯಸ್ಸಾದರೂ ಮನಸ್ಸಿಗೆ ವಯಸ್ಸಾಗಿರಬಾರದು ಅಷ್ಟೆ. ಒಮ್ಮೆ ನಮ್ಮ ಮೈಸೂರಿನ ಹಿರಿಯನಟ, ಎಂ.ಪಿ. ಶಂಕರ್ ಅವರ ಪತ್ನಿ ಶ್ರೀಮತಿ ಮಂಜುಳಾ ಎಂ.ಪಿ. ಶಂಕರ್ ಒಂದು ಪ್ರಶ್ನೆ ಕೇಳಿ ಬಿಟ್ಟಿದ್ದರು. ನಾನು ಮತ್ತು ಎಂ.ಪಿ.ಶಂಕರ್ ಬಹಳ ಹಿಂದಿನಿಂದಲೂ ತುಂಬಾ ಆತ್ಮೀಯರು, ಹೆಚ್ಚು ಜೊತೆಗಿರುತ್ತಿದ್ದೆವು. ಅವರ ವಯಸ್ಸು ಆಗ 73, ನನಗೆ 33. ಯಾವತ್ತೋ ಒಂದು ದಿನ ಮನೆಯಲ್ಲಿ ಫೋನ್ ರಿಂಗಾಗಿದೆ. ಎಂ.ಪಿ. ಶಂಕರ್ ತಮ್ಮ ಹೆಂಡತಿಗೆ ಫೋನ್ ರಿಂಗಾಗ್ತಿದೆ ನೋಡು ಎಂದರಂತೆ. ಅದು ಯಾರದೋ ಫೋನಿಗೆ ಅವರು ಉತ್ತರಿಸಿ ಸುಮ್ಮನಾಗಿದ್ದಾರೆ. ಆದರೆ ಇವರು ಸುಮ್ಮನಾಗಲ್ಲ. ಯಾರದು ಫೋನು ರಮೇಶ್‌ದ? ಅಂದಿದ್ದಾರೆ. ಕೂಡಲೇ ಪತ್ನಿಯ ಪ್ರಶ್ನೆ ಏನು ಗೊತ್ತಾ? ಬರೋ ಫೋನೆಲ್ಲಾ ಅವರದ್ದೇನಾ? ಅಷ್ಟಕ್ಕೂ ನಿಮ್ಮ ವಯಸ್ಸೇನು? ಅವರ ವಯಸ್ಸೇನು? ಅದ್ಯಾಕೆ ಅಷ್ಟೊಂದು ಹಚ್ಚಿಕೊಂಡಿದ್ದೀರಿ ಅವರನ್ನ? ನೀವಿಬ್ರೂ ಅಷ್ಟೊತ್ತು ಜೊತೆಗಿದ್ದು ಏನು ಮಾತಾಡ್ತೀರಿ? ಅಂತ ತಮಾಷೆಯಾಗಿಯೇ ಕೇಳಿದ್ರಂತೆ. ಹಾಗೆ ಕೇಳಿದೆ ಅಂತ ನಾನು ಒಮ್ಮೆ ಅವರ ಮನೆಗೆ ಹೋದಾಗ ನನಗೂ ಕೂಡ ಹೇಳಿ ನಕ್ಕರು ಅಮ್ಮ.

ನೀವೇನೆ ಹೇಳಿ ಗೆಳೆತನಕ್ಕೆ, ಬಾಂಧವ್ಯಕ್ಕೆ, ಪ್ರೀತಿಗೆ, ಮಮಕಾರಕ್ಕೆ, ವಾತ್ಸಲ್ಯಕ್ಕೆ, ಅಕ್ಕರೆಗೆ, ವಯಸ್ಸಿನ ಅಂತರವಿದೆಯಾ? ಅದು ಅದರಷ್ಟಕ್ಕೇ ಹುಟ್ಟಿಕೊಳ್ಳುವ ಆಕಸ್ಮಿಕ ಆತ್ಮೋಲ್ಲಾಸ ಅಲ್ಲವಾ? ಪರಿಚಯವಿದ್ದ ಮಾತ್ರಕ್ಕೆ ಎಲ್ಲರೂ ನಮಗೆ ಇಷ್ಟ ಆಗ್ತಾರ? ಎಲ್ಲರ ಜೊತೆಯೂ ಎಲ್ಲವನ್ನೂ ಹಂಚಿಕೊಳ್ಳಲು ಸಾಧ್ಯವಾ? ಮನದ ಮಾತಿನ ಮಾಂತ್ರಿಕತೆ ಅನ್ನೋದು ತನಗೆ ಬೇಕಾದವರನ್ನು ತಾನೇ ಹುಡುಕಿಕೊಳ್ಳುವ ಹುಡುಕಾಟವಲ್ಲವಾ? ಅದಕ್ಕೆ ವಯಸ್ಸಿನ ಹಂಗಿದೆಯಾ? ಅದಕ್ಕೆ ಗಂಡು ಹೆಣ್ಣುಗಳೆಂಬ ಲಿಂಗಭೇದವಿದೆಯಾ? ಒಬ್ಬರಿಗೊಬ್ಬರ ಸ್ವಭಾವಗಳು ಹೊಂದಾಣಿಕೆಯಾದರೆ ಸಾಕಲ್ಲವೆ? ಇಳಿಸಂಜೆಯ ಗೆಳೆತನಕ್ಕೆ ಆಯಸ್ಸು ಹೆಚ್ಚುತ್ತದೆ. ಜೀವನದುದ್ದಕ್ಕೂ ದುಡಿದು ದಣಿದ ಜೀವಕ್ಕೆ ಹೊಸ ಸಂಗಾತಿ ಸಿಗುವುದಾದರೆ ಅದು ಬೇಸರ ಕಳೆವ ಆಸರೆಗಾಗಿಯೇ ಹೊರತು ಸರಸ–ಸಲ್ಲಾಪಗಳ ಸೂಚನೆಗಲ್ಲ ಅಲ್ಲವೇ?

ಎಷ್ಟೋ ಜನ ಮದುವೆಯಾಗದ ಗಂಡಸರು, ಹೆಂಗಸರು ತಮ್ಮ ಬದುಕಿನ ಇಳಿಸಂಜೆಯ ಹೊತ್ತಲ್ಲಿ ಹೊತ್ತು ಕಳೆಯುವ ಸಲುವಾಗಿ ತಮ್ಮ ಸ್ವಭಾವಕ್ಕೆ ಸರಿಹೊಂದುವವರ ಜೊತೆ ನಾಲ್ಕು ಮಾತಾಡುತ್ತಿರುತ್ತಾರೆ. ಇಲ್ಲಿ ಅದನ್ನೂ ಲೇವಡಿ ಮಾಡಿಬಿಟ್ಟರೆ ಹೇಗೆ? ಹರಪ್ಪ ಮೆಹಂಜದಾರೋ ಸಂಸ್ಕೃತಿಯ ಮ್ಯೂಸಿಯಂ ಪೀಸುಗಳ ಹಾಗೆ ಈ ವಯಸ್ಸಾದವರ ಜೋಡಿಯನ್ನು ನೋಡಿಬಿಟ್ಟರೆ ಹೇಗೆ? ಇನ್ನೂ ಕೆಲವರು ಆಜೀವಪರ್ಯಂತ ಅವಿವಾಹಿತರಾಗಿದ್ದು ಅಸ್ಥಿರತೆಯನ್ನೇ ಅನುಭವಿಸಿರುತ್ತಾರೆ. ಜೊತೆಗೆ ವಯಸ್ಸಾದ ಮೇಲೆ ಕಾಡುವ ಒಂಟಿತನಕ್ಕೆ ಬಲಿಯಾಗುತ್ತಾರೆ. ಯಾರಾದರೂ ಮಾತಿಗೆ ಸಿಕ್ಕರೆ ಸ್ವಲ್ಪ ಜಾಸ್ತಿಯೇ ಎನಿಸುವಷ್ಟು ಮಾತಾಡುತ್ತಾರೆ ಎಂದಿಟ್ಟುಕೊಳ್ಳಿ. ಅಷ್ಟು ಸಾಕು, ಆ ವಯಸ್ಸಿನಲ್ಲೂ ನೆರೆ–ಹೊರೆಯವರ ಅನುಮಾನ ಅವರ ಗೆಳೆತನವನ್ನು ಆಪೋಶನ ತೆಗೆದುಕೊಂಡು ಬಿಡುತ್ತದೆ.

ಅಷ್ಟಕ್ಕೂ ಅವರು ಮಾತಾಡುವುದಾದರೂ ಏನನ್ನು? ಅವರ ಕಾಲದ ಹಳೆಯ ಹಾಡು. ಆವತ್ತಿನ ಪತ್ರಿಕೆಯ ಕಾಲಂ, ಇವತ್ತಿನ ಕೆಲವು ನೋಡಲಾಗದ ಸಿನಿಮಾ, ಬದಲಾಯಿಸಬೇಕಾದ ಮಾತ್ರೆಗಳು, ತಮ್ಮ ಕಾಲದ ಹರಟೆ, ನಗುವೇ ಬಾರದ ಜೋಕ್ಸುಗಳು ಇಷ್ಟೆ, ಅದಕ್ಕೂ ತತ್ವಾರವಾಗಿ ಹೋದರೆ ಹೇಗೆ? ಹಾಗಾಗಬಾರದೆಂದರೆ ಹೀಗೆ ತಮ್ಮ ಇಳಿಸಂಜೆಯ ಗೆಳೆತನಗಳನ್ನು ಅಧಿಕೃತವಾಗಿ ಹೇಳಿಕೊಳ್ಳಬೇಕು. ಮಾತಾಡುವವರು ಎಷ್ಟು ದಿನ ಮಾತಾಡಿಯಾರು? ಭಕ್ತಿ ಸಂಗೀತದ ರಾಗ ಮಾಧುರ್ಯದ ವಿದ್ಯಾಭೂಷಣರು ತಮಗಿಂತ ಸುಮಾರು 20 ವರ್ಷ ಅಂತರವಿದ್ದ ಕಾನೂನು ವಿದ್ಯಾರ್ಥಿನಿ ರಮಾ ಜೊತೆಗಿದ್ದ ಸ್ನೇಹಕ್ಕೆ ಎದ್ದ ಗದ್ದಲಕ್ಕೆ ಉತ್ತರವಾಗಿ ಆಕೆಯನ್ನು ಮದುವೆಯೇ ಆಗಿ ಮಠ ಬಿಟ್ಟು ಸಂಸಾರಿಯಾದ ಕಥೆ ನಮ್ಮ ಮುಂದೆ ಇದೆ.

ಎನ್.ಟಿ.ರಾಮರಾಯರಿಗೂ ಲಕ್ಷ್ಮೀ ಶಿವ ಪಾರ್ವತಿಗೂ ವಯಸ್ಸಿನಲ್ಲಿ ಅಜಗಜಾಂತರ ವ್ಯತ್ಯಾಸವಿತ್ತು. ಆದರೆ ಎನ್.ಟಿ. ರಾಮರಾಯರ ಇಳಿಸಂಜೆಯ ಗೆಳೆತನಕ್ಕೆ ವಯಸ್ಸು ಕ್ಯಾರೇ ಅನ್ನಲಿಲ್ಲ. ಇನ್ನೂ ತಮಾಷೆಯೆಂದರೆ ಚಾರ್ಲ್ಸ್ ಶೋಭರಾಜ್ ಎಂಬ ಅಂತಾರಾಷ್ಟ್ರೀಯ ಕ್ರಿಮಿನಲ್ ಒಬ್ಬನನ್ನ ಸಂದರ್ಶನ ಮಾಡಲು ಹೋಗಿದ್ದ 20 ವರ್ಷದ ಹುಡುಗಿಯೊಬ್ಬಳು ಆತನ ಆಕರ್ಷಣೆಗೆ ಬಿದ್ದು ಆತನನ್ನು ಮದುವೆಯಾದಳು. ಆತ ಆಗ ಜೈಲಿನಲ್ಲಿದ್ದ, ಅವರಿಬ್ಬರಿಗೂ ದೇಹ ಸಂಪರ್ಕವೇ ಆಗಲಿಲ್ಲ. ಕರೀನಾ ಕಪೂರ್ ಮದುವೆಯಾದ ಸೈಫ್ ಆಲಿ ಖಾನ್‌ಗೂ, ಆಕೆಯ ವಯಸ್ಸಿಗೂ ಅಂತರವೇನು ಕಡಿಮೆ ಇದೆಯಾ? ಧರ್ಮೇಂದ್ರ ಹೇಮಾಮಾಲಿನಿಯ ವಯಸ್ಸಿನ ಅಂತರವೇನು ಕಡಿಮೆ ಇದೆಯಾ? ಸಚಿನ್‌ಗಿಂತ ಆತನ ಪತ್ನಿ ಅಂಜಲಿ, ನಟ ವಿಷ್ಣುವರ್ಧನ್‌ಗಿಂತ ಶ್ರೀಮತಿ ಭಾರತಿ ವಿಷ್ಣುವರ್ಧನ್ ಇವರೆಲ್ಲಾ ವಯಸ್ಸಿನಲ್ಲಿ ದೊಡ್ಡವರಿದ್ದರಲ್ಲ! ಇವರೆಲ್ಲಾ ದೊಡ್ಡ ಹೆಸರು ಮಾಡಿ ಬದುಕಲಿಲ್ಲವಾ?

ಸಂಗಾತಿತನಕ್ಕೆ, ಗೆಳೆತನಕ್ಕೆ, ಇಳಿಸಂಜೆಯಲ್ಲಿ ಹೊತ್ತು ಕಳೆಯುವ ಸಂತೋಷದಿಂದ ವಯಸ್ಸಿನ ಅಂತರಕ್ಕೆ ಕನಸುಗಳು ಬೇಕಿಲ್ಲ, ಒಂಟಿತನದ ಬೇಸರಕ್ಕೆ, ಮನಸ್ಸಿಗೆ ಮುದ ನೀಡುವ ಸಾಂತ್ವನ ಒಟ್ಟಿಗೆ ಕುಳಿತು ಕಾಫಿ ಕುಡಿಯುವಾಗ ಆಸೆಗೆ ಬಿದ್ದು ಕಾಫಿಗೆ ಸಕ್ಕರೆ ಹಾಕಿಕೊಳ್ಳಲು ಹೋದರೆ ನಮ್ಮನ್ನು ಕಣ್ಣಲ್ಲೇ ಗದರಿಸಿ ನಿಮಗೆ ಶುಗರಿದೆ ಬೇಡ ಎಂದು ತಡೆಯುವ ಆಸರೆಯ ಕೈ, ಅಪ್ಪಿತಪ್ಪಿ ಕನ್ನಡಕ ಕೈಜಾರಿ ಕೆಳಗೆ ಬಿದ್ದರೆ, ಬಿದ್ದ ಕನ್ನಡಕದ ಫ್ರೇಮು ಸರಿ ಮಾಡಿಕೊಡುವ ತನ್ನವರೆಂಬ ಆಧಾರದ ಊರುಗೋಲುಗಳು ಬದುಕಿನ ಮುಸ್ಸಂಜೆಯಲ್ಲಿರುವ ಎಲ್ಲರಿಗೂ ಸಿಗಲಿ. ಕಾರಣ ಕವಿಯ ಮಾತಿನಂತೆ, 'ಬದುಕು ಮಾಯೆಯ ಮಾಟ ವಿಧಿಯನೊರೆತೆರೆಯಾಟ' ಎಲ್ಲರೂ ಇಲ್ಲಿ ಬಾಗಲೇಬೇಕು, ಬದುಕು ದೊಡ್ಡದು. ಇಲ್ಲದಿದ್ದರೆ ಒಂಟಿತನವೆಂಬುದು ನಮ್ಮನ್ನು ನೋಯಿಸುತ್ತದೆ. ಅದಕ್ಕಾಗಿ ಸ್ವಭಾವಗಳ ಹೊಂದಾಣಿಕೆಯಿರುವ ಮನಸ್ಸುಗಳು, ಅನುಬಂಧದ ಸಂಬಂಧಗಳನ್ನು ಕುದುರಿಸಿಕೊಂಡರೆ ನಿಚ್ಚಳವಾದ ಬೆಳಕಿನೆಡೆಗೆ ಬದುಕು ಮೆರವಣಿಗೆ ಹೊರಡುತ್ತದೆ. ಅಪಹಾಸ್ಯದ ಆತಂಕಕ್ಕೆ ಹೆದರಿ ಗುಟ್ಟಾಗಿ ಉಳಿದವರು ಬಲಹೀನರಂತೆ ಪ್ರೊಜೆಕ್ಟ್ ಆಗುತ್ತಾರೆ. ಜಗತ್ತಿನ ಎಲ್ಲ ದೇಶವಾಸಿಗಳ ಬದುಕೂ ಹೀಗೆ ಇರುವುದರಿಂದ ಇಳಿಸಂಜೆಯ ಗೆಳೆತನಕ್ಕೆ ವಯಸ್ಸಿನ ಹಂಗೇಕೆ? ನೀವೇನಂತೀರಿ?

## ಅಲೆಯನ್ಸ್ ಕ್ಲಬ್ಸ್ ಪ್ರಥಮ ವಾರ್ಷಿಕೋತ್ಸವ; ಸೇವಾ ಕಾರ್ಯ ಚುರುಕುಗೊಳಿಸಲು ನಿರ್ಧಾರ

ಮೈಸೂರು,ಫೆ.3–ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್‌ನ ಪ್ರಥಮ ವಾರ್ಷಿಕೋತ್ಸವವು ನಗರದ ಹೂಟಗಳ್ಳಿಯ ಶ್ರೀ ಅನಂತೇಶ್ವರ ಭವನದಲ್ಲಿ ನಡೆಯಿತು.

ಜಿಲ್ಲಾ ಗೌರ್ನರ್ ಎಂ.ಎಂ.ಬಾಲಕೃಷ್ಣರಾಜು ಸಿರಿ ಬಾಲು ನೇತೃತ್ವದಲ್ಲಿ ನಡೆದ ಸಮ್ಮೇಳನದಲ್ಲಿ ಕ್ಲಬಿನ ಸಂಸ್ಥಾಪಕ ತಿರುಪತಿ ರಾಜು ಮುಖ್ಯ ಅತಿಥಿಯಾಗಿದ್ದರು. ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ.ಬೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕ್ಲಬ್ಬಿನ ಹಿಂದಿನ ಅಂತಾರಾಷ್ಟ್ರೀಯ ನಿರ್ದೇಶಕ ಜಿ.ಪಿ. ದಿವಾಕರ್, ಅಂತಾರಾಷ್ಟ್ರೀಯ ಸಮಿತಿ ಛೇರ್ಮನ್‌ರಾದ ಕೆ.ಎಂ. ಮುನಿಯಪ್ಪ, ಅಜಂತ ರಂಗಸ್ವಾಮಿ, ಜಿಲ್ಲಾ ಸಮಿತಿಯ ಜಿ.ಎಸ್.ನಂಜುಂಡಸ್ವಾಮಿ, ಎಸ್.ವೆಂಕಟೇಶ್, ಮಹಬಲೇಶ್ವರ ಬೈರಿ, ಎಂ.ಎಸ್. ಸಂತೋಷ್‌ಕುಮಾರ್, ಎನ್.ಗಂಗಾಧರಪ್ಪ, ಆರ್.ಕೃಷ್ಣೋಜಿರಾವ್, ಎನ್. ಬೆಟ್ಟೇಗೌಡ, ವಿ.ವೆಂಕಟೇಶ್ ಮೊದಲಾದವರು ಪಾಲ್ಗೊಂಡಿದ್ದರು.



ಮೈಸೂರಿನ ಹೂಟಗಳ್ಳಿ ಶ್ರೀ ಅನಂತೇಶ್ವರ ಭವನದಲ್ಲಿ ನಡೆದ ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್‌ನ ಪ್ರಥಮ ವಾರ್ಷಿಕೋತ್ಸವವನ್ನು ಅಂತಾರಾಷ್ಟ್ರೀಯ ಸಂಸ್ಥಾಪಕ ತಿರುಪತಿ ರಾಜು, ನಿರ್ದೇಶಕ ನಾಗರಾಜ ವಿ.ಬೈರಿ ಉದ್ಘಾಟಿಸಿದರು.

ಅಂತಾರಾಷ್ಟ್ರೀಯ ನಿರ್ದೇಶಕರಾಗಿ ನಾಗರಾಜ ವಿ.ಬೈರಿ ಪುನರಾಯ್ಕೆಯಾದರು. ಜಿಲ್ಲಾ ಗೌರ್ನರ್ ಆಗಿ ಎಸ್.ವೆಂಕಟೇಶ್, ಕ್ರಮವಾಗಿ ಒಂದು, ಎರಡು ಹಾಗೂ ಮೂರನೇ ಉಪ ರಾಜ್ಯಪಾಲರಾಗಿ ಮಹಬಲೇಶ್ವರ ಬೈರಿ, ಎಂ.ಎಸ್.ಸಂತೋಷ್ ಕುಮಾರ್, ಎನ್.ಗಂಗಾಧರಪ್ಪ ಆಯ್ಕೆಯಾದರು.

ಶ್ರೀಶೈಲ, ಕೃಷ್ಣೋಜಿರಾವ್, ಎನ್.ಬೆಟ್ಟೇಗೌಡ, ಆರ್.ಎಸ್.ಗಣೇಶ್, ಆರ್.ಸಿ. ಶೋಭಾ ಅವರನ್ನು ಜಿಲ್ಲಾ ಕೋರ್ ಕಮಿಟಿಗೆ ಆಯ್ಕೆ ಮಾಡಲಾಯಿತು. ಕಳೆದ ಒಂದು ವರ್ಷದಲ್ಲಿ ಮೈಸೂರು, ಮಂಡ್ಯ, ಬೆಂಗಳೂರಿನಲ್ಲಿ ಹಲವಾರು ಕ್ಲಬ್‌ಗಳನ್ನು ಸ್ಥಾಪಿಸಲಾಗಿದೆ. ಇತ್ತೀಚೆಗೆ ಉಡುಪಿಯಲ್ಲೂ ಕ್ಲಬ್ ಉದ್ಘಾಟನೆಯಾಗಿದೆ.

ಮುಂದೆ ಕೊಡಗು ಹಾಗೂ ಶಿವಮೊಗ್ಗದಲ್ಲೂ ಆರಂಭಿಸಲಾಗುವುದು. ಸೇವಾ ಚಟುವಟಿಕೆಗಳನ್ನು ಮತ್ತಷ್ಟು ಚುರುಕುಗೊಳಿಸಲಾಗುವುದು ಎಂದು ನಾಗರಾಜ ವಿ.ಬೈರಿ ಪ್ರಕಟಿಸಿದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*

# ಮಹಾ ಕುಂಭಮೇಳ: ಇಲ್ಲಿವರೆಗೆ ಸಂಗಮದಲ್ಲಿ 35 ಕೋಟಿ ಜನರ ಸ್ನಾನ



**ಪ್ರಯಾಗ್‌ರಾಜ್:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಜಗತ್ತಿನ ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮ ಮಹಾ ಕುಂಭಮೇಳದ ವೇಳೆ ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮ ಸ್ಥಳದಲ್ಲಿ ಇಲ್ಲಿಯವರೆಗೂ ಒಟ್ಟು 35 ಕೋಟಿ ಜನರು ಸ್ನಾನ ಮಾಡಿದ್ದಾರೆ.

ವಸಂತ ಪಂಚಮಿಯ ಅಮೃತ ಸ್ನಾನದ ಶುಭ ಸಂದರ್ಭದಲ್ಲಿ ಉತ್ತರಪ್ರದೇಶ ಸರ್ಕಾರ ಬಿಡುಗಡೆ ಮಾಡಿರುವ ಅಧಿಕೃತ ಅಂಕಿ ಅಂಶಗಳ ಪ್ರಕಾರ, ಮಹಾಕುಂಭ ಪ್ರಾರಂಭವಾದಾಗಿನಿಂದ ಇಲ್ಲಿವರೆಗೂ ಒಟ್ಟು 350 ಮಿಲಿಯನ್ (35 ಕೋಟಿ)ಗೂ ಅಧಿಕ ಜನರು ಸ್ನಾನ ಮಾಡಿದ್ದಾರೆ. ಸೋಮವಾರ ಬೆಳಗ್ಗೆ 8 ಗಂಟೆಯ ಹೊತ್ತಿಗೆ 6.2 ಮಿಲಿಯನ್ ಭಕ್ತರು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿ ಐತಿಹಾಸಿಕ ದಾಖಲೆ ಬರೆದಿದ್ದಾರೆ. ಮಹಾಕುಂಭ ಮುಗಿಯಲು ಇನ್ನೂ 23 ದಿನಗಳು ಉಳಿದಿದ್ದು, ಒಟ್ಟು ಸಂಖ್ಯೆ 500 ಮಿಲಿಯನ್‌ಗೂ ಅಧಿಕ ಜನರು ಸ್ನಾನ ಮಾಡುವ ನಿರೀಕ್ಷೆಯಿದೆ.


ಪವಿತ್ರ ಸ್ನಾನದ ಮೂಲಕ ದೈವಿಕ ಆಶೀರ್ವಾದವನ್ನು ಪಡೆಯಲು ಭಾರತ ಮತ್ತು ಪ್ರಪಂಚದಾದ್ಯಂತ ಲಕ್ಷಾಂತರ ಜನರು ಪ್ರತಿದಿನ ಆಗಮಿಸುತ್ತಿದ್ದಾರೆ. ಭಾನುವಾರ ಸುಮಾರು 12 ಮಿಲಿಯನ್ ಭಕ್ತರು ಸ್ನಾನ ಮಾಡಿದ್ದಾರೆ. ಇವರಲ್ಲಿ 1 ಮಿಲಿಯನ್ ನಷ್ಟು ಸಾಧು ಸಂತರು, ವಿದೇಶಿ ಭಕ್ತರು ಸೇರಿದ್ದಾರೆ. ಮೌನಿ ಅಮಾವಾಸ್ಯೆಯಿಂದ ಸಂಗಮದಲ್ಲಿ ಅತಿ ಹೆಚ್ಚು 80 ಮಿಲಿಯನ್ ಭಕ್ತರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದರು. ಮಕರ ಸಂಕ್ರಾಂತಿ ದಿನದಂದು ಸುಮಾರು 35 ಮಿಲಿಯನ್ ಜನರು, ಜ.30 ರಂದು ಸುಮಾರು 20 ಮಿಲಿಯನ್ ಭಕ್ತರು, ಫೆಬ್ರವರಿ 1ರಂದು 17 ಮಿಲಿಯನ್ ಜನರು ಸ್ನಾನ ಮಾಡಿದ್ದರು.

## ಕಾಲ್ತುಳಿತದ ಹಿಂದೆ ಪಿತೂರಿ!: 16,000 ಮೊಬೈಲ್ ನಂಬರ್‌ಗಳ ಹಿಂದೆ ತನಿಖಾ ಆಯೋಗದ ಕಣ್ಣು

**ಪ್ರಯಾಗ್‌ರಾಜ್:** ಮಹಾ ಕುಂಭಮೇಳದಲ್ಲಿ ಮೌನಿ ಅಮಾವಾಸ್ಯೆ ದಿನದಂದು (ಜ.29) ಸಂಭವಿಸಿದ ಕಾಲ್ತುಳಿತ ದುರಂತದ ಘಟನೆಗೆ ಕಾರಣವಾದ ಅಂಶಗಳ ಬಗ್ಗೆ ಯೋಗಿ ಆದಿತ್ಯನಾಥ್ ಸರ್ಕಾರ ತನಿಖೆಗೆ ಆದೇಶಿಸಿದ್ದು, ತನಿಖಾಧಿಕಾರಿಗಳು ಪಿತೂರಿ ನಡೆದಿರುವ ಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ಮೂಲಗಳ ಪ್ರಕಾರ ತನಿಖಾ ತಂಡ ಕಾಲ್ತುಳಿತದ ದಿನದಂದು ಸಂಗಮದ ತುದಿ ಭಾಗದಲ್ಲಿ ಸಕ್ರಿಯವಾಗಿದ್ದ 16,000 ಮೊಬೈಲ್ ನಂಬರ್‌ಗಳ ಮೇಲೆ ಕಣ್ಣಿಟ್ಟಿದ್ದು, ಈ ಕುರಿತ ಡೇಟಾ ಅನಾಲಿಸಿಸ್ ನಡೆಸುತ್ತಿದೆ. ಸಂಗಮದ ತಟದಲ್ಲಿ ಅಂದು ಸಕ್ರಿಯವಾಗಿದ್ದ ಮೊಬೈಲ್ ನಂಬರ್‌ಗಳ ಪೈಕಿ ಹಲವು ನಂಬರ್‌ಗಳು ಈಗ ಸ್ವಿಚ್‌ಆಫ್ ಆಗಿವೆ ಎಂದು ತಿಳಿದುಬಂದಿದೆ. ನಿಯಂತ್ರಣ ಕೊಠಡಿಯಲ್ಲಿ ಸಂಗ್ರಹಿಸಲಾದ ಸಿಸಿಟಿವಿ ದೃಶ್ಯಾವಳಿಗಳಿಂದ ಶಂಕಿತರನ್ನು facial recognition app ಮೂಲಕ ಗುರುತಿಸಲಾಗುತ್ತಿದೆ. 4ನೇ ಅಮೃತ ಸ್ನಾನ ಫೆ.12ರಂದು ಮಾಘ ಪೂರ್ಣಿಮೆಯಂದು ನಡೆಯಲಿದ್ದರೆ, ಕೊನೆಯದು ಫೆ.26ರಂದು ಮಹಾ ಶಿವರಾತ್ರಿಯಂದು ನಡೆಯಲಿದೆ.

## ಕಾಲ್ತುಳಿತ; ಚರ್ಚೆಗೆ ಆಗ್ರಹಿಸಿ ಲೋಕಸಭೆಯಲ್ಲಿ ಪ್ರತಿಭಟನೆ; ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳಿಂದ ಸಭಾತ್ಯಾಗ

**ನವದೆಹಲಿ:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭದಲ್ಲಿ ಕಳೆದ ವಾರ ಸಂಭವಿಸಿದ ಕಾಲ್ತುಳಿತದಲ್ಲಿ ಹಲವಾರು ಮಂದಿ ಸಾವಿಗೀಡಾಗಿದ್ದು, ಈ ಬಗ್ಗೆ ತಕ್ಷಣವೇ ಚರ್ಚೆ ನಡೆಸಬೇಕೆಂಬ ತಮ್ಮ ಬೇಡಿಕೆಯನ್ನು ಸಭಾಪತಿ ಅಂಗೀಕರಿಸದ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳು ಸೋಮವಾರ ರಾಜ್ಯಸಭೆಯಿಂದ ಹೊರನಡೆದವು. ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತ ವಿಚಾರ ಸೇರಿದಂತೆ ವಿವಿಧ ವಿಚಾರಗಳ ಕುರಿತು ಚರ್ಚಿಸಲು ಇಂದಿನ ಕಾರ್ಯಕಲಾಪದ ಪಟ್ಟಿಯನ್ನು ಅಮಾನತುಗೊಳಿಸುವಂತೆ ಕೋರಿ ನಿಯಮ 267ರ ಅಡಿಯಲ್ಲಿ ಒಂಭತ್ತು ನೋಟಿಸ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಸಭಾಪತಿ ಜಗದೀಪ್ ಧಂಖರ್ ತಿಳಿಸಿದರು.



ಕಾಂಗ್ರೆಸ್ ನಾಯಕರಾದ ಪ್ರಮೋದ್ ತಿವಾರಿ ಮತ್ತು ದಿಗ್ವಿಜಯ ಸಿಂಗ್, ಟಿಎಂಸಿಯ ಸಾಗರಿಕಾ ಘೋಷ್, ಸಮಾಜವಾದಿ ಪಕ್ಷದ ಜಾವೇದ್ ಅಲಿ ಮತ್ತು ರಾಮ್‌ಜಿ ಲಾಲ್ ಸುಮನ್ ಮತ್ತು ಸಿಪಿಐ ಪಕ್ಷದ ಜಾನ್ ಬ್ರಿಟಾಸ್ ಅವರು ಮಹಾಕುಂಭ ವಿಷಯದ ಬಗ್ಗೆ ಚರ್ಚೆಗೆ ಒತ್ತಾಯಿಸಿ ನೋಟಿಸ್ ನೀಡಿದ್ದರು.

ಚರ್ಚೆಗೆ ಅವಕಾಶ ನೀಡದಿದ್ದರಿಂದ ಕಾಂಗ್ರೆಸ್, ಎಸ್‌ಪಿ, ಡಿಎಂಕೆ, ಎಎಪಿ, ಆರ್‌ಜೆಡಿ, ಸಿಪಿಐ ಮತ್ತು ಸಿಪಿಎಂ ಸೇರಿದಂತೆ ವಿರೋಧ ಪಕ್ಷಗಳ ಸಂಸದರು ತೀವ್ರ ಪ್ರತಿಭಟನೆ ನಡೆಸಿದರು. ಮೌನಿ ಅಮಾವಾಸ್ಯೆಯಂದು ಮಹಾಕುಂಭದಲ್ಲಿ ನಡೆದ ಕಾಲ್ತುಳಿತದಲ್ಲಿ ಕನಿಷ್ಠ 30 ಜನರು ಸಾವಿಗೀಡಾಗಿದ್ದು, ಅದನ್ನು ಎತ್ತಿ ತೋರಿಸುವ ಪ್ರಯತ್ನದಲ್ಲಿ ಹಲವಾರು ಸಂಸದರು ಘೋಷಣೆಗಳನ್ನು ಕೂಗಿದರು. ನಂತರ ಸದಸ್ಯರು ಸಭಾತ್ಯಾಗ ಮಾಡಿದರು.

**ಲೋಕಸಭೆಯಲ್ಲಿ ಪ್ರತಿಭಟನೆ:** ಪ್ರಯಾಗ್‌ರಾಜ್‌ನಲ್ಲಿ ಇತ್ತೀಚೆಗೆ ನಡೆದ ಮಹಾಕುಂಭದಲ್ಲಿ ನಡೆದ ಕಾಲ್ತುಳಿತದ ಕುರಿತು ಚರ್ಚೆಗೆ ಆಗ್ರಹಿಸಿ ವಿಪಕ್ಷಗಳ ಸದಸ್ಯರು ಲೋಕಸಭೆಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಸದನ ಸೇರಿದಾಗ, ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷದ ಸಂಸದರು ಮಹಾಕುಂಭದಲ್ಲಿ ಇತ್ತೀಚೆಗೆ ಸಂಭವಿಸಿದ ದುರಂತದ ಬಗ್ಗೆ ಚರ್ಚೆಗೆ ಒತ್ತಾಯಿಸಿದರು. ಕೂಡಲೇ ಪ್ರತಿಪಕ್ಷದ ಸದಸ್ಯರು ಸದನದ ಬಾವಿಗೆ ನುಗ್ಗಿ ಗದ್ದಲ, ಘೋಷಣೆ ಕೂಗಿದರು.

ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪ ನಾಯಕ ಗೌರವ್ ಗೊಗೊಯ್ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ನೇತೃತ್ವದಲ್ಲಿ ವಿಪಕ್ಷ ಸದಸ್ಯರು ಪ್ರಶ್ನೋತ್ತರ ಅವಧಿಯನ್ನು ಅಮಾನತುಗೊಳಿಸುವಂತೆ ಒತ್ತಾಯಿಸಿದರು. ಕಾಲ್ತುಳಿತದ ಬಗ್ಗೆ ಚರ್ಚೆಗೆ ಒತ್ತಾಯಿಸಿದರು ಮತ್ತು ಕಾಲ್ತುಳಿತದಲ್ಲಿ ಸಾವಿಗೀಡಾದವರ ಸಂಪೂರ್ಣ ಪಟ್ಟಿಯನ್ನು ಕೇಳಿದರು.

ರಾಷ್ಟ್ರಪತಿಗಳು ಜಂಟಿ ಸದನವನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ತಮ್ಮ ಸಮಸ್ಯೆಗಳನ್ನು ಪ್ರಸ್ತಾಪಿಸಬಹುದು ಎಂದು ಸ್ಪೀಕರ್ ಓಂ ಬಿರ್ಲಾ ಪ್ರತಿಭಟನಾನಿರತ ಸದಸ್ಯರಿಗೆ ತಿಳಿಸಿದರು.

ಕಾಂಗ್ರೆಸ್, ಡಿಎಂಕೆ, ಟಿಎಂಸಿ ಮತ್ತು ಎಸ್‌ಪಿ ಸೇರಿದಂತೆ ಪ್ರತಿಪಕ್ಷಗಳ ಸದಸ್ಯರು ಪ್ರಶ್ನೋತ್ತರ ಅವಧಿ ಮುಗಿದ ನಂತರ ಸ್ವಲ್ಪ ಹೊತ್ತು ಸಭಾತ್ಯಾಗ ಮಾಡಿದರು. ನಂತರ ಅವರು ವಾಪಸಾದರು.

## ಕಾಲ್ತುಳಿತದಲ್ಲಿ ಮೃತರಾದವರ ಶವಗಳನ್ನು ನದಿಗೆ ಎಸೆಯಲಾಗಿದೆ

### ಸಂಸದೆ ಜಯಾ ಬಚ್ಚನ್ ಆರೋಪ



**ನವದೆಹಲಿ:** ಮಹಾ ಕುಂಭಮೇಳದಲ್ಲಿ ಕಾಲ್ತುಳಿತದ ನಂತರ ಶವಗಳನ್ನು ನದಿಗೆ ಎಸೆಯಲಾಗಿದೆ ಎಂದು ಸಮಾಜವಾದಿ ಪಕ್ಷದ ರಾಜ್ಯಸಭಾ ಸಂಸದೆ ಜಯಾ ಬಚ್ಚನ್ ಅವರು ಆರೋಪಿಸಿದ್ದಾರೆ.

ಕಾಲ್ತುಳಿತದಲ್ಲಿ ಮೃತಪಟ್ಟವರ ಶವಗಳನ್ನು ನೀರಿಗೆ ಎಸೆಯಲಾಗಿದ್ದು, ಇದರಿಂದ ನೀರು ಕಲುಷಿತಗೊಂಡಿದೆ. ಈ ವಿಷಯದ ಬಗ್ಗೆ ಸರ್ಕಾರ ಮೌನ ವಹಿಸಿದೆ. ಮಹಾ ಕುಂಭಮೇಳದ ಬಗ್ಗೆ ಸರ್ಕಾರ ಸುಳ್ಳು ಹೇಳಿಕೆಗಳನ್ನು ನೀಡುತ್ತಿದೆ ಎಂದು ಸಂಸದೆ ಜಯಾ ಬಚ್ಚನ್ ಹೇಳಿದ್ದಾರೆ. ವಿಐಪಿ ವ್ಯವಸ್ಥೆಗಳ ಬಗ್ಗೆಯೂ ಅವರು ಪ್ರಶ್ನೆಗಳನ್ನು ಎತ್ತಿದ್ದು, ವಿಐಪಿ ಭಕ್ತರಿಗೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಆದರೆ ಸಾಮಾನ್ಯ ಜನರಿಗೆ ಯಾವುದೇ ಸೌಲಭ್ಯಗಳಿಲ್ಲ ಎಂದು ಹೇಳಿದರು.

ಜನವರಿ 29ರಂದು ಮಹಾಕುಂಭದಲ್ಲಿ ಮೌನಿ ಅಮಾವಾಸ್ಯೆಯ ಸ್ನಾನದ ಸಮಯದಲ್ಲಿ, ಪ್ರಯಾಗ್‌ರಾಜ್‌ನ ಸಂಗಮ್ ಪ್ರದೇಶದಲ್ಲಿ ಕಾಲ್ತುಳಿತ ಸಂಭವಿಸಿತ್ತು. ಇದರಲ್ಲಿ 30ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದು 60 ಕ್ಕೂ ಹೆಚ್ಚು ಭಕ್ತರು ಗಾಯಗೊಂಡರು. ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ಆರಂಭವಾಗಿದೆ ಎಂದು ಸರ್ಕಾರ ಹೇಳುತ್ತಿರುವಾಗ, ಪ್ರತಿಪಕ್ಷಗಳು ಈ ವಿಷಯದ ಬಗ್ಗೆ ಸರ್ಕಾರದ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿವೆ.

## ಶಿಕ್ಷ ಕಾಲೇಜಿನಲ್ಲಿ ಶಿಕ್ಷೋತ್ಸವ



ಶಿಕ್ಷೋತ್ಸವದಲ್ಲಿ ನಾದಬ್ರಹ್ಮ ಡಾ.ಹಂಸಲೇಖ ಅವರನ್ನು ಸನ್ಮಾನಿಸಲಾಯಿತು. ಎಂಎಲ್‌ಸಿ ಡಾ.ತಿಮ್ಮಯ್ಯ, ವಿ.ಸಿ.ರವಿಕುಮಾರ್ ಇನ್ನಿತರರಿದ್ದಾರೆ.

ಮೈಸೂರು,ಫೆ.3–ತಿ.ನರಸೀಪುರ ಮುಖ್ಯ ರಸ್ತೆಯ ವರಕೋಡು ಗೇಟ್ ಬಳಿ ಇರುವ ಶಿಕ್ಷ ಸ್ಕೂಲ್ ಮತ್ತು ಪಿ.ಯು. ಕಾಲೇಜಿನಲ್ಲಿ ಶಿಕ್ಷೋತ್ಸವ–2025 ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ನಾದಬ್ರಹ್ಮ ಡಾ.ಹಂಸಲೇಖ, ಶಿಕ್ಷ ಜ್ಞಾನ–ವೃಕ್ಷ ಎಂದು ಹೇಳಿ ಇದು ಬಹಳ ಪ್ರಮುಖವಾದ ಕ್ಷೇತ್ರ. ಯಾಕೆಂದರೆ ಇದು ಈ ನಾಡಿನ ಮುಖ್ಯಮಂತ್ರಿ ಕನ್ನಡರಾಮಯ್ಯನವರ ಅಂದರೆ ಸಿದ್ದರಾಮಯ್ಯನವರ ಕ್ಷೇತ್ರ ಈ ಭಾಗಕ್ಕೆ ಅತ್ಯಂತ ಅವಶ್ಯಕವಾಗಿದ್ದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕಲ್ಪಿಸುವ ಶ್ಲಾಘನೀಯ ಕಾರ್ಯವನ್ನು 1977ರಲ್ಲಿ ಸ್ಥಾಪಿತವಾದ ಬಳ್ಳಾರಿ ಮೂಲದ ಶರಭೇಶ್ವರ ವಿದ್ಯಾಪೀಠವು ಕರ್ನಾಟಕದಾದ್ಯಂತ ಹಲವು ಜಿಲ್ಲೆಗಳಲ್ಲಿ 35ಕ್ಕೂ ಹೆಚ್ಚು ಅಂಗ ಸಂಸ್ಥೆಗಳನ್ನು ಹೊಂದಿದ್ದು ಶಿಕ್ಷ ಎಂಬ ಹೆಸರಿನಲ್ಲಿ ಸ್ಕೂಲ್ ಮತ್ತು ಪಿ.ಯು. ಕಾಲೇಜನ್ನು ಈ ಭಾಗಕ್ಕೆ ಕೊಡುಗೆಯಾಗಿ ನೀಡಿದೆ ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, ಹಂಸಲೇಖ ಅವರು ಈ ನಾಡು ಕಂಡ ಶ್ರೇಷ್ಠ ಸಾಹಿತಿಗಳು, ಚಿಂತಕರು, ಖ್ಯಾತ ಸಂಗೀತ ನಿರ್ದೇಶಕರು, ಇವೆಲ್ಲದಕ್ಕಿಂತ ಹೆಚ್ಚಾಗಿ ವಿಶಾಲ ಹೃದಯವುಳ್ಳ ಅತೀ ಸರಳ ವ್ಯಕ್ತಿತ್ವದವರು. ಇಂತಹವರನ್ನು ಈ ಸಂಸ್ಥೆ ಕರೆಯಿಸಿದೆ ಎಂದ ಮೇಲೆ ಈ ಸಂಸ್ಥೆಯ ಧನಾತ್ಮಕ ದೂರದೃಷ್ಟಿ ಈ ಸಮಾಜಕ್ಕೆ ಭವಿಷ್ಯದಲ್ಲಿ ಮಹಾನ್ ಚೇತನಗಳನ್ನು ಸೃಷ್ಟಿಮಾಡುವ ಶಕ್ತಿಯಿದೆ ಎಂದು ನಾವು ಸಂಪೂರ್ಣವಾಗಿ ನಂಬಿದ್ದೇವೆ ಹಾಗೂ ಬೆಂಬಲಿಸುತ್ತೇವೆ ಎಂದರು.

ಮೈಸೂರು ಪ್ರಾಂತೀಯ ಲಯನ್ಸ್ ಅಧ್ಯಕ್ಷರು ಹಾಗೂ ನರೆಡ್ಕೊ ಅಧ್ಯಕ್ಷರೂ ಆದ ವಿ.ಸಿ.ರವಿಕುಮಾರ್ ಮಾತನಾಡಿದರು. ದಿವ್ಯಸಾನ್ನಿಧ್ಯವನ್ನು ಉಜ್ಜಯಿನಿ ಶ್ರೀ ಶ್ರೀ ತ್ರಿಲೋಚನ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ದೇಚಿ ಎಂದೇ ಖ್ಯಾತರಾದ ಸಾಹಿತಿ ದೇವರಾಜು ಪಿ.ಚಿಕ್ಕಹಳ್ಳಿ ದಿಕ್ಸೂಚಿ ಭಾಷಣ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶರಭೇಶ್ವರ ವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷ ಎಸ್.ಎಂ.ದಕ್ಷಿಣಮೂರ್ತಿ ವಹಿಸಿದ್ದರು. ಶರಭೇಶ್ವರ ವಿದ್ಯಾಪೀಠದ ಉಪಾಧ್ಯಕ್ಷ ಎಸ್.ಎಂ.ಶಿವನಾಗ, ಶಿಕ್ಷ ಸ್ಕೂಲ್‌ನ ಪ್ರಾಂಶುಪಾಲರಾದ ಶ್ರೀಮತಿ ಜ಼ಾಕಿರಾ ಫಿರ್ದೋಸ್ ಮತ್ತಿತರರು ಉಪಸ್ಥಿತರಿದ್ದರು.

## ಕಾರು ಡಿಕ್ಕಿ: ವ್ಯಕ್ತಿ ಸಾವು

ಮೈಸೂರು,ಫೆ.3(ಆರ್‌ಕೆ)– ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಸಿದ್ದಲಿಂಗಪುರ ಬಳಿ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ರಾತ್ರಿ ಸಂಭವಿಸಿದೆ. ಮೈಸೂರಿನ ಹೊರವಲಯದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮೂಲತಃ ಉತ್ತರಪ್ರದೇಶದ ವಾರಣಾಸಿಯವರಾದ ಮಹೇಶ್ ಗುಪ್ತ(45) ಸಾವನ್ನಪ್ಪಿದವರು. ಭಾನುವಾರ ರಾತ್ರಿ 8.30 ಗಂಟೆ ವೇಳೆಯಲ್ಲಿ ಸಿದ್ದಲಿಂಗಪುರ ಬಳಿ ರಸ್ತೆ ದಾಟುತ್ತಿದ್ದಾಗ ಶ್ರೀರಂಗಪಟ್ಟಣ ಕಡೆಯಿಂದ ಬಂದ ಕಾರು ಅಪ್ಪಳಿಸಿದ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಎನ್.ಆರ್. ಸಂಚಾರ ಠಾಣೆ ಇನ್‌ಸ್ಪೆಕ್ಟರ್ ರೇಖಾಬಾಯಿ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು.

ಇಂದು ಸಂಜೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

## ಜಿಂಕೆ ಕೊಂದವನ ಸೆರೆ: ಮತ್ತಿಬ್ಬರು ಪರಾರಿ

**ಹುಣಸೂರು:** ನಾಗರಹೊಳೆ ಉದ್ಯಾನದಲ್ಲಿ ಜಿಂಕೆ ಬೇಟೆಯಾಡಿದ್ದ ಆರೋಪಿ ಬಂಧಿಸುವಲ್ಲಿ ಅರಣ್ಯ ಸಿಬ್ಬಂದಿ ಯಶಸ್ವಿಯಾಗಿದ್ದು, ಮತ್ತಿಬ್ಬರು ಆರೋಪಿಗಳು ಪರಾರಿಯಾಗಿರುವ ಘಟನೆ ತಾಲೂಕಿನ ಅಯ್ಯನಕೆರೆ ಹಾಡಿಯಲ್ಲಿ ನಡೆದಿದೆ.

ತಾಲೂಕಿನ ಅಯ್ಯನಕೆರೆ ಹಾಡಿಯ ನಾಗ ಬಂಧಿತ ಆರೋಪಿ. ಹುಣಸೂರು ವನ್ಯಜೀವಿ ವಲಯದ ಆನೆ ಚೌಕೂರು ಭಾಗ–2ರ ಶಾಖೆಯ ಡಿಆರ್‌ಎಫ್‌ಓ ಶಿವಕುಮಾರ್, ಗಸ್ತು ಅರಣ್ಯ ಪಾಲಕ ಕುಶಾಲ್ ಜಾಧವ್ ಹಾಗೂ ಎಪಿಸಿ ಸಿಬ್ಬಂದಿ ಗಸ್ತು ನಡೆಸುತ್ತಿದ್ದ ವೇಳೆ ಬಂದ ಖಚಿತ ಮಾಹಿತಿ ಮೇರೆಗೆ ಅಯ್ಯನಕೆರೆ ಹಾಡಿಯ ನಾಗನ ಮನೆ ಬಳಿ ತೆರಳಿ ಪರಿಶೀಲಿಸಿದ ವೇಳೆ ನಾಗ ತನ್ನ ಮನೆ ಪಕ್ಕದ ನಿವೇಶನದಲ್ಲಿ ಜಿಂಕೆ ಕೊಂದು ಚರ್ಮ ಸುಲಿದು ಮಾಂಸವನ್ನಾಗಿ ಪರಿವರ್ತಿಸುತ್ತಿದ್ದ ಆತನನ್ನು ಬಂಧಿಸಿ, ಮಾಂಸ ಹಾಗೂ ಜಿಂಕೆ ಚರ್ಮ, 1 ಚೀಲ, 2 ಕತ್ತಿಗಳು, ಮಾಂಸ ಕಡಿಯಲು ಬಳಸುತ್ತಿದ್ದ 2 ಮರದ ಕೊಂಟುಗಳನ್ನು ವಶಪಡಿಸಿಕೊಂಡಿರುವುದಾಗಿ ಎಸಿಎಫ್ ಲಕ್ಷ್ಮೀಕಾಂತ್ ತಿಳಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ನಾಪತ್ತೆಯಾಗಿರುವ ಇಬ್ಬರ ಪತ್ತೆಗೆ ತಂಡ ರಚಿಸಲಾಗಿದೆ ಎಂದು ನಾಗರಹೊಳೆ ಹುಲಿ ಯೋಜನೆ ನಿರ್ದೇಶಕಿ ಪಿ.ಎ.ಸೀಮಾ ತಿಳಿಸಿದ್ದಾರೆ.

## ವಿದ್ಯುತ್ ಪ್ರಸರಣಕ್ಕೆ ಚಾಲನೆ: ಎಚ್ಚರಿಕೆ ವಹಿಸಲು ಸಾರ್ವಜನಿಕರಿಗೆ ಸೂಚನೆ

ಮೈಸೂರು,ಫೆ.3–ಮೈಸೂರು ವಲಯದ ಕವಿಪ್ರನಿನಿ, ಕೊಡಗು ಬೃಹತ್ ಕಾಮಗಾರಿ ವಿಭಾಗದ ವತಿಯಿಂದ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿ ನೂತನವಾಗಿ ನಿರ್ಮಿಸಿರುವ ಸೋಮವಾರಪೇಟೆ ವಿದ್ಯುತ್ ವಿತರಣಾ ಕೇಂದ್ರದ ಒಳಬರುವ ನೂತನ ಸೋಮವಾರಪೇಟೆ ವಿದ್ಯುತ್ ವಿತರಣಾ ಕೇಂದ್ರದವರೆಗೆ ವಿದ್ಯುತ್ ಪ್ರಸರಣ ಮಾರ್ಗದ ಕಾಮಗಾರಿಯು ಕೆಲಸ ಪೂರ್ಣಗೊಂಡಿದ್ದು, ಯಾವುದೇ ದಿನದಂದು ಚಾಲನೆಗೊಳಿಸಲಾಗುವುದು. ಸದರಿ ಮಾರ್ಗವು ಕೊಡಗು ಜಿಲ್ಲೆಯ ಕುಶಾಲನಗರ ಮತ್ತು ಸೋಮವಾರಪೇಟೆ ತಾಲೂಕಿನ ಹಾನಗಲ್ಲುಬಾಣೆ, ಹಾನಗಲ್ಲು, ಬಲಗುಂದ, ಕಿರಂಗದೂರು, ಐಗೂರು, ಕುಂಬೂರು, ಗರಗಂದೂರು, ಹರದೂರು, ಪಣ್ಯ, ಹುಲುಗುಲಿ ಮತ್ತು ಶುಂಠಿಕೊಪ್ಪ ಗ್ರಾಮಗಳಲ್ಲಿ ಹಾದು ಹೋಗುತ್ತದೆ.

ಆದ್ದರಿಂದ ಸಾರ್ವಜನಿಕರು ಸದರಿ ಮಾರ್ಗದ ವಿದ್ಯುತ್ ಗೋಪುರಗಳ ಮೇಲಿರುವ ವಿದ್ಯುತ್ ವಾಹಕವು ಚಾಲನೆಗೊಳ್ಳುವುದರಿಂದ ಗೋಪುರಗಳಿಗೆ ದನಕರು ಮತ್ತು ಇತರೆ ಸಾಕುಪ್ರಾಣಿಗಳನ್ನು ಕಟ್ಟುವುದಾಗಲೀ, ಲೋಹದ ಪಟ್ಟಿಯನ್ನು ತೆಗೆಯುವುದಾಗಲೀ, ಗೋಪುರಗಳನ್ನು ಹತ್ತುವುದಾಗಲೀ, ತಂತಿಗಳನ್ನು ಮುಟ್ಟುವುದಾಗಲೀ, ಗೋಪುರಗಳ ಕೆಳಗಡೆ ಮರಗಿಡಗಳನ್ನು ನೆಡುವುದಾಗಲೀ, ಗೋಪುರಗಳಿಗೆ ಬಳ್ಳಿ, ತಂತಿ, ಹಗ್ಗ ಮುಂತಾದವುಗಳನ್ನು ಎಸೆಯುವುದಾಗಲೀ, ಗಾಳಿಪಟ ಮುಂತಾದವುಗಳನ್ನು ಗೋಪುರದ ಹತ್ತಿರ ಹರಿಸುವುದಾಗಲೀ ಮಾಡುವುದು ಅಪಾಯಕಾರಿ. ಇದರಿಂದ ಪ್ರಾಣ ಹಾನಿಯಾಗುವ ಎಚ್ಚರಿಕೆ ನೀಡಲಾಗಿದೆ. ಈ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣ ಹಾನಿಗೆ ನಿಗಮವು ಜವಾಬ್ದಾರರಲ್ಲ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

## ಬಿಜೆಪಿ ಅಭ್ಯರ್ಥಿ ಪರ ದೆಹಲಿಯಲ್ಲಿ ಸಂಸದ ಯದುವೀರ್ ಒಡೆಯರ್ ಮತಯಾಚನೆ...



ದೆಹಲಿಯ ಸಾರ್ವತ್ರಿಕ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ರೋಹ್ತಾಸ್ ನಗರ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಜಿತೇಂದ್ರ ಮಹಾಜನ್ ಅವರ ಪರ ಸೋಮವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಶೋಕ ಮಂಡಲದಲ್ಲಿ ನಡೆದ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮನೆ ಮನೆಗೆ ಭೇಟಿ ನೀಡಿ, ಮತಯಾಚನೆ ಮಾಡಿದರು.

## ರಾಜ್ಯ ಕ್ರಿಕೆಟ್ ತಂಡಕ್ಕೆ ಇನ್‌ಸ್ಪೆಕ್ಟರ್ ದಿವಾಕರ್ ಆಯ್ಕೆ

ಮೈಸೂರು,ಫೆ.3(ಆರ್‌ಕೆ)–ಬೆಂಗಳೂರಲ್ಲಿ ಫೆಬ್ರವರಿ 7ರಿಂದ ನಡೆಯಲಿರುವ ಲೆದರ್ ಬಾಲ್ ಟಿ–20 ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಭಾಗವಹಿಸಲಿರುವ ರಾಜ್ಯ ತಂಡಕ್ಕೆ ಮೈಸೂರಿನ ಮೇಟಗಳ್ಳಿ ಠಾಣೆ ಇನ್‌ಸ್ಪೆಕ್ಟರ್ ದಿವಾಕರ್ ಆಯ್ಕೆಯಾಗಿದ್ದಾರೆ.



ದಿವಾಕರ್

ನವದೆಹಲಿಯ ಆಲ್ ಇಂಡಿಯಾ ಪೊಲೀಸ್ ಸ್ಪೋರ್ಟ್ಸ್ ಬೋರ್ಡ್ ಆಯೋಜಿಸಿರುವ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಪ್ರತಿನಿಧಿಸಲಿರುವ ಕರ್ನಾಟಕ ತಂಡಕ್ಕೆ ದಿವಾಕರ ಆಯ್ಕೆಯಾಗಿದ್ದಾರೆ. ಮೂಲತಃ ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯವರಾದ ದಿವಾಕರ್ 2005ರಲ್ಲಿ ಸಬ್‌ಇನ್‌ಸ್ಪೆಕ್ಟರ್ ಆಗಿ ಪೊಲೀಸ್ ಇಲಾಖೆಗೆ ಸೇರಿದ ಅವರು, 2016ರಲ್ಲಿ ಇನ್‌ಸ್ಪೆಕ್ಟರ್ ಆಗಿ ಬಡ್ತಿ ಹೊಂದಿ, ಹಾಸನ, ಬೆಂಗಳೂರು, ಮೈಸೂರಿನ ಎನ್‌ಆರ್ ಸಂಚಾರ, ದೇವರಾಜ ಠಾಣೆಗಳಲ್ಲಿ ಸೇವೆ ಸಲ್ಲಿಸಿ ಪ್ರಸ್ತುತ ಮೇಟಗಳ್ಳಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

## ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರಿನಲ್ಲಿ ಚಿನ್ನದ ಪದಕ



ಬೆಂಗಳೂರಿನ ಕುಮಾರಿ ಪ್ರತಿಕ್ಷ ಪಾವಸ್ಕರ್‌ಗೆ ಸಿದ್ದರಾಮಯ್ಯ ಪದಕ ನೀಡಿದರು.

75 ವರ್ಷ ತುಂಬಿದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಚಿನ್ನದ ದತ್ತಿ ನೀಡುವ ನಿರ್ಣಯವನ್ನು ಅಂಗೀಕರಿಸಿತ್ತು. ಅದರಂತೆ ಪ್ರತಿ ವರ್ಷ ಘಟಿಕೋತ್ಸವ ಸಂದರ್ಭದಲ್ಲಿ BA, LLB ಐದು ವರ್ಷದ ಪದವಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸಿದ್ದರಾಮಯ್ಯ 75 ಅಮೃತ ಮಹೋತ್ಸವ ಚಿನ್ನದ ಪದಕ ನೀಡುತ್ತಾ ಬಂದಿದ್ದು, 2022–23ರಲ್ಲಿ ಶ್ರೀರಂಗಪಟ್ಟಣದ ವಿನಯ್, 2024–25ರಲ್ಲಿ ಬೆಂಗಳೂರಿನ ಕುಮಾರಿ ಪ್ರತಿಕ್ಷ ಪಾವಸ್ಕರ್ ಈ ಪದಕ ಪಡೆದಿದ್ದಾರೆ. ಈ ಬಾರಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ, ಪದಕ ವಿಜೇತ ಕುಮಾರಿ ಪ್ರತೀಕ್ಷಾ ಅವರನ್ನು ಮೈಸೂರಿನ ತಮ್ಮ ನಿವಾಸಕ್ಕೆ ಕರೆಸಿ ಅಭಿನಂದಿಸಿದ್ದಾರೆ. ಶಾಸಕರಾದ ಡಾ.ಯತೀಂದ್ರ

ಮೈಸೂರು, ಫೆ.3–ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲೆಯ ಪದಾಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ

ಸಿದ್ದರಾಮಯ್ಯ, ಹರೀಶ್‌ಗೌಡ, ಶ್ರೀರಂಗಪಟ್ಟಣದ ರಮೇಶ್ ಬಂಡಿಸಿದ್ದೇಗೌಡ, ಎ.ಆರ್.ಕೃಷ್ಣಮೂರ್ತಿ, ಮಾಜಿ ಸಚಿವರಾದ ಕೋಟೆ ಶಿವಣ್ಣ ಹಾಗೂ ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ರಂಗಭೂಮಿ ಪರಿಣಾಮಕಾರಿಯಾದ ಕಲಿಕಾ ಮಾಧ್ಯಮ

### ಕರಾಮುವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಅಭಿಪ್ರಾಯ

ಮೈಸೂರು, ಫೆ. 3– ಪಠ್ಯದ ವಸ್ತು ಮತ್ತು ಸಂದೇಶವನ್ನು ವಿದ್ಯಾರ್ಥಿಗಳಿಗೆ ಆಕರ್ಷಕವಾಗಿ ಮತ್ತು ಮನಮುಟ್ಟುವಂತೆ ತಲುಪಿಸಲು ರಂಗಭೂಮಿ ಪರಿಣಾಮಕಾರಿಯಾದ ಕಲಿಕಾ ಮಾಧ್ಯಮ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಎನ್.ಎಸ್. ರಾಮೇಗೌಡ ಅಭಿಪ್ರಾಯಪಟ್ಟರು.



ಮೈಸೂರಿನ ದಕ್ಷ ಕಾಲೇಜಿನಲ್ಲಿ ನಡೆದ 'ಪಠ್ಯಾಧಾರಿತ ರಂಗ ಪ್ರದರ್ಶನ'ವನ್ನು ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್. ರಾಮೇಗೌಡ ಉದ್ಘಾಟಿಸಿದರು.

ನಗರದ ಹೂಟಗಳ್ಳಿಯಲ್ಲಿನ ದಕ್ಷ ಕಾಲೇಜಿನ ಸಭಾಂಗಣದಲ್ಲಿ ಅದಮ್ಯ ರಂಗಶಾಲೆ, ಸ್ಪಂದನ ಸಾಂಸ್ಕೃತಿಕ ಪರಿಷತ್ತು ಹಾಗೂ ದಕ್ಷ ಪದವಿ ಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆದ 'ಪಿಯುಸಿ ಪಠ್ಯಾಧಾರಿತ ರಂಗ ಪ್ರದರ್ಶನ' ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸಿನಿಮಾ ಮತ್ತು ಟಿವಿ ಮಾಧ್ಯಮಕ್ಕೆ ನೀಡುವ ಆದ್ಯತೆಯನ್ನು ರಂಗಭೂಮಿಗೂ ನೀಡಬೇಕು. ಪಠ್ಯವನ್ನು ಆಧರಿಸಿದ ರಂಗಪ್ರದರ್ಶನವನ್ನು ಆಸಕ್ತಿಯಿಂದ ವೀಕ್ಷಣೆ ಮಾಡಿ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ನಾಟಕದ ಮೂಲಕ ಕಲಿತದ್ದು ಸ್ಥಿರವಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ರಂಗಭೂಮಿ ಮೂಲಕ ಉತ್ತಮ ಕಲಿಕೆಯನ್ನು ಸಾಧಿಸಬೇಕು ಎಂದರು.

ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಪ್ರಯೋಗಶೀಲ ಕಲಿಕಾ ಪ್ರಕ್ರಿಯೆ ತುಂಬಾ ಮುಖ್ಯ. ಪಠ್ಯದಲ್ಲಿನ ಕತೆಗಳನ್ನು ರಂಗ ಪ್ರಯೋಗಕ್ಕೆ ತಂದು ವಿದ್ಯಾರ್ಥಿಗಳಿಗೆ ತಲುಪಿಸಿದರೆ ಅಂತರ್ ಸಂವಹನ ಕಲಿಕೆ ಬಲವಾಗುತ್ತದೆ. ಹಾಗೆಯೇ, ಬೋಧನಾ ಸಮಯದಲ್ಲಿ ವಿದ್ಯಾರ್ಥಿಗಳು ಕುತೂಹಲಕಾರಿ ಪ್ರಶ್ನೆಗಳನ್ನು ಕೇಳುವುದರಿಂದ ಸಂಶೋಧನಾ ಪ್ರಯತ್ನಗಳು ನಡೆಯಲು ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ.ಷಹಸೀನಾ ಬೇಗಂ ಮಾತನಾಡಿ, 'ಸಮಕಾಲೀನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣದಲ್ಲಿ ಕಾಲಹರಣ ಮಾಡಬಾರದು. ಅದನ್ನು ಕಲಿಕೆಗೆ ಪೂರಕವಾಗಿ ಬಳಸಿಕೊಂಡು ಉತ್ತಮ ಶಿಕ್ಷಣದ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪಠ್ಯ ಕೃತಿಯ ಓದಿ, ಅದರ ರಂಗರೂಪ ವೀಕ್ಷಣೆ ಮಾಡಿದರೆ ಕಲಿಕೆ ನೆನಪಿನಲ್ಲಿ ಉಳಿಯುತ್ತದೆ. ಜೊತೆಗೆ ನಾವು ಮಾನಸಿಕ ಬದಲಾವಣೆಗೆ ಒಳಗಾಗುತ್ತೇವೆ. ಸಮಾಜವನ್ನು ನೋಡುವ ದೃಷ್ಟಿಕೋನ ಬದಲಾಗುತ್ತದೆ. ಆ ಮೂಲಕ ಮೌಲ್ಯಗಳನ್ನೂ ಮೈಗೂಡಿಸಿಕೊಳ್ಳುತ್ತೇವೆ. ಇದಕ್ಕೆ ನಿದರ್ಶನವಾಗಿ ಸತ್ಯ ಹರಿಶ್ಚಂದ್ರ ಮತ್ತು ಶ್ರವಣಕುಮಾರ ನಾಟಕ ನೋಡಿ ಬದಲಾದ ಮಹಾತ್ಮ ಗಾಂಧಿಯವರ ಬದುಕು ನಮ್ಮ ಮುಂದಿದೆ' ಎಂದರು.

ಸಾಹಿತಿ ಡಾ.ಹಾಲತಿ ಸೋಮಶೇಖರ್ ಮಾತನಾಡಿ, 'ಕಲೆಗಳಲ್ಲಿಯೇ ನಾಟಕ ಅತ್ಯಂತ ರಮಣೀಯವಾದುದು. ಸಂಭಾಷಣೆ–ಸಂವಾದ ಹೊಂದಿರುವ ದೃಶ್ಯ–ಶ್ರವ್ಯ ರೂಪದ ಪ್ರಬಲ ಮಾಧ್ಯಮವಾದ ಕಾರಣ ಮನಸ್ಸನ್ನು ಸೆರೆಹಿಡಿಯುತ್ತದೆ. ಮನೋಮಂದಿರದಲ್ಲಿ ರಂಗಮಂದಿರ ನಿರ್ಮಿಸುತ್ತದೆ ಎಂದರು.

ವಿದ್ಯಾರ್ಥಿ ಜೀವನ ಬದುಕಿನ ಸುವರ್ಣ ಕಾಲ. ಈ ಕಾಲದಲ್ಲಿ ವಿದ್ಯಾರ್ಥಿಗಳು ಅಚಲತೆ, ದಕ್ಷತೆ, ಶ್ರದ್ಧೆಯಿಂದ ಧ್ಯಾನಾಸಕ್ತರಾಗಿ ಓದಿ ಸಾಂಸ್ಕೃತಿಕ ಸಿರಿವಂತಿಕೆಯನ್ನು ಗಟ್ಟಿಗೊಳಿಸಿಕೊಳ್ಳಬೇಕು. ಬದಲಾವಣೆಗೆ ತೆರೆದುಕೊಂಡು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಬೇಕು ಎಂದರು.

ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ದಕ್ಷ ಪದವಿ ಪೂರ್ವ–ಪದವಿ ಕಾಲೇಜಿನ ಅಧ್ಯಕ್ಷ ಡಾ.ಪಿ.ಜಯಚಂದ್ರ ರಾಜು, ಅದಮ್ಯ ರಂಗಶಾಲೆ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ, ಪದಾಧಿಕಾರಿ ನಾಗೇಶ್ ಕಾವ್ಯಪ್ರಿಯ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ಬಳಿಕ ಪಿಯುಸಿ ಪಠ್ಯಾಧಾರಿತ ರಂಗಪ್ರದರ್ಶನ ನಡೆಯಿತು.

# ಸಂವಿಧಾನದ ಪ್ರಜ್ಞೆ ಹೆಚ್ಚಿಸಿಕೊಳ್ಳದಿದ್ದರೆ ಹೊಸ ಪೀಳಿಗೆಗೆ ಅನಾಹುತ ಕಟ್ಟಿಟ್ಟಬುತ್ತಿ

## ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಎಚ್ಚರಿಕೆ

ಮಂಡ್ಯ,ಫೆ.3– ಸಂವಿಧಾನದ ಪ್ರಜ್ಞೆ ಹೆಚ್ಚಿಸಿಕೊಳ್ಳದಿದ್ದರೆ ಹೊಸ ಪೀಳಿಗೆಗೆ ಅನಾಹುತ ಕಟ್ಟಿಟ್ಟಬುತ್ತಿ. ಯಾವುದೇ ಹಣ ಅಥವಾ ಅಧಿಕಾರ ಬಲ ಇಲ್ಲದ ಸಾಮಾನ್ಯ ವ್ಯಕ್ತಿಯೂ ಕೂಡ ಹಕ್ಕುಗಳನ್ನು ಗಳಿಸಿಕೊಳ್ಳಲು ಮತ್ತು ತನ್ನ ಘನತೆಗೆ ಧಕ್ಕೆಯಾದ ಸಂದರ್ಭದಲ್ಲಿ ದನಿ ಎತ್ತಲು ಅವಕಾಶ ಹಾಗೂ ಅಧಿಕಾರ ನೀಡಿರುವುದು ಸಂವಿಧಾನ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಸ್ವಾಭಿಮಾನಿ ಸಮ ಸಮಾಜ (ಕೆಎಸ್‌ಎಸ್) ಸಂಘಟನೆ ವತಿಯಿಂದ ನಡೆದ 75ನೇ ಸಂವಿಧಾನ ಅಮೃತ ಮಹೋತ್ಸವ ಆಚರಣೆ ಮತ್ತು ಕರ್ನಾಟಕ ಸ್ವಾಭಿಮಾನಿ ಸಮ ಸಮಾಜ ದಶಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಸಂವಿಧಾನ ಪ್ರಜ್ಞೆ ಹೆಚ್ಚಿಸಿಕೊಳ್ಳುವುದು ಮತ್ತು ರಕ್ಷಿಸಿಕೊಳ್ಳುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ. ದಲಿತ ಸಮುದಾಯಕ್ಕೆ ಮಾತ್ರವೇ ಸಂವಿಧಾನ ರಚನೆಯಾಗಿದೆ ಎಂಬ ಪೂರ್ವಾಗ್ರಹ ಒಳ್ಳೆಯದಲ್ಲ. ಎಲ್ಲರ ಹಿತವನ್ನು ಬಯಸುವ ಸಂವಿಧಾನವನ್ನು ಮುಂದಿನ ತಲೆಮಾರಿಗೆ ಸುರಕ್ಷಿತವಾಗಿ ತಲುಪಿಸುವುದು ನಮ್ಮ ಹೊಣೆ ಎಂದರು.

ನಮ್ಮ ಕಾಲ ಮುಗಿಯುತ್ತ ಬಂದಿದೆ. ನಮ್ಮ ಮುಂದೆ ಬರುವಂತಹ ಹೊಸ ಪೀಳಿಗೆಗೆ ಅನಾಹುತ ಕಾದಿದೆ. ಆದ್ದರಿಂದ ಸಂವಿಧಾನದ ಪ್ರಜ್ಞೆ ಹೆಚ್ಚಿಸಿಕೊಳ್ಳ ಬೇಕೆಂದು ಸಲಹೆ ನೀಡಿದರು.


ಸಮಾರಂಭದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವ ಗಣ್ಯರು.

ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ ನಂತರ ಸಂವಿಧಾನ ದಲಿತರಿಗೆ ಮಾತ್ರ ಸಂಬಂಧಪಟ್ಟಿದ್ದು ಎಂದು ತಿಳಿದುಕೊಳ್ಳುವುದು ತಪ್ಪಾಗುತ್ತದೆ ಎಂದರು.

ಸಮಾರಂಭ ಉದ್ಘಾಟಿಸಿದ ಉರಿಲಿಂಗಪೆದ್ದಿ ಮಠದ ಪೀಠಾಧ್ಯಕ್ಷ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಇಂದಿನ ಸಮಾಜಕ್ಕೆ ಪುತ್ಥಳಿಯ ಬದಲಾಗಿ, ಪುಸ್ತಕದ ಅಂಬೇಡ್ಕರ್, ಮೆರವಣಿಗೆಯ ಬದಲಾಗಿ ಬರವಣಿಗೆಯ ಅಂಬೇಡ್ಕರ್ ಬೇಕಾಗಿದೆ. ಅಂಬೇಡ್ಕರ್ ಅವರನ್ನು ಪೂಜಿಸುವುದಕ್ಕಿಂತ ಅವರ ಚಿಂತನೆಗಳನ್ನು ಅರಿತು ಆಚಾರಕ್ಕೆ ತರುವುದು ಮುಖ್ಯವಾಗಿದೆ ಎಂದು ಹೇಳಿದರು.

ಸಂವಿಧಾನ ಜೀವಂತಿಕೆಯಾಗಿ ಇರಬೇಕಾದರೆ ಸಮ ಸಮಾಜ ಅಸ್ತಿತ್ವದಲ್ಲಿರಬೇಕು. ಇತ್ತೀಚೆಗೆ ಸಂವಿಧಾನ ಬದಲಾವಣೆ ಮತ್ತು ಹೊಸ ಸಂವಿಧಾನದ ಮಾತುಗಳು ಆಘಾತಕಾರಿಯಾಗಿವೆ. ಪ್ರಸ್ತುತ ಸಂವಿಧಾನವನ್ನು ರಕ್ಷಣೆ ಮಾಡುವುದರಿಂದ ಮಾತ್ರವೇ ಬಡವರು, ಶ್ರಮಿಕರು ಮತ್ತು ಶೋಷಿತ ಸ್ವಾಭಿಮಾನದ ಬದುಕು ಸಾಧ್ಯ ಎಂದು ಪ್ರತಿಪಾದಿಸಿದರು.

ನಾಗರಿಕರಿಗೆ ಸಂವಿಧಾನ ಓದುವ ಬದಲು ರಾಮಾಯಣ, ಮಹಾಭಾರತ ಓದಿಸಿ ನಿಮ್ಮನ್ನು ಈ ಸ್ಥಿತಿಗೆ ತಂದಿದ್ದಾರೆ. 70 ವರ್ಷಗಳ ಕಾಲ ಸಂವಿಧಾನ ಓದುವ ಅವಕಾಶವನ್ನೇ ನಾಗರಿಕರಿಗೆ ನೀಡಿಲ್ಲ. ಅಷ್ಟರಮಟ್ಟಿಗೆ ಈ ದೇಶವನ್ನು ಆಳಿದ ನಡೆಸಿಕೊಂಡು ಬಂದಿದ್ದಾರೆ. ಸಂವಿಧಾನ ಜೀವಂತವಾಗಿರಲು ಸಮ ಸಮಾಜ ನಿರ್ಮಾಣವಾಗಬೇಕು. ಮಹಿಳೆಯರು ಮತ್ತು ಮಕ್ಕಳಿಗೆ ಎಲ್ಲ ಹಕ್ಕು ಮತ್ತು ಸೌಲಭ್ಯಗಳು ದೊರೆಯುವಂತಾಗಬೇಕು ಎಂದು ತಿಳಿಸಿದರು.

ಇದೇ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಸಚಿವರು ಮತ್ತು ಶಾಸಕರು, ಕಾಂಗ್ರೆಸ್ ಮುಖಂಡ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಪುಷ್ಪಾರ್ಚನೆ ಮಾಡಿದರು. ಶಾಸಕರಾದ ಪಿ.ರವಿಕುಮಾರ್‌ಗೌಡ ಗಣಿಗ, ದಿನೇಶ್ ಗೂಳಿಗೌಡ, ಕರ್ನಾಟಕ ಸ್ವಾಭಿಮಾನಿ ಸಮ ಸಮಾಜ ರಾಜ್ಯಾಧ್ಯಕ್ಷ ಎಚ್.ಎನ್.ನರಸಿಂಹಮೂರ್ತಿ, ಸಂಸ್ಥಾಪಕ ಅಧ್ಯಕ್ಷ ಡಾ. ಕುಮಾರಸ್ವಾಮಿ ಸಾಕ್ಯ, ಚಂದ್ರು, ಮಾಡಾ ಅಧ್ಯಕ್ಷ ನಯೀಮ್, ನಾವು ದ್ರಾವಿಡ ಕನ್ನಡಿಗರು ಚಳುವಳಿಯ ಹನಕೆರೆ ಅಭಿ, ಲೇಖಕ ಎಸ್.ಸಿದ್ದಯ್ಯ, ಅಬಕಾರಿ ಅಧಿಕಾರಿ ತಿರುಮಲಾಪುರ ನಾರಾಯಣ, ಎಲ್.ಸಂದೇಶ್, ಲಕ್ಷ್ಮಣ ಚೀರನಹಳ್ಳಿ ಸೇರಿದಂತೆ ಮತ್ತಿತರರಿದ್ದರು.

# ಸಾಹಿತಿಗಳಿಗೆ ಲೋಕಜ್ಞಾನ ಇದ್ದರೆ ಮಾತ್ರ ಉತ್ತಮ ಕೃತಿ ರಚನೆ ಸಾಧ್ಯ

**ಕಾರ್ಮಿಕ ಇಲಾಖೆ ಜಂಟಿ ಆಯುಕ್ತ ಡಾ.ಎಸ್.ಬಿ.ರವಿಕುಮಾರ್ ಅಭಿಮತ**


ಸಿ.ಎಸ್.ಮಂಜುನಾಥ್ ಚಿನಕುರಳಿ ಅವರ ಮೇಲುಕೋಟೆ(ಪಾಂಡವಪುರ ತಾಲೂಕು ದರ್ಶನ) ಕೃತಿಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಗಣ್ಯರು ಬಿಡುಗಡೆ ಮಾಡಿದರು.

**ಪಾಂಡವಪುರ:** ಕೃತಿ ರಚನೆ ಮಾಡುವುದು ಸುಲಭದ ಕೆಲಸವಲ್ಲ, ಸಾಹಿತಿಗಳಿಗೆ ಪ್ರತಿಭೆಯ ಜತೆಗೆ ಲೋಕಜ್ಞಾನ ಇದ್ದರೆ ಮಾತ್ರ ಒಂದು ಉತ್ತಮ ಕೃತಿ ರಚನೆ ಮಾಡಲು ಸಾಧ್ಯವಾಗುತ್ತದೆ ಎಂದು ಕಾರ್ಮಿಕ ಇಲಾಖೆಯ ಜಂಟಿ ಆಯುಕ್ತ ಡಾ.ಎಸ್.ಬಿ.ರವಿಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಕಸಾಪ ಭವನದಲ್ಲಿ ನಡೆದ ಸಾಹಿತಿ, ಉಪನ್ಯಾಸಕ ಸಿ.ಎಸ್.ಮಂಜುನಾಥ್ ಚಿನಕುರಳಿ ಅವರ ಮೇಲುಕೋಟೆ (ಪಾಂಡವಪುರ ತಾಲೂಕು ದರ್ಶನ) ಕೃತಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ಕನ್ನಡ ಭಾಷೆಯನ್ನು ಮಾತನಾಡುವ ಜನರಿದ್ದಾರೆ. ಅದರಲ್ಲೂ ಪಾಂಡವಪುರ ತಾಲೂಕಿನಲ್ಲಿ ಸಾಹಿತ್ಯ, ಕಲೆ, ಸಂಸ್ಕೃತಿ, ಕ್ರೀಡೆ, ಐತಿಹಾಸಿಕವಾಗಿ ಸಾಕಷ್ಟು ಶ್ರೀಮಂತವಾಗಿದೆ. ಸಾಹಿತಿ ಮಂಜುನಾಥ್ ಚಿನಕುರಳಿ ಅವರು ಪಾಂಡವಪುರ ದರ್ಶನದ ಕೃತಿಯ ಮೂಲಕ ತಾಲೂಕಿನ ಎಲ್ಲಾ ರಂಗವನ್ನು ವಿಸ್ತಾರವಾಗಿ ಪರಿಚಯಿಸುವ ಕೆಲಸ ಮಾಡಿದ್ದಾರೆ. ಇನ್ನಷ್ಟು ವಿಸ್ತಾರವಾಗಿ ಸಂಶೋಧನೆ ಮಾಡಿ ಬರೆದರೆ ಅತ್ಯುತ್ತಮವಾದ ಪ್ರಬಂಧ ರಚನೆ ಮಾಡಬಹುದು ಎಂದು ತಿಳಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ರೈತನ ಮಗನಾಗಿರುವ ಸಾಹಿತಿ ಮಂಜುನಾಥ್ ಚಿನಕುರಳಿ ಅವರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ನಾಡಿನ ದಿಗ್ಗಜ ಸಾಹಿತಿಗಳು ನಡೆದು ಬಂದಿರುವ ಹೆಜ್ಜೆಗಳನ್ನು ತುಳಿದು ಹಿರಿಯ ಸಾಹಿತಿಗಳ ಸಲಹೆ, ಮಾರ್ಗದರ್ಶನ ಪಡೆದುಕೊಂಡು ಮುನ್ನಡೆಯಬೇಕು ಎಂದರು.

ಪ್ರೊ.ಎಚ್.ಆರ್.ತಿಮ್ಮೇಗೌಡ ಮಾತನಾಡಿ, ಸಾಹಿತಿ ಮಂಜುನಾಥ್ ಚಿನಕುರಳಿ ಅವರು ಮೇಲುಕೋಟೆ ಪಾಂಡವಪುರ ದರ್ಶನ ಎಂಬ ಕೃತಿಯ ಮೂಲಕ ತಾಲೂಕಿನ ಚಿತ್ರಣವನ್ನು ಹೊರತರುವ ಕೆಲಸ ಮಾಡಿದ್ದಾರೆ ಎಂದರು.

ಇದೇ ವೇಳೆ ಹಿರಿಯ ಸಾಹಿತಿಗಳಾದ ನಿವೃತ್ತ ಪ್ರಾಂಶುಪಾಲರಾದ ಎಸ್.ನಾಗರಾಜು, ಬಿ.ನಾರಾಯಣಗೌಡ, ಸಂತ ಜೋಸೆಫರ್ ಕೇಂದ್ರೀಯ ಶಾಲೆಯ ಶಿಕ್ಷಕ ಅಮುದ ಅವರನ್ನು ಅಭಿನಂದಿಸಲಾಯಿತು. ಕೃತಿ ರಚನೆಗಾರ ಸಿ.ಎಸ್.ಮಂಜುನಾಥ್ ಚಿನಕುರಳಿ ದಂಪತಿ ಮತ್ತು ಮನ್‌ಮುಲ್ ಚುನಾವಣೆಯಲ್ಲಿ ನಿರ್ದೇಶಕನಾಗಿ ನೂತನವಾಗಿ ಆಯ್ಕೆಯಾದ ಸಿ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ವಿದ್ಯಾ ಪ್ರಚಾರ ಸಂಘದ ಕಾರ್ಯದರ್ಶಿ ಕೆ.ವಿ.ಬಸವರಾಜು, ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್, ತಾಲೂಕು ಪಂಚಾಯತಿ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಸಾಹಿತಿ ಚಂದ್ರಶೇಖರಯ್ಯ, ಕನ್ನಡ ಸಾಹಿತ್ಯ ಪರಿಷತ್ ಹಿರಿಯ ಉಪಾಧ್ಯಕ್ಷ ಸಿ.ಎ.ಶಾಂತರಾಮು, ಶಿಕ್ಷಕರಾದ ವೆಂಕಟೇಶ್, ಪುಟ್ಟೇಗೌಡ ಸೇರಿದಂತೆ ಹಲವರು ಇದ್ದರು.

## ಗೌರಮ್ಮ ನಿಧನ



**ಕೆ.ಆರ್.ಪೇಟೆ:** ತಾಲೂಕಿನ ಆಲಂಬಾಡಿ ಗ್ರಾಮದ ಲೇ.ಹನುಮಶೆಟ್ಟಿ ಅವರ ಪತ್ನಿ ಗೌರಮ್ಮ(93) ಸೋಮವಾರ ನಿಧನರಾದರು.

ಮೃತರು ನಿವೃತ್ತ ಮುಖ್ಯ ಶಿಕ್ಷಕರು ಹಾಗೂ ಗ್ರಾಪಂ ಸದಸ್ಯ ಎ.ಟಿ.ಕರಿಶೆಟ್ಟಿ, ಶಿವಮೂರ್ತಿ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಫೆ.4ರಂದು ಬೆಳಗ್ಗೆ 9 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಫೆ.7ರಿಂದ ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರ

ಮಂಡ್ಯ, ಫೆ.3– ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಫೆಬ್ರವರಿ 7 ರಿಂದ 25 ರವರೆಗೆ ಉದರದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ.

ಫೆ7 ರಂದು ಪಾಂಡವಪುರ ಉಪ ವಿಭಾಗ ಆಸ್ಪತ್ರೆ, 11 ರಂದು ಕೆ.ಆರ್.ಪೇಟೆ ತಾಲೂಕು ಆಸ್ಪತ್ರೆ 12 ರಂದು ಕೆ.ಎಂ.ದೊಡ್ಡಿ ಆರೋಗ್ಯ ಕೇಂದ್ರ, 13 ರಂದು ಕೀಲಾರ ಆರೋಗ್ಯ ಕೇಂದ್ರ, 18 ರಂದು ಬೆಳಗ್ಗೆ ಬಿಂಡಿಗನವಿಲೆ ಆರೋಗ್ಯ ಕೇಂದ್ರ ಮತ್ತು ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ, 19ರಂದು ಕಿರುಗಾವಲು ಆರೋಗ್ಯ ಕೇಂದ್ರ, 20ರಂದು ಮದ್ದೂರು ತಾಲೂಕು ಆಸ್ಪತ್ರೆ 21 ರಂದು ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರ 25ರಂದು ಶಿವಳ್ಳಿ ಅರೋಗ್ಯ ಕೇಂದ್ರದ ಆಸ್ಪತ್ರೆಗಳಲ್ಲಿ ಬೆಳಿಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ.

# ಕೆಎಸ್‌ನ ಮನೆ ರಾಷ್ಟ್ರೀಯ ಸ್ಮಾರಕವಾಗಲಿ: ಡಾ.ಕಿಕ್ಕೇರಿ ಕೃಷ್ಣಮೂರ್ತಿ

**ಕಿಕ್ಕೇರಿ:** ಕೆ.ಎಸ್.ನರಸಿಂಹಸ್ವಾಮಿ ದಾಂಪತ್ಯಗೀತೆಯ ವಿಶ್ವಕೋಶವಾಗಿದ್ದಾರೆ ಎಂದು ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಹೇಳಿದರು.

ಇಲ್ಲಿನ ಸ್ಪಂದನಾ ಫೌಂಡೇಷನ್, ಬೆಂಗಳೂರಿನ ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಹಮ್ಮಿಕೊಂಡಿದ್ದ ಕೆ.ಎಸ್.ನರಸಿಂಹಸ್ವಾಮಿ ಒಂದು ನೆನಪು ಕಾರ್ಯಕ್ರಮದಲ್ಲಿ ಗೀತನಮನ ಸಲ್ಲಿಸಿ ಮಾತನಾಡುತ್ತಾ ನವಿರಾದ ಪ್ರೀತಿಯನ್ನು ವಿಶ್ವಕ್ಕೆ ನೀಡಿದ ಪ್ರೇಮಕವಿ ಕೆಎಸ್‌ನ ಕಾವ್ಯಬ್ರಹ್ಮರಾಗಿದ್ದು, ಇವರ ಹುಟ್ಟಿದ ಮನೆಯನ್ನು ರಾಷ್ಟ್ರೀಯ ಸ್ಮಾರಕವಾಗಿಸಿದರೆ ಕಿಕ್ಕೇರಿ ವಿಶ್ವಭೂಪಟದಲ್ಲಿ ಸೇರಿ ಕವಿಗೆ ವಿಶೇಷ ಗೌರವ ನೀಡಿದಂತಾಗಲಿದೆ ಎಂದರು.

ನಮ್ಮೂರಿನ ಕವಿಯ ನೆನಪು ಮಾಸದಂತಿರಲು ಹುಟ್ಟಿದ ಮನೆ ರಾಷ್ಟ್ರೀಯ ಸ್ಮಾರಕವಾಗಬೇಕಿದೆ. ನಡೆದಾಡಿದ ಸ್ಥಳಗಳನ್ನು ಮೆಲುಕು ಹಾಕುವ ಕೆಲಸವಾಗಬೇಕಿದೆ. ಕಾವ್ಯಸ್ಫೂರ್ತಿಯಾಗಿದ್ದ ಇಲ್ಲಿನ ಕೆರೆಗೆ ಸಿರಿಗೆರೆ ಸರೋವರ ಎಂದು ನಾಮಕರಣವಾದರೆ ಇಡೀ ಭಾರತದಲ್ಲಿ ಕವಿ ಹೆಸರಿನಲ್ಲಿ ಆಗುವ ಮೊದಲ ಸರೋವರ ಇದಾಗಲಿದೆ. ಕೆಎಸ್‌ನ ಉದ್ಯಾನವನ ನಿರ್ಮಾಣವಾಗಿ ವರ್ಷಪೂರ್ತಿ ವಿವಿಧ ಜಾತಿಯ ಮಲ್ಲಿಗೆ ಕಂಪು ಸೂಸಬೇಕಿದೆ.


ಕಾರ್ಯಕ್ರಮದಲ್ಲಿ ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಮಕ್ಕಳೊಂದಿಗೆ ಗೀತನಮನ ಸಲ್ಲಿಸಿದರು.

ಕೆಎಸ್‌ನ ಸುಂದರವಾದ ಬಯಲು ರಂಗಮಂದಿರ(ಆ್ಯಂಪಿ ಥಿಯೇಟರ್) ನಿರ್ಮಾಣ, ನಿರಂತರವಾಗಿ ಈ ಮಂದಿರದಲ್ಲಿ ರಂಗ ಚಟುವಟಿಕೆ, ಕಾವ್ಯಗಾಯನ ತರಬೇತಿಯಂತಹ ಕಾರ್ಯಕ್ರಮ ನಡೆಯಬೇಕು ಎಂಬುದು ಕೆಎಸ್‌ನ ಟ್ರಸ್ಟ್ ಆಶಯವಾಗಿದೆ ಎಂದು ಹೇಳಿದರು.

ರೈತರನ್ನು ಪ್ರೀತಿಸುತ್ತಿದ್ದ ಕೆಎಸ್‌ನ ಹೆಸರಿನ ಸಿರಿಗೆರೆಯ ಸರೋವರ ಎಂಬ ಹೆಸರು ಕೆರೆಗೆ ನಾಮಾಂಕಿತವಾದರೆ ವರ್ಷಪೂರ್ತಿ ಕೆರೆ ತುಂಬಿ ತುಳುಕಲಿದೆ. ಬೋಟಿಂಗ್ ವ್ಯವಸ್ಥೆ ಆಗಬೇಕಿದೆ. ಹಿಂದೆ ಟ್ರಸ್ಟ್‌ನ ಆಶಯದಂತೆ ಸರ್ಕಾರ ಬ್ಯೂಟಿಫಿಕೇಷನ್ ಮಾಡಿ ಕ್ರಿಯಾ ಯೋಜನೆ ತಯಾರಿಸಿತ್ತು. ಕಾರಣಾಂತರದಿಂದ ನನೆಗುದಿಗೆ ಬಿದ್ದಿದೆ. ಮರುಜೀವ ಸಿಕ್ಕರೆ ಕಾವ್ಯಾಸಕ್ತರು ಸರ್ಕಾರವನ್ನು ಸದಾ ಚಿರಸ್ಮರಣೆ ಮಾಡಲಿದ್ದಾರೆ ಎಂದು ಆಶಿಸಿದರು.

ಕೆಎಸ್‌ನ ಗೀತೆಗಳಾದ ನಮ್ಮೂರು ಚೆಂದವ್ರೋ ನಿಮ್ಮೂರು ಚೆಂದವ್ರೋ, ಆಕಾಶಕ್ಕೆದು ನಿಂತ ಮೌನದಲಿ, ಸಿರಿಗೆರೆಯ ನೀರಿನಲಿ ಬಿರಿದ ತಾವರೆ ಮೊಗ್ಗಿನಲಿ, ಒಂದಿರುಳು ಕನಸಿನಲ್ಲಿ ಮತ್ತಿತರ ಗೀತೆಗಳನ್ನು ಮಕ್ಕಳೊಂದಿಗೆ ಹಾಡಿ ರಂಜಿಸಿದರು.

ಸಮಾಜ ಸೇವಾಕರ್ತರಾದ ತ್ರಿವೇಣಿ, ಕವಿತಾ, ಸವಿತಾ, ಶಾರದಾ ಇದ್ದರು.

ಒಂದನೇ ಪುಟದಿಂದ

## 'ಬಂಡೆ' ವಿರುದ್ಧ ಬಂಡಾಯ!

ಸಭೆಗೆ ಕೆಲವು ಪೀಠಾಧೀಶರಲ್ಲದೆ, ಸಚಿವರಾದ ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ, ಡಾ.ಎಚ್.ಸಿ.ಮಹದೇವಪ್ಪ ಭಾಗವಹಿ ಸಿದ್ದರು. ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿದ ಸಚಿವರು, ಶಾಸಕರು, ಮುಖಂಡರ ಸಭೆ ಯನ್ನು ಗೃಹ ಸಚಿವ ಡಾ.ಪರಮೇಶ್ವರ್ ಈ ಹಿಂದೆ ಕರೆಯಲು ಮುಂದಾಗಿದ್ದರಾದರೂ ಹೈಕಮಾಂಡ್ ಅವಕಾಶ ಕೊಟ್ಟಿರಲಿಲ್ಲ.

ಅಷ್ಟೇ ಅಲ್ಲ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಭೆಗಳ ಬಗ್ಗೆ ಗರಂ ಆಗಿ, ಸಚಿವರಿಗೆ ಬಾಯಿ ಮುಚ್ಚಿಕೊಂಡು ನಿಮಗೆ ನೀಡಿರುವ ಕೆಲಸ ಮಾಡಿ ಎಂದು ಗುಡುಗಿದ್ದರು. ಮತ್ತೆ ನಾವು ಇಂತಹ ಸಭೆ ಮಾಡಲು ಹೊರಟರೆ ಶಿವಕುಮಾರ್, ತೆರೆಮರೆಯಲ್ಲಿ ಅಡ್ಡಿ ಮಾಡುತ್ತಾರೆ. ನಾವು ಮುಂಚೂಣಿಯಲ್ಲಿ ನಿಂತು ಮಾಡುವ ಬದಲು ನಮ್ಮ ಸಮಾಜಗಳಿಗೆ ಸೇರಿದ ಮಠಾಧಿಪತಿಗಳಿಂದ ಸಭೆ ನಡೆಸಿದರೆ, ಇದಕ್ಕೆ ತಕರಾರು ಎತ್ತುವುದಿಲ್ಲ ಎಂಬ ಕಾರಣಕ್ಕಾಗಿ ಈ ಸಮಾವೇಶ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

## ಬೇರಾವ ಪಕ್ಷದಲ್ಲೂ ಇಲ್ಲ

ಮತ್ತು ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತಿವೆ ಎಂದರು. ಹಿರಿಯ ಮುಖಂಡ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ಬಣ ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆ ಚುನಾವಣೆಗೆ ಸ್ಪರ್ಧಿಸುವ ತಯಾರಿ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯಾಧ್ಯಕ್ಷನಾಗಿ ಕಳೆದ ಒಂದು ವರ್ಷದಿಂದ ಏನು ಮಾಡಿದ್ದೇನೆಂಬ ಬಗ್ಗೆ ರಾಜ್ಯದ ಜನತೆಗೂ ಗೊತ್ತಿದೆ, ಕಾರ್ಯಕರ್ತರಿಗೂ ಗೊತ್ತಿದೆ, ಪಕ್ಷದ ಹಿರಿಯರು ಹಾಗೂ ಶಾಸಕರಿಗೂ ಗೊತ್ತಿದೆ ಎಂದರು. ರಾಜ್ಯದಲ್ಲಿನ ಭ್ರಷ್ಟ ಹಾಗೂ ದುಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಎಲ್ಲಾ ಕಾರ್ಯಕರ್ತರು, ಪಕ್ಷದ ಹಿರಿಯರೊಂದಿಗೆ ಒಗ್ಗಟ್ಟಾಗಿ ನಿರಂತರ ಹೋರಾಟ ಮಾಡುತ್ತಿದ್ದೇವೆ. ಎಲ್ಲರ ಸಹಕಾರದೊಂದಿಗೆ ಬಿಜೆಪಿ ರಾಜ್ಯಾಧ್ಯಕ್ಷನಾಗಿ ಮುಂದುವರಿದು ಪಕ್ಷ ಬಲಪಡಿಸುವ ಕೆಲಸ ಮಾಡುತ್ತೇನೆ ಎಂಬ ಪೂರ್ಣ ವಿಶ್ವಾಸ ನನಗಿದೆ ಎಂದರು.

## ಬಸ್ ನಿಲ್ದಾಣ ಸ್ಥಳಾಂತರಕ್ಕೆ ತೀವ್ರ ವಿರೋಧ

ಅನುಷ್ಠಾನಗೊಳಿಸಿದ್ದಾರೆ. ಜಯದೇವ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಟ್ರಾಮಾಕೇರ್ ಸೆಂಟರ್, ನೂತನ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ, ಯೋಗ ಚರಕ ಆಸ್ಪತ್ರೆ, ಚಿತ್ರನಗರಿ, ಅರಮನೆ ಸುತ್ತಾ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿಕೊಡುವ ಮೂಲಕ ಮೈಸೂರಿನ ಜನತೆಗೆ ಕೊಡುಗೆ ನೀಡಿದ್ದಾರೆ. ಇದಕ್ಕೆ ಮೈಸೂರಿನ ಜನತೆ ಪರವಾಗಿ ಅಭಿನಂದಿಸುತ್ತೇವೆ ಎಂದರು. ಪ್ರಸ್ತುತ ಗ್ರಾಮಾಂತರ ಬಸ್‌ನಿಲ್ದಾಣವನ್ನು ಅನೇಕ ಹೋಟೆಲ್ ಉದ್ದಿಮೆ, ವರ್ತಕರು, ಪ್ರಮುಖವಾಗಿ ಪ್ರವಾಸಿಗಳು ಹೆಚ್ಚಾಗಿ ಅವಲಂಬಿಸಿದ್ದಾರೆ. ಇದು, ಸರ್ಕಾರಿ ಅತಿಥಿ ಗೃಹ, ತಾಲೂಕು ಕಚೇರಿ, ಎಸ್‌ಪಿ ಕಚೇರಿ, ಪೊಲೀಸ್ ಆಯುಕ್ತರ ಕಚೇರಿ, ಡಿಸಿ ಕಚೇರಿ, ಮೃಗಾಲಯ, ಅರಮನೆ, ಚಾಮುಂಡಿಬೆಟ್ಟ, ದೇವರಾಜ ಮಾರುಕಟ್ಟೆ, ಜಗನ್ಮೋಹನ ಅರಮನೆ, ರೈಲ್ವೆ ನಿಲ್ದಾಣ, ಚರ್ಚ್, ಮೈಸೂರು ವಿವಿ ಹಾಗೂ ಹಲವಾರು ಶಾಲಾ ಕಾಲೇಜುಗಳಿಗೆ ಹತ್ತಿರದಲ್ಲಿದೆ. ಒಂದು ವೇಳೆ ಇದನ್ನು ಬನ್ನಿಮಂಟಪಕ್ಕೆ ಸ್ಥಳಾಂತರಿಸಿದಲ್ಲಿ ಈ ಎಲ್ಲ ಸ್ಥಳಗಳಿಗೂ ಹೋಗಿ ಬರುವುದು ಪ್ರವಾಸಿಗಳು ಹಾಗೂ ಸಾರ್ವ ಜನಿಕರಿಗೆ ಕಷ್ಟವಾಗಲಿದೆ ಎಂದರು.

**ನರ್ಮ್‌ನಡಿ ನಿರ್ಮಿಸಿದವು ನಿರುಪಯುಕ್ತ:** 17 ವರ್ಷಗಳ ಹಿಂದೆ ನರ್ಮ್ ಯೋಜನೆ ಅಡಿಯಲ್ಲಿ ಗ್ರಾಮಾಂತರ ಬಸ್ ನಿಲ್ದಾಣ, ನಗರ ಬಸ್ ನಿಲ್ದಾಣ ಮಾತ್ರವಲ್ಲದೆ, ಸಾತಗಳ್ಳಿ, ನಾಯ್ಡುನಗರ, ಕುವೆಂಪು ನಗರ, ಇಲವಾಲದಲ್ಲಿ ಹೊಸದಾಗಿ ಬಸ್ ನಿಲ್ದಾಣ ನಿರ್ಮಿಸಿದ್ದರೂ ಇವುಗಳು ಪೂರ್ಣ ಪ್ರಮಾಣದಲ್ಲಿ ಬಳಕೆ ಆಗುತ್ತಿಲ್ಲ. ಒಂದು ವೇಳೆ ಹಾಲಿ ಗ್ರಾಮಾಂತರ ಬಸ್ ನಿಲ್ದಾಣದ ಮೇಲೆ ಈಗ ಒತ್ತಡ ಬೀಳುತ್ತದೆ ಎಂದಾದರೆ ಈ ಬಸ್ ನಿಲ್ದಾಣಗಳಿಂದಲೇ ದೂರದ ಊರುಗಳಿಗೂ ಬಸ್ ಸಂಚರಿಸುವಂತೆ ಮಾಡಿದರೆ ಗ್ರಾಮಾಂತರ ಬಸ್ ನಿಲ್ದಾಣದ ಮೇಲೆ ಒತ್ತಡ ನಿವಾರಣೆಯಾಗುತ್ತದೆ ಎಂದು ತಿಳಿಸಿದರು. ಸರ್ಕಾರಿ ಅತಿಥಿ ಗೃಹದ ಪಕ್ಕದಲ್ಲಿ ನಿರುಪಯುಕ್ತವಾಗಿರುವ 5 ಎಕರೆ ಜಾಗ ಹಾಗೂ ಪೀಪಲ್ಸ್ ಪಾರ್ಕ್‌ಗೆ ಹೊಂದಿಕೊಂಡಂತೆ ಇರುವ ಕುದುರೆ ಲಾಯ, ಟಾಂಗಾ ರಿಪೇರಿ, ಪಾಲಿಕೆ ತ್ಯಾಜ್ಯ ಸಾಗಾಣೆ ವಾಹನ ನಿಲುಗಡೆ ಮಾಡುವ ಸ್ಥಳ, ಟ್ಯಾಕ್ಸಿ ನಿಲ್ದಾಣ ಸೇರಿದಂತೆ ನಾಲ್ಕು ಎಕರೆ ಜಾಗವಿದ್ದು, ಅವುಗಳನ್ನು ಗ್ರಾಮಾಂತರ ಬಸ್ ನಿಲ್ದಾಣದ ವಿಸ್ತರಣೆಗೆ ಬಳಸಿಕೊಳ್ಳಬಹುದು. ಅಲ್ಲದೆ, ಪ್ರಸ್ತುತ ಬಸ್ ನಿಲ್ದಾಣದ ಪೂರ್ವ ಭಾಗದಲ್ಲಿ 50 ಸಾವಿರ ಅಡಿ ಜಾಗದಲ್ಲಿ ನಿರ್ಮಿಸಿರುವ ತಾತ್ಕಾಲಿಕ ವಾಣಿಜ್ಯ ಮಳಿಗೆ, ಪೂರ್ವ ದಿಕ್ಕಿನಲ್ಲಿರುವ ಎರಡು ತಂಗು ದಾಣವನ್ನು ತೆರವುಗೊಳಿಸಿದರೆ, ಇನ್ನಷ್ಟು ಬಸ್‌ಗಳ ನಿಲುಗಡೆಗೆ ಸ್ಥಳಾವಕಾಶ ಸಿಗುತ್ತದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ರಾಮಾಂತರ ಬಸ್ ನಿಲ್ದಾಣ ಸ್ಥಳಾಂತರದಿಂದಾಗುವ ಸಮಸ್ಯೆಯನ್ನು ಮನಗಂಡು ಹಾಲಿ ಇರುವ ಸ್ಥಳದಲ್ಲಿಯೇ ಮುಂದುವರೆಸುವಂತೆ ಸೂಚನೆ ನೀಡಬೇಕು. ಈ ಕುರಿತು ಈಗಾಗಲೇ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದು, ಅವರು ನೀಡಿರುವ ಭರವಸೆ ಮೇಲೆ ವಿಶ್ವಾಸವಿದೆ ಎಂದು ತಿಳಿಸಿದರು.

ವಿವಿಧ ಸಂಘ ಸಂಸ್ಥೆ ಪದಾಧಿಕಾರಿಗಳಾದ ಸಿ.ನಾರಾಯಣ ಗೌಡ, ಕೆ.ಬಿ.ಲಿಂಗರಾಜು, ಬಿ.ಎಸ್.ಪ್ರಶಾಂತ್, ಡಿ.ಶ್ರೀಹರಿ, ರವಿಕುಮಾರ್, ಸಿ.ಎ. ಜಯಕುಮಾರ್, ಮಹೇಶ್ ಕಾಮತ್, ಎಸ್.ಜಿ. ಅಶೋಕ್ ಇದ್ದರು.

## ಎಸ್ಪಿಗೆ ದೂರು ಸಲ್ಲಿಸಿದ ಸ್ನೇಹಮಯಿ ಕೃಷ್ಣ

ಎಂದು ತಿಳಿಸಿದ್ದಾರೆ. 2006ರಲ್ಲಿ ಅನ್ಯಕ್ರಾಂತ ಆದೇಶ ಮಾಡಿದ್ದರೂ, ಕೃಷಿ ಭೂಮಿ ಎಂಬಂತೆ ಮಲ್ಲಿ ಕಾರ್ಜುನ ಸ್ವಾಮಿ ಹೆಸರಿನಲ್ಲಿ ಖಾತೆ ಮುಂದು ವರೆಸಿರುವುದು ಏಕೆ ಎಂದು ಸ್ನೇಹಮಯಿ ಕೃಷ್ಣ ಪ್ರಶ್ನಿಸಿದ್ದಾನೆ. ಇದೇ ಭೂಮಿಗೆ ಸಂಬಂಧಿಸಿದಂತೆ 20–10–2010ರಂದು ಪಾರ್ವತಿ ಅವರ ಹೆಸರಿಗೆ, 11–11–2010ರಂದು ಯತೀಂದ್ರ ಅವರಿಗೆ, 23–03–2011ರಂದು ಬೇರೆಯವರಿಗೆ ಭೂಮಿ ನೋಂದಾಯಿತ ದಾಖಲೆಗಳ ಮೂಲಕ ವರ್ಗಾವಣೆ ಯಾಗಿದೆ. 2006ರಲ್ಲಿ ಅನ್ಯಕ್ರಾಂತ ಆದೇಶ ಮಾಡಿದ್ದರೂ ಕೃಷಿ ಭೂಮಿ ಎಂಬಂತೆ ಮಲ್ಲಿ ಕಾರ್ಜುನ ಸ್ವಾಮಿ ಹೆಸರಿನಲ್ಲಿ ಈಗಲೂ ಖಾತೆ ಮುಂದುವರೆಸಿರುವುದೇಕೆ ಎಂದು ಪ್ರಶ್ನಿಸಿದ್ದಾರೆ. 1996ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದರೂ ಯಾವಾಗ, ಯಾವ ಕಾರಣದಿಂದ ಭೂಸ್ವಾಧೀನದಿಂದ ಕೈ ಬಿಡಲಾಗಿದೆ, ಭೂ ಸ್ವಾಧೀನದಿಂದ ಕೈ ಬಿಡಲು ಯಾರ ಪ್ರಭಾವ ಬಳಸಲಾಗಿದೆ ಎಂಬ ಪ್ರಶ್ನೆಗಳು ಉದ್ಭವಿಸುತ್ತದೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ. ಕೆಸರೆ ಗ್ರಾಮದ ಸರ್ವೆ ನಂಬರ್ 464 ರಲ್ಲಿನ 3.16 ಎಕರೆ ಜಮೀನನ್ನು ಮಾತ್ರ ಪಾರ್ವತಿ ಅವರಿಗೆ ಮಲ್ಲಿಕಾರ್ಜುನ ಸ್ವಾಮಿ ದಾನಪತ್ರದ ಮೂಲಕ ವರ್ಗಾವಣೆ ಮಾಡಿದ್ದಾರೆಂದು ಸಾರ್ವಜನಿಕವಾಗಿ ಹೇಳಿದ್ದು, ಈ ಜಮೀನಿನ ವಿಚಾರ ಬಗ್ಗೆ ಈ ತನಕ ಏಕೆ ತಿಳಿಸಿಲ್ಲ ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಮಲ್ಲಿಕಾರ್ಜುನ ಸ್ವಾಮಿ ಅವರು ಇದೂವರೆಗೆ ಇದೇ ರೀತಿ ಎಷ್ಟು ಜಮೀನು ಅಥವಾ ಸ್ವತ್ತುಗಳನ್ನು ಖರೀದಿ ಮಾಡಿದ್ದಾರೆ, ತರುವಾಯ ಪಾರ್ವತಿ ಅವರಿಗೆ ಎಷ್ಟು ಆಸ್ತಿ ವರ್ಗಾವಣೆ ಮಾಡಿದ್ದಾರೆ ಎಂಬ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಸ್ನೇಹಮಯಿ ಕೃಷ್ಣ ಕೋರಿದ್ದಾರೆ. ಸಿದ್ದರಾಮಯ್ಯ ತಮ್ಮ ಅಧಿಕಾರದ ಪ್ರಭಾವ ಬಳಸಿಕೊಂಡು ತಮ್ಮ ಕುಟುಂಬದವರ ಹೆಸರಿನಲ್ಲಿ ಬೇನಾಮಿಯಾಗಿ ಅಕ್ರಮ ವ್ಯವಹಾರ ನಡೆಸಿರುವುದು ತಿಳಿದು ಬರುತ್ತದೆ. ಈಗಾಗಲೇ ಲೋಕಾಯುಕ್ತದಲ್ಲಿ ನಾನು ದಾಖಲಿಸಿರುವ 11/2024 ಸಂಖ್ಯೆಯ ಪ್ರಕರಣದಲ್ಲಿ ಇದನ್ನು ಅಳವಡಿಸಿ ತನಿಖೆ ನಡೆಸಬೇಕಾಗಿ ಮನವಿ ಮಾಡುತ್ತೇನೆ ಎಂದು ತಿಳಿಸಿದ್ದಾರೆ. ನಾನು ನೀಡಿರುವ ದೂರಿನ ಬಗ್ಗೆ ತನಿಖೆ ನಡೆಸದೆ ವಿಳಂಬ ಧೋರಣೆ ತಳೆದರೆ ಕಾನೂನು ಹೋರಾಟ ಮಾಡಬೇಕಾಗುತ್ತದೆ ಎಂದು ಸ್ನೇಹಮಯಿ ಕೃಷ್ಣ ಎಚ್ಚರಿಸಿದ್ದಾರೆ.

## ಇಬ್ಬರ ಸಾವು; ಒಬ್ಬ ನಾಪತ್ತೆ, ಮತ್ತೊಬ್ಬನ ರಕ್ಷಣೆ

ಅಸ್ಲಂ ಪಾಶ ಎಂದು ಗುರುತಿಸಲಾಗಿದ್ದು, ಅದೇ ಗ್ರಾಮದ ನಯಾಜ್ ಪ್ರಾಣಾಪಾಯದಿಂದ ಪಾರಾಗಿದ್ದರೆ, ಫೀರ್‌ಖಾನ್ ಎಂಬಾತ ನಾಪತ್ತೆಯಾಗಿದ್ದಾನೆ. ಮರದ ವ್ಯಾಪಾರಿಗಳಾದ ಈ ನಾಲ್ವರು ಇಂದು ಮಧ್ಯಾಹ್ನ ಪಾಂಡವಪುರ ಕಡೆಯಿಂದ ಹಾಲಹಳ್ಳಿಗೆ ತೆರಳುತ್ತಿದ್ದ ವೇಳೆ ಚಾಲಕನ ನಿಯಂತ್ರಣ ತಪ್ಪಿ ಕಾರು ನಾಲೆಗೆ ಉರುಳಿ ಬಿದ್ದಿದೆ. ಈ ವೇಳೆ ಪ್ರತ್ಯಕ್ಷ ದರ್ಶಿಗಳಾದ ಗ್ರಾಮಸ್ಥರು ತಕ್ಷಣವೇ ಕಾರ್ಯಪ್ರವೃತ್ತರಾಗಿ, ಕಾರಿನಿಂದ ಹೊರ ಬಿದ್ದು ಕೊಚ್ಚಿಕೊಂಡು ಹೋಗುತ್ತಿದ್ದ ನಯಾಜ್‌ನನ್ನು ರಕ್ಷಿಸಿ ವಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಅದೇ ವೇಳೆ ಕಾರು ಚಾಲನೆ ಮಾಡುತ್ತಿದ್ದ ಫಯಾಜ್ ಮೃತ ದೇಹ ಪತ್ತೆಯಾಗಿತ್ತು. ಸಂಜೆ ವೇಳೆಗೆ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಕ್ರೇನ್ ಮೂಲಕ ಕಾರನ್ನು ಹೊರತೆಗೆದಾಗ ಹಿಂದಿನ ಸೀಟಿನಲ್ಲಿ ಅಸ್ಲಂ ಪಾಶ ಶವ ಪತ್ತೆಯಾಗಿದೆ. ಆದರೆ ಈ ಕಾರಿನಲ್ಲಿದ್ದ ಪೀರ್ ಖಾನ್ ನಾಪತ್ತೆಯಾಗಿದ್ದು ಆತ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾನೆ. ಆತನಿಗಾಗಿ ಅಗ್ನಿಶಾಮಕ ದಳ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ಜಗದೀಶ್ ಅವರನ್ನು ಗ್ರಾಮಸ್ಥರು ತೀವ್ರ ತರಾಟೆಗೆ ತೆಗೆದುಕೊಂಡರು. ನಾಲೆಗೆ ತಡೆಗೋಡೆ ನಿರ್ಮಿಸದ ಪರಿಣಾಮ ಇಂತಹ ಅನಾಹುತಗಳು ಸಂಭವಿಸುತ್ತಿದ್ದು ಅದಕ್ಕೆ ನೀವೇ ಕಾರಣ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ, ಪಾಂಡವಪುರ ತಾಲೂಕಿನ ಶಾಲಾ ಕಾಲೇಜು ವಾಹನಗಳು ಹಾಗೂ ಬಸ್ಸುಗಳು ಈ ನಾಲೆಯ ಮೇಲೆಯೇ ಸಂಚರಿಸುತ್ತವೆ. ರೈತರು ತರಕಾರಿ, ಕಬ್ಬು, ಭತ್ತ ಮುಂತಾದ ಬೆಳೆಗಳನ್ನು ಈ ಮಾರ್ಗದಲ್ಲೇ ವಾಹನಗಳಲ್ಲಿ ಸಾಗಿಸುತ್ತಾರೆ. ಹೀಗಾಗಿ ನಾಲೆಗೆ ತಡೆಗೋಡೆ ನಿರ್ಮಿಸಬೇಕೆಂದು ಹಲವು ಬಾರಿ ಮನವಿ ಮಾಡಿದರೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಆರೋಪಿಸಿದರು. ಅನಾಹುತ ಸಂಭವಿಸಿದಾಗ ಸ್ಥಳಕ್ಕೆ ಭೇಟಿ ನೀಡುವ ಅಧಿಕಾರಿಗಳು ಹಾಗೂ ರಾಜಕಾರಣಿಗಳು ನಾಲೆಗೆ ತಡೆಗೋಡೆ ನಿರ್ಮಿಸುತ್ತೇವೆ ಎಂದು ಹೇಳುತ್ತಾರೆಯೇ ಹೊರತು ನಂತರ ಅದನ್ನು ಕಾರ್ಯಗತಗೊಳಿಸದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆರೋಪಿಸಿದರು.

**ಮರಣ ಮೃದಂಗ:** ವಿಶ್ವೇಶ್ವರಯ್ಯ ನಾಲೆಯು ಈವರೆಗೂ ಹಲವರನ್ನು ಬಲಿ ಪಡೆದಿದೆ. ಈ ಹಿಂದೆ ಪಾಂಡವಪುರ ತಾಲೂಕು ಬನಘಟ್ಟ ಬಳಿ ನಾಲೆಗೆ ಕಾರು ಉರುಳಿಬಿದ್ದು ಐವರು ಸಾವನ್ನಪ್ಪಿದ್ದರು. ಅದಾದ ಕೆಲವೇ ದಿನದಲ್ಲಿ ಅದೇ ಸ್ಥಳದಲ್ಲಿ ಮತ್ತೊಂದು ಕಾರು ನಾಲೆಗೆ ಬಿದ್ದು ಓರ್ವ ವ್ಯಕ್ತಿ ಸಾವನ್ನಪ್ಪಿದ್ದ. ಅರೆಕೆರೆ ಠಾಣಾ ವ್ಯಾಪ್ತಿಯನ್ನು ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿ ಬಿದ್ದು ಐವರು ಮೃತಪಟ್ಟಿದ್ದರು. ಪಾಂಡವಪುರ ತಾಲೂಕು ಕನಕನಮರಳಿ ಬಳಿ ವಿಶ್ವೇಶ್ವರಯ್ಯ ನಾಲೆಗೆ ಖಾಸಗಿ ಬಸ್ ಉರುಳಿ ಬಿದ್ದು 30 ಮಂದಿ ಸಾವಿಗೀಡಾಗಿದ್ದರು. ಇಷ್ಟೆಲ್ಲ ಅನಾಹುತಗಳು ನಡೆದರೂ ಅಧಿಕಾರಿಗಳು ಮಾತ್ರ ಎಚ್ಚೆತ್ತುಕೊಳ್ಳದಿರುವುದು ದುರಂತವೇ ಸರಿ.

**ಶಾಸಕರಿಂದ ವೈಯಕ್ತಿಕ ಪರಿಹಾರ:** ಇಂದು ನಡೆದ ಅನಾಹುತದಲ್ಲಿ ಸಾವನ್ನಪ್ಪಿದವರ ಕುಟುಂಬದವರಿಗೆ ಮಂಡ್ಯ ಶಾಸಕ ಪಿ.ರವಿಕುಮಾರ್ ಗಣಿಗ ಅವರು ವೈಯುಕ್ತಿಕವಾಗಿ ತಲಾ 1ಲಕ್ಷ ರೂ ಪರಿಹಾರ ಘೋಷಿಸಿದ್ದಾರೆ. ಅಲ್ಲದೆ ಸರ್ಕಾರದ ವತಿಯಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

## ವಿಜಯೇಂದ್ರನ ಕರ್ಮಕಾಂಡ ವಿವರಿಸಲು ದೆಹಲಿಗೆ ಹೊರಟಿದ್ದೇವೆ

ತೊಲಗಬೇಕು. ಹಿಂದುತ್ವದ ಪರ ಇರುವ ನಾಯಕತ್ವ ಬರಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಯಾರು ಕೂಡ ಹಿಂದುತ್ವದ ರಕ್ಷಣೆ ಮಾಡಲಿಲ್ಲ. ಹಿಂದೂಗಳ ಕೊಲೆಯಾದರೂ ಯಾರೂ ಕೇಳಲಿಲ್ಲ. ಕೇವಲ ಕಠಿಣ ಕ್ರಮ ಅನ್ನೋದನ್ನು ಬಿಟ್ಟರೆ ಏನು ಮಾಡಲಿಲ್ಲ. ಅದಕ್ಕಾಗಿಯೇ ರಾಜ್ಯದಲ್ಲಿ ಬಿಜೆಪಿ ಹೀನಾಯ ಪರಿಸ್ಥಿತಿ ತಲುಪಿದೆ. ಅದಕ್ಕೆ ಕಾರಣ ಹಿಂದುತ್ವ ಕೈಬಿಟ್ಟು ರಾಜಕಾರಣ ಮಾಡಿದ್ದು. ನಮ್ಮ ಟೀಂ ಈಗ ಬಹಳ ದೊಡ್ಡದಾಗಿದೆ. ತಟಸ್ಥ ಎಂದು ಎರಡು ಕಡೆ ಆಟ ಆಡುತ್ತಿದ್ದರು. ಈಗ ಅವರಿಗೂ ಗೊತ್ತಾಗಿದೆ. ಅವರೆಲ್ಲ ನಿಷ್ಠಾವಂತರಾಗಿದ್ದಾರೆ ಎಂದರು. ವಿಜಯೇಂದ್ರನನ್ನು ರಾಜ್ಯಾಧ್ಯಕ್ಷನಾಗಿ ಮುಂದುವರೆಸಿದರೆ ಕರ್ನಾಟಕದಲ್ಲಿ ಪಕ್ಷ ಹೀನಾಯ ಸ್ಥಿತಿ ತಲುಪುತ್ತದೆ. ಮೊನ್ನೆ ವಿಜಯೇಂದ್ರನಿಗೆ ಬಗ್ಗೆ ಹೀನಾಯವಾಗಿ ಬೈದರೂ ಉತ್ತರ ಕೊಡಲಿಲ್ಲ. ಯಡಿಯೂರಪ್ಪ ಮತ್ತು ಮಗನಿಗೆ ಡಿಕೆಶಿ ಭಯಪಡಿಸಿಬಿಟ್ಟಿದ್ದಾರೆ. ನೀವೇನಾದರೂ ನಮ್ಮ ಹಗರಣ ಹೊರತೆಗೆದರೆ ನಿಮ್ಮ ಪೋಕ್ಸೋ ಕೇಸ್ ಇದೆ, ನಕಲಿ ಸಹಿ ಮಾಡಿದೀಯಾ, ಅವನ್ನೆಲ್ಲ ಹೊರತೆಗೆಯುತ್ತೇವೆ ಎಂದು ಹೆದರಿಸಿದ್ದಾರೆ. ಇಂತಹವರು ಬೇಕಾ ಅಂತಾ ನಾವು ಹೈಕಮಾಂಡ್‌ಗೆ ಕೇಳುತ್ತಿದ್ದೇವೆ ಎಂದರು.

## ವಿಧಾನಸೌಧದ ಆವರಣದಲ್ಲಿ ಫೆ.27ರಿಂದ ಸಾಹಿತ್ಯ ಉತ್ಸವ


ಖಾದರ್

ಮಂಗಳೂರು: ವಿಧಾನಸೌಧದ ಅವರಣದಲ್ಲಿ ಸಾಹಿತ್ಯ ಉತ್ಸವ, ಸಾಂಸ್ಕೃತಿಕ ಉತ್ಸವ, ಪುಸ್ತಕ ಮೇಳ, ಆಹಾರ ಮೇಳಗಳನ್ನು ಇದೇ 27ರಿಂದ ಮಾರ್ಚ್ 3ರವರೆಗೆ ಹಮ್ಮಿಕೊಳ್ಳಲು ನಿರ್ಧರಿಸಿದ್ದೇವೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಈ ಕುರಿತು ಮಾಹಿತಿ ನೀಡಿದ ಅವರು, 'ಸಾಹಿತಿಗಳು, ಬರಹಗಾರರು, ವಿದ್ವಾಂಸರನ್ನು ವಿಧಾನಸಭೆಗೆ ಹತ್ತಿರವಾಗಿಸುವ ಉದ್ದೇಶದಿಂದ ಸಾಹಿತ್ಯ ಉತ್ಸವ ಆಯೋಜಿಸಲಾಗುತ್ತಿದೆ. ಒಬ್ಬ ಸಾಹಿತಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದೇವೆ. ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇರಲಿದೆ. ಭದ್ರತೆ ದೃಷ್ಟಿಯಿಂದ ವಿಶೇಷ ತಪಾಸಣಾ ವ್ಯವಸ್ಥೆ ಮಾಡುತ್ತೇವೆ. ಈ ಸಾಹಿತ್ಯ ಉತ್ಸವವನ್ನು ಪ್ರತಿ ವರ್ಷವೂ ಏರ್ಪಡಿಸಬೇಕು ಎಂಬುದು ನಮ್ಮ ಆಶಯ' ಎಂದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿವಿಧ ಅಕಾಡೆಮಿಗಳು, ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳು ಹಾಗೂ ಖಾಸಗಿ ಪ್ರಕಾಶನ ಸಂಸ್ಥೆಗಳ ಮಳಿಗೆಗಳು ಸೇರಿದಂತೆ 150 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಉತ್ಸವದಲ್ಲಿ ಕನ್ನಡ ಭಾಷೆಗೆ ಶೇ 80ರಷ್ಟು ಹಾಗೂ ಇತರ ಭಾಷೆಗಳಿಗೆ ಶೆ 20ರಷ್ಟು ಪ್ರಾಧಾನ್ಯತೆ ನೀಡಲಿದ್ದೇವೆ. ಎರಡು ವೇದಿಕೆಗಳಲ್ಲಿ ಸಾಹಿತ್ಯ ಕುರಿತ ಚರ್ಚೆ, ಸಂವಾದಗಳು ನಡೆಯಲಿವೆ. ಸಂಜೆ ವೇಳೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಪುಸ್ತಕ ಬಿಡುಗಡೆಗೂ ವೇದಿಕೆ ಕಲ್ಪಿಸುತ್ತೇವೆ' ಎಂದು ಅವರು ತಿಳಿಸಿದರು. 'ಪ್ರತಿಯೊಬ್ಬ ಶಾಸಕರು ತಮ್ಮ ಪ್ರದೇಶಾಭಿವೃದ್ಧಿ ನಿಧಿಯಿಂದ ಪುಸ್ತಕ ಖರೀದಿಸಿ ಕ್ಷೇತ್ರದ ಸರ್ಕಾರಿ ಶಾಲಾ ಕಾಲೇಜುಗಳಿಗೆ ಹಾಗೂ ಗ್ರಂಥಾಲಯಗಳಿಗೆ ಪೂರೈಸಲು ವಿಶೇಷ ಅವಕಾಶ ಕಲ್ಪಿಸಲಿದ್ದೇವೆ. ಯಾವ ಪುಸ್ತಕ ಬೇಕು ಎಂಬ ಬಗ್ಗೆ ಅವರು ಆಯಾ ಶಾಲಾ ಕಾಲೇಜುಗಳಿಂದ ಅಥವಾ ಗ್ರಂಥಾಲಯದವರಿಂದ ಸಲಹೆ ಪಡೆದು ಖರೀದಿಸಬಹುದು. ಕೆಲವು ಸರ್ಕಾರಿ ಕಾಲೇಜುಗಳಲ್ಲಿ ಹಾಗೂ ಗ್ರಂಥಾಲಯಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳು ಲಭ್ಯ ಇರುವುದಿಲ್ಲ. ಈ ಕೊರತೆ ನೀಗಿಸಲು ಅವಕಾಶ ಸಿಗಲಿದೆ' ಎಂದರು. 'ಸಾಹಿತ್ಯ ಉತ್ಸವ ಆಯೋಜನೆಗಾಗಿ ವಿಧಾನಸಭೆ ಸಚಿವಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಪೊಲೀಸ್ ಇಲಾಖೆ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಎಡ, ಬಲ ಎಂಬ ಭೇದಬಾವ ಮಾಡದೇ ಎಲ್ಲರಿಗೂ ಮುಕ್ತ ಅವಕಾಶ ನೀಡುವುದು ನಮ್ಮ ಉದ್ದೇಶ. ಕಾರ್ಯಕ್ರಮ ಆಯೋಜನೆ ಬಗ್ಗೆ ಸಮಿತಿಯೇ ನಿರ್ಧಾರ ಕೈಗೊಳ್ಳಲಿದೆ. ಅದರಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. 'ಈ ಸಾಹಿತ್ಯ ಉತ್ಸವಕ್ಕೆ ಸೂಕ್ತ ಹೆಸರು ಇಡಲು ಹಾಗೂ ಲಾಂಛನ ರಚಿಸಲು ಸಾರ್ವಜನಿಕರಿಗೆ ಮುಕ್ತ ಆಹ್ವಾನ ನೀಡುತ್ತೇವೆ. ಉತ್ತಮ ಹೆಸರು ಸೂಚಿಸುವವರಿಗೆ ಹಾಗೂ ಲಾಂಛನ ರಚಿಸುವವರಿಗೆ ಸೂಕ್ತ ಬಹುಮಾನವಿದೆ. ಆಸಕ್ತರು ಹೆಸರು ಅಥವಾ ಲಾಂಛನ ವನ್ನು ಸಚಿವಾಲಯಕ್ಕೆ ಇ–ಮೇಲ್ ಮಾಡಬಹುದು (secy-kla-kar@nic.in) ಅಥವಾ ವಾಟ್ಸ್ ಆಪ್ (9448108798) ಮೂಲಕವೂ ಕಳುಹಿಸಬಹುದು' ಎಂದರು.

## ರಾಷ್ಟ್ರೀಯ ಹೆದ್ದಾರಿಗಳಲ್ಲಿ 'ಏಕರೂಪದ ಟೋಲ್ ನೀತಿ' ಜಾರಿ ಚಿಂತನೆ




**ನವದೆಹಲಿ:** ರಾಷ್ಟ್ರೀಯ ಹೆದ್ದಾರಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಸಾರಿಗೆ ಸಚಿವಾಲಯವು 'ಏಕರೂಪದ ಟೋಲ್ ನೀತಿ'ಯನ್ನು ಜಾರಿಗೆ ತರಲು ಚಿಂತನೆ ನಡೆಸುತ್ತಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಸೋಮವಾರ ಹೇಳಿದ್ದಾರೆ. ಈಗ ಭಾರತದ ಹೆದ್ದಾರಿ ಮೂಲಸೌಕರ್ಯವು ಅಮೆರಿಕಕ್ಕೆ ಹೊಂದಿಕೆಯಾಗುತ್ತದೆ. ನಾವು ದೇಶದಾದ್ಯಂತ ಏಕರೂಪದ ಟೋಲ್ ನೀತಿಯನ್ನು ಜಾರಿಗೆ ತರಲು ಕೆಲಸ ಮಾಡುತ್ತಿದ್ದೇವೆ. ಇದು ಪ್ರಯಾಣಿಕರು ಎದುರಿಸುತ್ತಿರುವ ಸಮಸ್ಯೆಯನ್ನು ಪರಿಹರಿಸುತ್ತದೆ ಎಂದು ಹೇಳಿದರು. ಹೆಚ್ಚಿನ ಟೋಲ್ ಶುಲ್ಕಗಳು ಮತ್ತು ಕೆಟ್ಟ ರಸ್ತೆ, ಭಾರಿ ಟ್ರಾಫಿಕ್, ಗೊಂದಲಮಯ ಸಂಕೇತಗಳು ಅಥವಾ ಅಸುರಕ್ಷಿತ ಡ್ರೈವಿಂಗ್ ಅನುಭವವನ್ನು ನೀಡುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಗಡ್ಕರಿ ಉತ್ತರಿಸಿದರು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ತಡೆರಹಿತ ಜಾಗತಿಕ ನ್ಯಾವಿಗೇಷನ್ ಉಪಗ್ರಹ ವ್ಯವಸ್ಥೆ(ಜಿಎನ್‌ಎಸ್‌ಎಸ್) ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಆರಂಭದಲ್ಲಿ ಜಾರಿಗೆ ತರಲು ಸಚಿವಾಲಯ ನಿರ್ಧರಿಸಿದೆ ಎಂದರು. ಸಾಮಾಜಿಕ ಮಾಧ್ಯಮದಲ್ಲಿ ಪ್ರಯಾಣಿಕರು ಮಾಡುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ್ದಾರೆ ಮತ್ತು ಇದರಲ್ಲಿ ಒಳಗೊಂಡಿರುವ ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಸದ್ಯ, ಖಾಸಗಿ ಕಾರುಗಳು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಮಾರು ಶೇ 60 ರಷ್ಟು ದಟ್ಟಣೆಯನ್ನು ಹೊಂದಿದ್ದರೆ, ಈ ವಾಹನಗಳಿಂದ ಬರುವ ಟೋಲ್ ಆದಾಯದ ಪಾಲು ಕೇವಲ ಶೇ 20–26 ರಷ್ಟಿದೆ. ಕಳೆದ 10 ವರ್ಷಗಳಲ್ಲಿ ಟೋಲಿಂಗ್ ವ್ಯವಸ್ಥೆಯಡಿಯಲ್ಲಿ ಹೆಚ್ಚು ಹೆಚ್ಚು ವಿಸ್ತರಣೆಗಳಾಗಿದ್ದರೂ ಕೂಡ ಹೆದ್ದಾರಿಗಳಲ್ಲಿ ಟೋಲ್ ಶುಲ್ಕಗಳು ಹೆಚ್ಚಾಗಿದೆ. ಇದು ಸಾಮಾನ್ಯವಾಗಿ ಬಳಕೆದಾರರ ಅಸಮಾಧಾನಕ್ಕೆ ಕಾರಣವಾಗಿದೆ. 2023–24ರಲ್ಲಿ ಭಾರತದಲ್ಲಿ ಒಟ್ಟು ಟೋಲ್ ಸಂಗ್ರಹವು 64,809.86 ಕೋಟಿ ರೂ.ಗೆ ತಲುಪಿದೆ. ಇದು ಹಿಂದಿನ ವರ್ಷಕ್ಕಿಂತ ಶೇ 35ರಷ್ಟು ಏರಿಕೆಯಾಗಿದೆ. 2019–20ರಲ್ಲಿ 27,503 ಕೋಟಿ ರೂಪಾಯಿ ಸಂಗ್ರಹವಾಗಿತ್ತು.

# ನಾಳೆ ಸವಿತಾ ಮಹರ್ಷಿ ಜಯಂತಿ



ಮೈಸೂರು,ಫೆ.3–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸವಿತಾ ಮಹರ್ಷಿ ಜಯಂತಿಯನ್ನು ಫೆ.5ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್.ಡಿ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ. ಹರೀಶ್‌ಗೌಡ ಹಾಗೂ ವಿಧಾನಪರಿಷತ್‌ನ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಯತೀಂದ್ರ.ಎಸ್ ಮತ್ತು ವಿವೇಕಾನಂದ.ಎಸ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಎಸ್. ರಾಮ್‌ಪ್ರಸಾದ್ ಉಪನ್ಯಾಸ ನೀಡಲಿದ್ದಾರೆ.

# ಮಹಾ ಕುಂಭಮೇಳ: ದರದ ಹೊರೆ ತಪ್ಪಿಸಿ

ಮೈಸೂರು, ಫೆ.3– ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ರಾಜ್ಯದ ಜನರು ಭಾಗವಹಿಸುತ್ತಿದ್ದಾರೆ. ಆದರೆ ಅವರಿಗೆ ಬಸ್, ರೈಲು, ವಿಮಾನದ ಪ್ರಯಾಣ ದರ ಭಾರಿ ಹೊರೆಯಾಗಿದ್ದು, ಅದನ್ನು ಕಡಿತ ಮಾಡುವಂತೆ ಸಮಾಜ ಸೇವಕರಾದ ಗಗನ್ ದೀಪ್ ಒತ್ತಾಯಿಸಿದ್ದಾರೆ.

ಜೀವದ ಹಂಗು ತೊರೆದು ನಿತ್ಯ ಸಾವಿರಾರು ಜನರು ಭಕ್ತಿಭಾವದಿಂದ ಪ್ರಯಾಗ್‌ರಾಜ್‌ಗೆ ತೆರಳಿ ಪುಣ್ಯಸ್ನಾನ ಮಾಡಿ, ಮೋಕ್ಷ ಪ್ರಾಪ್ತಿಗೆ ಪ್ರಾರ್ಥಿಸುತ್ತಾರೆ. ಅನೇಕರು ಗುಂಪು ಕಟ್ಟಿಕೊಂಡು ಪ್ರತ್ಯೇಕ ಖಾಸಗಿ ವಾಹನದ ಮೂಲಕ ಪಾಲ್ಗೊಳ್ಳುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ, ಜನರ ಪ್ರಯಾಣಕ್ಕೆ ವಿಶೇಷ ವಾಹನ ವ್ಯವಸ್ಥೆ ಇಲ್ಲದಾಗಿದೆ. ಪ್ರಯಾಣ ದರ ಹೆಚ್ಚಿಸಲಾಗಿದ್ದು, ಸಾಮಾನ್ಯರಿಗೆ ಆರ್ಥಿಕ ಹೊರೆಯಾಗಿದೆ. ಪ್ರಯಾಣ ದರ ಎಲ್ಲರಿಗೂ ನಿಲುಕುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಗಗನ್ ದೀಪ್ ಒತ್ತಾಯಿಸಿದ್ದಾರೆ.

# ಯೋಗ, ಫಿಟ್ನೆಸ್ ಸರ್ಟಿಫಿಕೇಟ್ ಕೋರ್ಸ್



ಯೋಗಗುರು ಡಾ.ಕೆ.ರಾಘವೇಂದ್ರ ಪೈ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಫೆ.3–ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಎಂಕಾಂ ವಿಭಾಗದಿಂದ ಭಾರತ ಸರಕಾರದ ಆಯುಷ್ ಇಲಾಖೆಯಿಂದ ಪ್ರಮಾಣಿತ ಅಮೃತ ಯೋಗ ಮಹೋತ್ಸವ–2022 ಅಡಿಯಲ್ಲಿ ಮೈಸೂರಿನ ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನದ ಸಹಯೋಗದೊಂದಿಗೆ 32 ಗಂಟೆಗಳ ಯೋಗ ಮತ್ತು ಫಿಟ್ನೆಸ್ ಸರ್ಟಿಫಿಕೇಟ್ ಕೋರ್ಸ್ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಯೋಗಗುರು ಡಾ.ಕೆ.ರಾಘವೇಂದ್ರ ಪೈ ಮಾತನಾಡಿ, ಒತ್ತಡದ ಬದುಕಿಗೆ ಅಗತ್ಯವಾಗಿ ಯೋಗದ ಮಹತ್ವವನ್ನು ಅರಿತು ಬದುಕಿನ ಭಾಗವಾಗಿ ದಿನದಲ್ಲಿ ಕನಿಷ್ಠ ಎರಡು ಗಂಟೆ ಯೋಗಾಭ್ಯಾಸವನ್ನು ರೂಢಿಸಿಕೊಂಡು ಆರೋಗ್ಯಯುತ ಜೀವನ ನಡೆಸಬಹುದು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿಯರಿಗೆ ಪ್ರಮಾಣಪತ್ರ ಹಾಗೂ ಅಮೃತ ಯೋಗ–75 ಸ್ವರ್ಣಪದಕ ವಿತರಿಸಲಾಯಿತು. ರಮಣಿಕರ್ ಎಚ್.ಎಂ., ಶ್ರೀಮತಿ ಪುಷ್ಪ, ರಾಜೇಂದ್ರ ಪ್ರಸಾದ್, ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಭಾರತಿ, ಎಂ.ಕಾಂ ವಿಭಾಗದ ಮುಖ್ಯಸ್ಥೆ ಡಾ.ದೇವಕಿ, ಸಹಾಯಕ ಪ್ರಾಧ್ಯಾಪಕರಾದ ಅಮೃತ ಪಿ.ನಾಯಕ್ ಉಪಸ್ಥಿತರಿದ್ದರು.

## ಅತ್ತಿಗೆಯ ಗ್ಯಾಂಗ್‌ರೇಪ್ ಮಾಡಿಸಿ, ಕೊಲೆಗೈಯ್ಯಲು ಬ್ಯಾಂಕ್ ಸಾಲ ಪಡೆದ ಮೈದುನ!

**ಮುಜಫರ್‌ನಗರ:** ಉತ್ತರಪ್ರದೇಶದ ಮುಜಫರ್‌ನಗರದಲ್ಲಿ 21 ವರ್ಷದ ಯುವತಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಪ್ರಮುಖ ಆರೋಪಿ ಆಶಿಶ್, ಇಬ್ಬರು ಕೊಲೆಗಾರರನ್ನು ನೇಮಿಸಿಕೊಳ್ಳಲು ಬ್ಯಾಂಕಿನಿಂದ 40,000 ರೂ. ಸಾಲ ಪಡೆದಿದ್ದ ಎಂಬ ವಿಷಯ ಬಹಿರಂಗಗೊಂಡಿದೆ. ಈ ಘಟನೆ ಜಿಲ್ಲೆಯ ಬುಧಾನಾ ಪ್ರದೇಶದ ಬವಾನಾ ಗ್ರಾಮದಲ್ಲಿ ನಡೆದಿದೆ.

ಆಶಿಶ್ ತನ್ನ ಸಹಚರರಾದ ಶುಭಂ ಮತ್ತು ದೀಪಕ್ ಜೊತೆಗೂಡಿ ತನ್ನ ಅತ್ತಿಗೆಯನ್ನು ಮನೆಯಿಂದ ಹೊರಗೆ ಕರೆದುಕೊಂಡು ಹೋಗಿ ನಿರ್ಜನ ಪ್ರದೇಶದಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿ, ನಂತರ ಕತ್ತು ಹಿಸುಕಿ ಕೊಂದಿದ್ದಾನೆ. ನಂತರ ಆಕೆಯ ದೇಹವನ್ನೂ ಸುಟ್ಟು ಹಾಕಿದರು. ಸದ್ಯ ಆಶಿಶ್‌ನನ್ನು ಪೊಲೀಸರು ಬಂಧಿಸಿದ್ದು, ಆತನ ಇಬ್ಬರು ಸಹಚರರು ತಲೆಮರೆಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಮುಖ ಆರೋಪಿಯು ಎರಡು ವರ್ಷಗಳಿಂದ ಅತ್ತಿಗೆ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಎಂದು ಮುಜಾಫರ್‌ನಗರ ಎಸ್ಪಿ (ಗ್ರಾಮೀಣ) ಆದಿತ್ಯ ಬನ್ಸಾಲ್ ಹೇಳಿದ್ದಾರೆ. ತನ್ನ ಅತ್ತಿಗೆ ಕೆಲವು ವೈಯಕ್ತಿಕ ಫೋಟೋಗಳು ಮತ್ತು ವೀಡಿಯೊಗಳ ಮೂಲಕ ತನ್ನನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಳು ಎಂದು ಆರೋಪಿ ಪೊಲೀಸರಿಗೆ ತಿಳಿಸಿದ್ದಾನೆ.

## ಮೈಕ್ರೋ ಫೈನಾನ್ಸ್ ಹಾವಳಿಗೆ ಕಡಿವಾಣ ಹಾಕಲು ಪೊಲೀಸರಿಗೆ ಹೆಚ್ಚಿನ ಬಲ ನೀಡಿ

# ಒಂದೆರಡು ದಿನದಲ್ಲಿ ಸುಗ್ರೀವಾಜ್ಞೆ ಜಾರಿ



ಬೆಂಗಳೂರು, ಫೆ.3(ಕೆಎಂಶಿ)– ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸಾಲಗಾರರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಲು ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿ, ಒಂದೆರಡು ದಿನದಲ್ಲೇ ಸುಗ್ರೀವಾಜ್ಞೆ ಜಾರಿಗೊಳಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುಗ್ರೀವಾಜ್ಞೆ ಜಾರಿಗೊಳಿಸುವುದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಲಿದ್ದಾರೆ.

ಸುಗ್ರೀವಾಜ್ಞೆ ಜಾರಿಗೊಳಿಸಲು ಸಂಪುಟ ಈಗಾಗಲೇ ಅನುಮತಿ ನೀಡಿದೆ. ಆದರೆ, ಪೊಲೀಸ್ ಮತ್ತು ಆರ್ಥಿಕ ಇಲಾಖೆ ನೀಡಿರುವ ಕೆಲವು ಸಲಹೆಗಳನ್ನು ಸೇರ್ಪಡಿಸುವ ಅಧಿಕಾರವನ್ನು ಸಂಪುಟ ಸಭೆ ಮುಖ್ಯಮಂತ್ರಿ ಅವರಿಗೆ ನೀಡಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಅವರು ಸಭೆ ಕರೆದು ನಂತರ ಸುಗ್ರೀವಾಜ್ಞೆ ಜಾರಿಗೊಳಿಸಲಿದ್ದಾರೆ. ಸಾಲ ವಸೂಲಿ ಮಾಡಲು ಮೈಕ್ರೋ ಫೈನಾನ್ಸ್ ಸಂಸ್ಥೆಗಳು ರೌಡಿಗಳ ಮೂಲಕ ಬೆದರಿಸಿ ಕಾನೂನು ಕೈಗೆ ತೆಗೆದುಕೊಂಡು ಬಡವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದು, ಇದನ್ನು ತಪ್ಪಿಸಲು ಪೊಲೀಸರಿಗೆ ಹೆಚ್ಚಿನ ಅಧಿಕಾರ ಕೊಡುತ್ತಿದ್ದೇವೆ ಎಂದರು.

**ಜೆಡಿಎಸ್ ಶಾಸಕರ ಸೇರ್ಪಡೆ ಚಿಂತನೆ ಇಲ್ಲ:** ಜೆಡಿಎಸ್‌ನ ಯಾವ ಶಾಸಕರನ್ನೂ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಚಿಂತನೆ ಇಲ್ಲ, ಮುಂದೆ ಸಮಯ ಬಂದಾಗ ನೋಡೋಣ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಆ ಪಕ್ಷದ ಕಾರ್ಯಕರ್ತರಿಗೆ ರಾಜಕೀಯ ಭವಿಷ್ಯವಿಲ್ಲ, ಹೀಗಾಗಿ ರಾಷ್ಟ್ರೀಯ ಪಕ್ಷದ ಜೊತೆ ಕೈಜೋಡಿಸಿ ಎಂಬುದಾಗಿ ಕರೆ ನೀಡಿದ್ದೇನೆ, ಈಗಾಗಲೇ ಕೆಲವರು ಈ ದಿಕ್ಕಿನಲ್ಲಿ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ. ನಾವು ಯಾವುದೇ ಶಾಸಕರಿಗೆ ಆಹ್ವಾನ ನೀಡಿಲ್ಲ, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಯಾವಾಗಿನಿಂದ ಜ್ಯೋತಿಷ್ಯ ಹೇಳಲು ಕಲಿತರೋ ತಿಳಿಯದು. ಜ್ಯೋತಿಷ್ಯದ ಬಗ್ಗೆ ನನಗೆ ನಂಬಿಕೆ ಇದೆ, ಅವರು ಹೇಳುವುದಾದರೆ ನಾನೇ ಹೋಗಿ ಅವರ ಬಳಿ ಭವಿಷ್ಯ ಕೇಳುತ್ತೇನೆ ಎಂದು ವ್ಯಂಗ್ಯವಾಡಿದರು.

# ಇನ್ನು ಮುಂದೆ ಗೋಹತ್ಯೆ ನಡೆದರೆ ಸರ್ಕಲ್‌ನಲ್ಲಿ ನಿಲ್ಲಿಸಿ ಗುಂಡು ಹಾಕ್ತೀವಿ

## ಸಚಿವ ಮಂಕಾಳು ವೈದ್ಯ ಗುಡುಗು



ಕಾರವಾರ, ಫೆ.3– ಇನ್ನು ಮುಂದೆ ಗೋಹತ್ಯೆ ಏನಾದರೂ ನಡೆದರೆ ಸರ್ಕಲ್‌ನಲ್ಲಿ ನಿಲ್ಲಿಸಿ ಗುಂಡು ಹಾಕ್ತೀವಿ ಎಂದು ಮೀನುಗಾರಿಕಾ ಸಚಿವ ಮಂಕಾಳು ವೈದ್ಯ ಗುಡುಗಿದ್ದಾರೆ. ಹೊನ್ನಾವರದ ಸಾಲಕೋಡು ಅರಣ್ಯದಲ್ಲಿ ಗರ್ಭ ಧರಿಸಿದ ಗೋಹತ್ಯೆ ಪ್ರಕರಣ ಕುರಿತು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಗೋಹತ್ಯೆ ಈ ಹಿಂದಿನಿಂದಲೂ ಜಿಲ್ಲೆಯಲ್ಲಿ ನಡೆಯುತ್ತಿದೆ. ಈ ಹಿಂದೆ ಬಿಜೆಪಿ ಅವಧಿಯಲ್ಲೂ ಜಿಲ್ಲೆಯಲ್ಲಿ ಗೋಹತ್ಯೆ ಆಗಿದೆ ಎಂದು ತಿಳಿಸಿದ್ದಾರೆ.ಕುಮಟಾ ಶಾಸಕ ದಿನಕರ ಶೆಟ್ಟಿ ಮಾತನಾಡುವಾಗ ನಾಲಿಗೆ ಮೇಲೆ ಹಿಡಿತ ಇರಲಿ. ದಿನಕರ ಶೆಟ್ಟಿ ಈಗ ಏನು ದಿನಕರ ಖಾನ್ ಆಗಿದ್ದಾರಾ. ದಿನಕರ ಶೆಟ್ಟಿ ಅವರೇ ನಮ್ಮ ಸಿಎಂ ಬಗ್ಗೆ, ಸಚಿವರ ಬಗ್ಗೆ ಬಾಯಿಗೆ ಬಂದಂತೆ ಮಾತನಾಡಬೇಡಿ. ಗೋವುಗಳ ಹಂತಕರನ್ನು ಯಾವುದೇ ಕಾರಣಕ್ಕೂ ರಕ್ಷಿಸುವುದಿಲ್ಲ. ಆರೋಪಿಗಳನ್ನು ಕೂಡಲೇ ಬಂಧಿಸಿ ಶಿಕ್ಷೆ ನೀಡುವಂತೆ ಹೇಳಿದ್ದೇನೆ. ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರೆ, ಇನ್ನು ಮುಂದೆ ಯಾವುದೇ ಕಾರಣಕ್ಕೂ ಗೋವು ಕಳ್ಳತನ, ಗೋಹತ್ಯೆ ಆಗಬಾರದು. ಗೋಹತ್ಯೆ ಏನಾದರೂ ನಡೆದರೆ ಸರ್ಕಲ್‌ನಲ್ಲಿ ನಿಲ್ಲಿಸಿ ಗುಂಡ ಹಾಕ್ತೀವಿ ಎಂದು ಎಚ್ಚರಿಸಿದ್ದಾರೆ.

# 'ಮೈಸೂರು ದಿಗಂತ' ದತ್ತಿ ಪ್ರಶಸ್ತಿ ಪ್ರದಾನ



ಇತ್ತೀಚೆಗೆ ನಡೆದ ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಮೈಸೂರಿನ ಪ್ರಾದೇಶಿಕ ಸಂಜೆ ದಿನಪತ್ರಿಕೆ 'ಮೈಸೂರು ದಿಗಂತ' ದತ್ತಿ ಪ್ರಶಸ್ತಿಯನ್ನು 'ಕನ್ನಡಪ್ರಭ' ಪತ್ರಿಕೆಯ ಹುಬ್ಬಳ್ಳಿ ವರದಿಗಾರ ಶಿವಾನಂದ ಗೊಂಬಿ, ರಿಪಬ್ಲಿಕ್ ಕನ್ನಡ ವಾಹಿನಿಯ ಬಿ.ಕೆ.ದೇವಯ್ಯ (ಅನು ಕಾರ್ಯಪ್ಪ) ಹಾಗೂ ಸುವರ್ಣ ನ್ಯೂಸ್‌ನ ನಂದೀಶ್ ಮಲ್ಲೇನಹಳ್ಳಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, 'ಮೈಸೂರು ದಿಗಂತ' ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಘನವಂತ ಮಳಲಿ, ಅವರ ಪತ್ನಿ ನಿಖಿತಾ ಘನವಂತ ಅವರನ್ನು ಚಿತ್ರದಲ್ಲಿ ಕಾಣಬಹುದು.

## ಕಾಂಗ್ರೆಸ್ ಮುಖಂಡ ಜೆ.ವೆಂಕಟೇಶ್ ಅವರಿಗೆ ಹುಟ್ಟುಹಬ್ಬದ ಶುಭಾಶಯ...



ಕಾಂಗ್ರೆಸ್ ಮುಖಂಡರು ಹಾಗೂ ಕ್ಯಾತಮಾರನಹಳ್ಳಿ ಮಾಜಿ ದೊಡ್ಡ ಯಜಮಾನರಾದ ಜೆ.ವೆಂಕಟೇಶ್ ಅವರ ಹುಟ್ಟುಹಬ್ಬವನ್ನು ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ನಾಯಕ ಸಮುದಾಯದ ಹಿರಿಯ ಮುಖಂಡರು ಆಚರಿಸಿದರು. ಈ ಸಂದರ್ಭದಲ್ಲಿ ಸಮುದಾಯದ ಮುಖಂಡರಾದ ಟೆನಿಸ್ ಗೋಪಿ, ಜಯಪುರ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ಪಡುವಾರಹಳ್ಳಿ ಯೋಗೇಶ್, ಜವರನಾಯಕ, ನಾಗವಾಲ ವಿನೋದ್, ಕಾಟೂರು ಸಿದ್ದರಾಜು, ಸಾಹುಕಾರ್‌ಹುಂಡಿ ಮಹಾದೇವ್, ಪ್ರೊಫೆಸರ್ ನಂಜುಂಡಸ್ವಾಮಿ, ರಮ್ಮನಹಳ್ಳಿ ಸೋಮಣ್ಣ, ಜಯಸಿಂಹ ಧನಗನಹಳ್ಳಿ, ನಿಂಗರಾಜು ಎಡಹಳ್ಳಿ, ಪೋಟೋ ರಮೇಶ್ ಮಹಾದೇವ ಪಾಂಡೆ ಇನ್ನಿತರರು ಉಪಸ್ಥಿತರಿದ್ದರು

# ಖೋ ಖೋ ವಿಶ್ವಕಪ್ ಗೆದ್ದ ಭಾರತ ತಂಡದ ಬಿ.ಚೈತ್ರಾ, ಎಂ.ಕೆ.ಗೌತಮ್‌ಗೆ ಫೆ.6ಕ್ಕೆ ಅಭಿನಂದನೆ

ಮೈಸೂರು, ಫೆ.3(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಫೆ. 6ರಂದು ಬೆಳಗ್ಗೆ 11ಕ್ಕೆ ಖೋ ಖೋ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಪ್ರತಿನಿಧಿಸಿದ ತಿ.ನರಸೀಪುರ ತಾಲೂಕಿನ ಕುರುಬೂರಿನ ಬಿ.ಚೈತ್ರಾ ಹಾಗೂ ಮಂಡ್ಯದ ಎಂ.ಕೆ. ಗೌತಮ್ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕರೆ ಗೋಪಾಲ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ ವತಿಯಿಂದ ವಿಶ್ವಕಪ್ ಖೋ ಖೋ ಪಂದ್ಯಾವಳಿಯಲ್ಲಿ ಭಾರತಕ್ಕೆ ಜಯ ತಂದುಕೊಟ್ಟ ಬಿ.ಚೈತ್ರಾ ಹಾಗೂ ಎಂ.ಕೆ.ಗೌತಮ್ ಅವರನ್ನು ಅಭಿನಂದಿಸಲಾಗುತ್ತಿದೆ. ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 'ಅರ್ಜುನ ಪ್ರಶಸ್ತಿ' ವಿಜೇತ ಹಿರಿಯ ಖೋ ಖೋ ಆಟಗಾರ್ತಿ ಶೋಭಾ ನಾರಾಯಣ್ ಸಾಧಕ ಖೋ ಖೋ ಪಟುಗಳಿಗೆ ಅಭಿನಂದಿಸಲಿದ್ದಾರೆ. ಮೌಂಟ್ ಎವರೆಸ್ಟ್ ಏರಿದ ಏಕೈಕ ಮಹಿಳೆ ಖ್ಯಾತಿಯ ಡಾ. ಉಷಾ ಹೆಗ್ಗಡೆ, ಮೈಸೂರು ವಿವಿಯ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ. ಕೃಷ್ಣ, ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಅಭಿನಂದನಾ ಸಮಾರಂಭದಲ್ಲಿ ಈ ಇಬ್ಬರು ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸಲು ಬಯಸುವವರು ಹಾರ ತುರಾಯಿ ತರದೇ, ನಗದು ರೂಪದ ಸಹಾಯ ಹಸ್ತ ಚಾಚುವಂತೆ ಮನವಿ ಮಾಡಲಾಗಿದೆ. ಸರ್ಕಾರ ಈ ಹಿಂದೆ ಘೋಷಿಸಿದ್ದ 5 ಲಕ್ಷ ರೂ. ಪ್ರೋತ್ಸಾಹ ಧನವನ್ನು ಮರು ಪರಿಶೀಲಿಸಬೇಕು. ಮಹಾರಾಷ್ಟ್ರ ಸರ್ಕಾರ ವಿಶ್ವಕಪ್ ಗೆದ್ದ ತಂಡದಲ್ಲಿದ್ದ ಆಟಗಾರರಿಗೆ ಎರಡೂವರೆ ಕೋಟಿ ರೂ. ಪ್ರೋತ್ಸಾಹ ಧನ ನೀಡಿ, ಉನ್ನತ ಮಟ್ಟದ ಹುದ್ದೆಗೆ ನಿಯೋಜಿಸಿದೆ. ರಾಜ್ಯದ ಆಟಗಾರರಿಗೂ ರಾಜ್ಯ ಸರ್ಕಾರ ಉತ್ತಮ ರೀತಿಯಲ್ಲಿ ಪ್ರೋತ್ಸಾಹ ಧನ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಅತ್ತಳ್ಳಿ ದೇವರಾಜು, ಡಾ.ಸಿ.ಕೃಷ್ಣ, ಎಸ್.ರಾಮಪ್ರಸಾದ್, ಎನ್.ಬಿ. ಆರಾಧ್ಯ, ದೇವರಾಜ್ ಪಿ.ಚಿಕ್ಕಳ್ಳಿ, ಎಂ.ಚಂದ್ರಶೇಖರ್ ಇದ್ದರು.

# ಕುಸ್ತಿಪಟು ಸಾಹಸ ಕಥೆಯ 'ಗಜರಾಮ' ಫೆ.7ಕ್ಕೆ ತೆರೆಗೆ

ಮೈಸೂರು,ಫೆ.3(ಎಂಟಿವೈ)– ಗ್ರಾಮೀಣ ಪ್ರದೇಶದ ಕುಸ್ತಿಪಟು ಬೆಂಗಳೂರಿಗೆ ಬಂದು ಎದುರಿಸುವ ಸವಾಲಿನ ಕಥೆಯುಳ್ಳ 'ಗಜರಾಮ' ಕನ್ನಡ ಚಲನಚಿತ್ರ ಫೆ.7ರಂದು ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ ಎಂದು ನಟಿ ರಾಗಿಣಿ ದ್ವಿವೇದಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಚಿತ್ರದಲ್ಲಿ ನಾನು ಪ್ರಧಾನ ಪಾತ್ರದಲ್ಲಿದ್ದು, ಶ್ರೀರಂಗಪಟ್ಟಣದ ಓರ್ವ ಕುಸ್ತಿ ಪಟು, ಬೆಂಗಳೂರು ಮಹಾನಗರಕ್ಕೆ ಬಂದು ತಾನು ಎದುರಿಸುವ ಸವಾಲು, ತನ್ನ ಅಸ್ತಿತ್ವವನ್ನು ತಾನು ಕಂಡುಕೊಳ್ಳುವ ಕಥೆಯ ಎಳೆಯ ಮೇಲೆ ಚಿತ್ರ ಇದೆ. ಕನ್ನಡದಲ್ಲಿ ಕ್ರೀಡೆ ಆಧರಿಸಿದ ಚಲನ ಚಿತ್ರಗಳು ಕಡಿಮೆಯಾಗಿವೆ. ಹೀಗಾಗಿ ಇದೊಂದು ಉತ್ತಮ ಚಿತ್ರವಾಗಿದೆ ಎಂದರು.

ನಾಯಕನಟ ರಾಜವರ್ಧನ ಮಾತನಾಡಿ, ಎರಡು ಗಂಟೆ ಕಾಲ ಬೋರ್ ಹೊಡೆಸದೇ ಮನರಂಜನೆ ನೀಡುವ ಚಿತ್ರ ಇದಾಗಿದೆ. ಇದರಲ್ಲಿ ತಮಗೊಂದು ಉತ್ತಮ ಪಾತ್ರವೂ ಇದೆ. ಈಗಾಗಲೇ ಬಿಡುಗಡೆ ಮಾಡಿರುವ ಅಧಿಕೃತ ವಿಡಿಯೋಗೆ ಉತ್ತಮ ಸ್ಪಂದನೆ ಸಿಕ್ಕಿದೆ. ಜೊತೆಗೆ ಮೈಸೂರು ಭಾಗದಲ್ಲಿಯೇ ಹೆಚ್ಚು ಚಿತ್ರೀಕರಣಗೊಂಡಿರುವುದು ವಿಶೇಷ ಎಂದರು.

# ಸದಭಿರುಚಿಯ ಹವ್ಯಾಸ ಉಳ್ಳವರಿಗೆ ನಿವೃತ್ತಿ ಅನ್ನುವುದೇ ಇರುವುದಿಲ್ಲ

## ಸಂಗೀತ ವಿವಿ ಕುಲಸಚಿವ ಡಾ.ಎಂ.ಜಿ.ಮಂಜುನಾಥ್ ಅಭಿಪ್ರಾಯ



ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮೈಸೂರು ವಿಭಾಗದ ಕಚೇರಿಯಲ್ಲಿ ಅಪರ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಾ.ಸಿದ್ದರಾಜು ಅವರಿಗೆ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಮೈಸೂರು, ಫೆ. 3– ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ವಿಭಾಗದ ಕಚೇರಿಯಲ್ಲಿ ಅಪರ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಾ.ಸಿದ್ದರಾಜು ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಅಪರ ನಿರ್ದೇಶಕರ ಕಚೇರಿ, ಕ್ರಾಫರ್ಡ್ ಹಾಲ್ ಹಿಂಭಾಗ ಏರ್ಪಡಿಸಲಾಗಿತ್ತು.

ಈ ವೇಳೆ ಸಂಗೀತ ವಿಶ್ವವಿದ್ಯಾನಿಲಯ ಕುಲಸಚಿವರು, (ಮೌಲ್ಯಮಾಪನ) ಡಾ.ಎಂ.ಜಿ.ಮಂಜುನಾಥ್ ಮಾತನಾಡಿ, ಸರ್ಕಾರಿ ನೌಕರರಿಗೆ ನಿವೃತ್ತಿ ಎನ್ನುವುದು ಅನಿವಾರ್ಯ. ಈ ವಿಶ್ರಾಂತ, ನಿವೃತ್ತಿ ಪದದಿಂದ ಸಿದ್ದರಾಜು ಅವರು ದೂರ ಇದ್ದಾರೆ. ಅದು ಇವರಿಗೆ ಅನ್ವಯಿಸುವುದಿಲ್ಲ. ಏಕೆಂದರೆ ವಿಜ್ಞಾನ ಲೇಖಕರಾಗಿ, ಪುಸ್ತಕಪ್ರೇಮಿಯಾಗಿ, ಸಸ್ಯಪ್ರೇಮಿಯಾಗಿ, ಇನ್ನೂ ಹಲವು ಸದಾಭಿರುಚಿಯ ಹವ್ಯಾಸಗಳನ್ನು ರೂಢಿಸಿಕೊಂಡಿರುವ ಇವರಿಗೆ ಈ ದಿನ ಬೇರೊಂದು ಚಟುವಟಿಕೆಗೆ ತೊಡಗಿಸುವ ಮುನ್ನುಡಿಯ ಸುದಿನವಾಗಿದೆ ಎಂದು ಅಭಿಪ್ರಾಯಪಟ್ಟರು.

ಅಲ್ಲದೆ ಜನರ ಹಾಗೂ ವೃತ್ತಿ ಬಾಂಧವರೊಂದಿಗೆ ಗೌರವ ಸಂಪಾದಿಸಿಕೊಂಡಿದ್ದಾರೆ. ಅವರ ಜೀವನ ಪ್ರೀತಿಯು ವಿಶಿಷ್ಟವಾದದ್ದು, ಕನ್ನಡದಲ್ಲಿ ವಿಜ್ಞಾನ ಲೇಖನಗಳನ್ನು, ಸಂಶೋಧನಾ ಲೇಖನಗಳನ್ನು ಅವರು ಬರೆಯುತ್ತಾ ಬಂದಿದ್ದು, ಅವೆಲ್ಲವನ್ನು ಒಟ್ಟಾಗಿ ಸಂಗ್ರಹಿಸಿ, ಪುಸ್ತಕ ರೂಪದಲ್ಲಿ ಪ್ರಕಟಿಸಲಿ ಎಂದು ಆಶಿಸಿದರು.

ಕರ್ನಾಟಕ ಇಂಜಿನಿಯರ್ ಸಂಘದ ದೇವರಾಜು ಮಾತನಾಡಿ, ವೃತ್ತಿಯಲ್ಲಿ ಕೆಎಎಸ್ ಅಧಿಕಾರಿಯಾಗಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ ಇವರು ಐಎಎಸ್ ಅಧಿಕಾರಿಯಾಗಬೇಕಾಗಿತ್ತು. ವೃತ್ತಿಯಲ್ಲಿ ಇದ್ದಾಗಲೇ ವಿವಿಧ ರೀತಿಯ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವಿಶಿಷ್ಟ ರೀತಿಯ ಹವ್ಯಾಸಗಳನ್ನು ಮೈಗೂಡಿಸಿಕೊಂಡಿದ್ದಾರೆ. ಅವರ ಮನೆಯ ಹೊರಗೆ ಅನೇಕ ಬಗೆಬಗೆಯ ಸಸ್ಯ ಸಂಕುಲಗಳನ್ನು, ಹೂವಿನ ಗಿಡಗಳನ್ನು ಬೆಳೆಸಿದ್ದು, ಇವರ ಪರಿಸರ ಪ್ರೀತಿ ಅಪಾರ ಕಾಳಜಿಯನ್ನು ತೋರಿಸುತ್ತದೆ ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಶ್ರಾಂತ ಉಪನಿರ್ದೇಶಕರಾದ ಸ್ವಾಮಿ, ಮಂಜುಳಾ ಮಾತನಾಡಿದರು. ಡಾ.ರಾಮಲಿಂಗಯ್ಯ, ಡಾ.ಬಿ.ಕೆ.ಸುರೇಶ್, ರವಿದಾಸ್, ಪ್ರಭು, ಸಿದ್ದರಾಜುರವರ ಪತ್ನಿ ಗೀತಾ, ಮಗ ಕೃತಿಕ್ ಇದ್ದರು.

## ಸಂತೋಷ್‌ಕುಮಾರ್‌ಗೆ ಪಿಹೆಚ್.ಡಿ ಪದವಿ



**ಮೈಸೂರು:** ಡಾ.ಜೆ.ಹನುಮಂತಪ್ಪ ಅವರ ಮಾರ್ಗದರ್ಶನದಲ್ಲಿ ಕೆ.ಎಸ್. ಸಂತೋಷ್‌ಕುಮಾರ್ ಅವರು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

# ದೇಶ - ವಿದೇಶ

## ಭಾರತೀಯ ಮೂಲದ ಅಮೆರಿಕ ಸಂಗೀತಗಾರ್ತಿ ಚಂದ್ರಿಕಾ ಟಂಡನ್‌ಗೆ ಗ್ರ್ಯಾಮಿ ಪ್ರಶಸ್ತಿ



**ಲಾಸ್ ಏಂಜಲೀಸ್:** ಭಾರತೀಯ ಮೂಲದ ಅಮೆರಿಕನ್ ಗಾಯಕಿ ಮತ್ತು ಉದ್ಯಮಿ ಚಂದ್ರಿಕಾ ಟಂಡನ್ ಅವರು ಅತ್ಯುತ್ತಮ ಹೊಸ ಯುಗ, ಆಂಬಿಯೆಂಟ್ ಅಥವಾ ಚಾಂಟ್ ಆಲ್ಬಮ್ ವಿಭಾಗದಲ್ಲಿ 'ತ್ರಿವೇಣಿ' ಆಲ್ಬಂಗಾಗಿ ಗ್ರ್ಯಾಮಿ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಚಂದ್ರಿಕಾ ಟಂಡನ್ ಸಿದ್ದಪಡಿಸಿದ 'ತ್ರಿವೇಣಿ' ಆಲ್ಬಮ್‌ಗೆ 'ಬೆಸ್ಟ್ ನ್ಯೂ ಏಜ್' ವಿಭಾಗದಲ್ಲಿ ಪ್ರಶಸ್ತಿ ದೊರೆತಿದೆ. ಸ್ಪರ್ಧೆಯಲ್ಲಿ ಇದ್ದ ಭಾರತದ ರಿಕ್ಕಿ ಕೇಜ್ ಮೊದಲಾದವರನ್ನು ಹಿಂದಿಕ್ಕಿದ್ದಾರೆ. ಲಾಸ್ ಏಂಜಲೀಸ್‌ನ ಕ್ರಿಪ್ಟೋ ಡಾಟ್ ಕಾಮ್ ಅರೆನಾದಲ್ಲಿ ಭಾನುವಾರದಂದು ರೆಕಾರ್ಡಿಂಗ್ ಅಕಾಡೆಮಿ ಆಯೋಜಿಸಿದ್ದ ಅತಿದೊಡ್ಡ ಸಂಗೀತ ಪ್ರಶಸ್ತಿ 67ನೇ ಆವೃತ್ತಿಯಲ್ಲಿ ಘೋಷಣೆಯಾಗಿದೆ. ಸಂಗೀತವೆಂದರೆ ಪ್ರೀತಿ, ಸಂಗೀತವು ಬೆಳಕು, ಮತ್ತು ಸಂಗೀತವು ನಗು ಮತ್ತು ನಾವೆಲ್ಲರೂ ಪ್ರೀತಿ, ಬೆಳಕು ಮತ್ತು ನಗೆಯಿಂದ ಸುತ್ತುವರಿಯೋಣ. ಸಂಗೀತಕ್ಕೆ ಧನ್ಯವಾದಗಳು ಮತ್ತು ಸಂಗೀತ ಮಾಡುವ ಎಲ್ಲರಿಗೂ ಧನ್ಯವಾದಗಳು. ಭಾರತದ ಪರಂಪರೆ ಹಾಗೂ ಪಾಶ್ಚಿಮಾತ್ಯ ಸಂಗೀತಗಳ ಸಮ್ಮಿಶ್ರಣದಂತಿರುವ ಈ ಆಲ್ಬಂನಲ್ಲಿ ಒಟ್ಟು ಏಳು ಹಾಡುಗಳಿದ್ದು ಅವೆಲ್ಲವೂ ಕೇಳುಗರಿಗೆ ವಿಶೇಷ ಅನುಭವ ನೀಡುತ್ತವೆ ಎಂದು ಪ್ರಶಸ್ತಿ ಸ್ವೀಕಾರದ ನಂತರದ ಭಾಷಣದಲ್ಲಿ ಟಂಡನ್ ಹೇಳಿದರು.

## ಜಮ್ಮು–ಕಾಶ್ಮೀರದಲ್ಲಿ ನಡೆದ ಉಗ್ರರ ದಾಳಿ; ನಿವೃತ್ತ ಸೇನಾಧಿಕಾರಿ ಸಾವು

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಸೋಮವಾರ ನಡೆದ ಉಗ್ರರ ದಾಳಿಯಲ್ಲಿ ನಿವೃತ್ತ ಸೇನಾಧಿಕಾರಿ ಸಾವಿಗೀಡಾಗಿದ್ದು, ಅವರ ಪತ್ನಿ ಮತ್ತು ಮಗಳು ಗಾಯಗೊಂಡಿದ್ದಾರೆ.

ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಬೆಹಿಬಾಗ್ ಪ್ರದೇಶದಲ್ಲಿ ಮಧ್ಯಾಹ್ನ ನಿವೃತ್ತ ಸೇನಾಧಿಕಾರಿ ಮಂಜೂರ್ ಅಹ್ಮದ್ ವಾಗೆ, ಅವರ ಪತ್ನಿ ಮತ್ತು ಮಗಳ ಕಡೆಗೆ ಉಗ್ರರು ಪಾಯಿಂಟ್–ಬ್ಲಾಂಕ್ ರೇಂಜ್‌ನಿಂದ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ದಾಳಿಯ ಬಳಿಕ ಮೂವರಿಗೆ ಗಾಯಗಳಾಗಿದ್ದು, ಕೂಡಲೇ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ. ವೈದ್ಯರ ಪ್ರಕಾರ, ಕಿಬ್ಬೊಟ್ಟೆಯ ಭಾಗಕ್ಕೆ ಗುಂಡು ತಗುಲಿದ ನಿವೃತ್ತ ಸೇನಾಧಿಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಸಾವಿಗೀಡಾಗಿದ್ದಾರೆ. ಕಾಲಿಗೆ ಗುಂಡು ತಗುಲಿದ ಅವರ ಪತ್ನಿ ಮತ್ತು ಮಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿಸಿದ್ದಾರೆ. ಉಗ್ರರ ದಾಳಿ ನಂತರ, ಪೊಲೀಸರು, ಸೇನೆ ಮತ್ತು ಸಿಆರ್‌ಪಿಎಫ್ ಯೋಧರ ತುಕಡಿ ಸ್ಥಳಕ್ಕೆ ತಲುಪಿದೆ. ದಾಳಿಕೋರರನ್ನು ಪತ್ತೆಹಚ್ಚಲು ಕಾರ್ಡನ್ ಮತ್ತು ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

## ಪಾಕ್‌ನಲ್ಲಿ ಯೋಧರು, ಉಗ್ರರ ಗುಂಡಿನ ಚಕಮಕಿ: 18 ಸೈನಿಕರು ಸೇರಿ 41 ಸಾವು



**ಪೇಷಾವರ:** ಪಾಕಿಸ್ತಾನದ ನೈರುತ್ಯ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಅರೆಸೇನಾ ಪಡೆಯ ಯೋಧರು ಮತ್ತು ಉಗ್ರರ ನಡುವೆ ನಡೆದ ಗುಂಡಿನ ಕಾಳಗದಲ್ಲಿ 41 ಜನರು ಮೃತಪಟ್ಟಿದ್ದಾರೆ. ಘಟನೆಯಲ್ಲಿ 18 ಯೋಧರು ಮತ್ತು 23 ಉಗ್ರರು ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಪಾಕಿಸ್ತಾನದ ಸೇನಾ ಮುಖ್ಯಸ್ಥ ಸೈಯದ್ ಮುನೀರ್ ಬಲೂಚಿಸ್ತಾನ ಪ್ರಾಂತ್ಯಕ್ಕೆ ಭೇಟಿ ನೀಡಿದ ನಂತರ ಈ ಘಟನೆ ನಡೆದಿದೆ. ಇಲ್ಲಿನ ಮಂಗೋಚಾರ್ ಗ್ರಾಮದ ಸಮೀಪದಲ್ಲಿ ಯೋಧರು ಪ್ರಯಾಣಿಸುತ್ತಿದ್ದ ವಾಹನವನ್ನು ಅಡ್ಡಗಟ್ಟಿದ ಉಗ್ರರು ಯೋಧರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಬಳಿಕ ಯೋಧರು ಪ್ರತಿದಾಳಿ ನಡೆಸಿದ್ದು 23 ಉಗ್ರರನ್ನು ಹತ್ಯೆ ಮಾಡಿದ್ದಾರೆ. 20ಕ್ಕೂ ಹೆಚ್ಚು ಉಗ್ರರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಯಾವುದೇ ಸಂಘಟನೆ ಈ ದಾಳಿಯ ಹೊಣೆ ವಹಿಸಿಕೊಂಡಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಬಲೂಚಿಸ್ತಾನ ಪ್ರಾಂತದಲ್ಲಿ ಬಂಡುಕೋರ ಚಟುವಟಿಕೆ ನಡೆಸುತ್ತಿರುವ ಬಲೂಚಿಸ್ತಾನ್ ಲಿಬರೇಷನ್ ಆರ್ಮಿ (ಬಿಎಲ್‌ಎ) ಇತ್ತೀಚಿನ ದಿನಗಳಲ್ಲಿ ಸಕ್ರಿಯವಾಗಿದ್ದು ಭದ್ರತಾ ಪಡೆಗಳ ಮೇಲೆ ದಾಳಿ ಮಾಡುತ್ತಿದೆ.

## ಮಹಾ ಕುಂಭಮೇಳ ಕಾಲ್ತುಳಿತ: ಪಿಐಎಲ್ ವಿಚಾರಣೆಗೆ ಸುಪ್ರೀಂ ನಕಾರ



**ನವದೆಹಲಿ:** ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದ ವೇಳೆಯಲ್ಲಿ ಸಂಭವಿಸಿದ ಕಾಲ್ತುಳಿತದ ಹಿನ್ನೆಲೆಯಲ್ಲಿ ಭಕ್ತರ ಸುರಕ್ಷತೆಗೆ ಸೂಕ್ತ ಮಾರ್ಗಸೂಚಿಗಳನ್ನು ಖಾತ್ರಿಗಾಗಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿಯೊಂದರ ವಿಚಾರಣೆ ನಡೆಯುತ್ತಿದೆ ಎಂಬ ಉತ್ತರ ಪ್ರದೇಶ ಸರ್ಕಾರದ ಮನವಿಯನ್ನು ಆಲಿಸಿದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್‌ಕುಮಾರ್ ಒಳಗೊಂಡ ನ್ಯಾಯಪೀಠ, ಇದೊಂದು ದುರದೃಷ್ಟಕರ ಘಟನೆ ಎಂದು ಬಣ್ಣಿಸಿ, ಅರ್ಜಿದಾರ ವಕೀಲ ವಿಶಾಲ್ ತಿವಾರಿ ಅವರಿಗೆ ಅಲಹಾಬಾದ್ ಹೈಕೋರ್ಟ್‌ಗೆ ಮೊರೆ ಹೋಗುವಂತೆ ತಿಳಿಸಿತು. ಘಟನೆ ಸಂಬಂಧ ನ್ಯಾಯಾಂಗ ತನಿಖೆ ಆರಂಭಿಸಲಾಗಿದೆ ಎಂದು ಉತ್ತರಪ್ರದೇಶ ಸರ್ಕಾರದ ಪರವಾಗಿ ಹಿರಿಯ ವಕೀಲ ಮುಕುಲ್ ರೋಹಟಗಿ ಸಲ್ಲಿಸಿದ ಮನವಿಯನ್ನು ಸುಪ್ರೀಂ ಕೋರ್ಟ್ ಆಲಿಸಿತು. ಪ್ರಯಾಗ್‌ರಾಜ್‌ನಲ್ಲಿ ಕಾಲ್ತುಳಿತದ ಘಟನೆ ಸಂಭವಿಸಿದ ಒಂದು ದಿನದ ನಂತರ ಜನವರಿ 30ರಂದು ಸುಪ್ರೀಂಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲಾಗಿತ್ತು

## ಮೆಕ್ಸಿಕೊ, ಕೆನಡಾ, ಚೀನಾಗೆ ತೆರಿಗೆ ಆದೇಶಕ್ಕೆ ಡೊನಾಲ್ಡ್ ಟ್ರಂಪ್ ಸಹಿ



**ವಾಷಿಂಗ್ಟನ್:** ಮೆಕ್ಸಿಕೊ, ಕೆನಡಾ ಹಾಗೂ ಚೀನಾದ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಆದೇಶಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಈ ಮೂರು ರಾಷ್ಟ್ರಗಳೊಂದಿಗೆ ಅಮೆರಿಕಕ್ಕೆ ದೀರ್ಘಕಾಲಿನ ವ್ಯಾಪಾರ ಸಂಬಂಧವಿದ್ದು, ಮತ್ತೊಂದು ಜಾಗತಿಕ ವ್ಯಾಪಾರ ಯುದ್ಧಕ್ಕೆ ಮುನ್ನುಡಿ ಬರೆಯುವ ಆತಂಕ ಎದುರಾಗಿದೆ. ಕೆನಡಾ ಹಾಗೂ ಮೆಕ್ಸಿಕೊದ ಎಲ್ಲಾ ಬಗೆ ಉತ್ಪನ್ನಗಳ ಮೇಲೆ ಶೇ.25ರಷ್ಟು ತೆರಿಗೆ ಹೇರಲಾಗಿದೆ. ಕೆನಡಾದ ಇಂಧನ ಹಾಗೂ ತೈಲ ಉತ್ಪನ್ನಗಳ ಮೇಲೆ ಶೇ.10 ಸುಂಕ ವಿಧಿಸಲಾಗಿದೆ. ಚೀನಾದ ಉತ್ಪನ್ನಗಳ ಮೇಲೆ ಶೇ.10ರಷ್ಟು ಸುಂಕ ಹೇರುವ ಆದೇಶಕ್ಕೆ ಟ್ರಂಪ್ ಸಹಿ ಬಿದ್ದಿದೆ. ಮಂಗಳವಾರ ಮಧ್ಯರಾತ್ರಿಯಿಂದ ಈ ಹೊಸ ಸುಂಕ ಅನ್ವಯವಾಗಲಿದ್ದು, ಹಾಲಿ ಇರುವ ತೆರಿಗೆ ಜೊತೆಗೆ ಹೊಸದನ್ನೂ ವಿಧಿಸಲಾಗುತ್ತದೆ. ಅಮೆರಿಕಕ್ಕೆ ಅಕ್ರಮ ವಲಸಿಗರು ಹಾಗೂ ಫೆಂಟನಲ್ ಬರುವುದು ನಿಲ್ಲುವವರೆಗೂ ಈ ಸುಂಕ ಜಾರಿಯಲ್ಲಿರಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಈ ಹೊಸ ತೆರಿಗೆ ಹೇರಿಕೆಯಿಂದಾಗಿ ಈ ಮೂರು ದೇಶಗಳ ಉತ್ಪನ್ನಗಳ ಬೆಲೆ ಏರಿಕೆಯಾಗಲಿದೆ. ಅಮೆರಿಕದ ಮೂರನೇ ಒಂದು ಪ್ರಮಾಣದಷ್ಟು ಆಮದು ಈ ರಾಷ್ಟ್ರಗಳಿಂದಲೇ ಆಗುತ್ತವೆ.

# 2ನೇ ದಿನದ ಪಾದಯಾತ್ರೆಯಲ್ಲಿ ಮಹಿಳೆಯರು ಭಾಗಿ

**● ತಾವಳಗೇರಿ ಮಚ್ಚಮಾಡ ಐನ್ ಮನೆಯಲ್ಲಿ ಸ್ವಾಗತ ● ಪೆರುಮಾಳ್ ಅಜ್ಜ ನಡೆಯಲ್ಲಿ ಪ್ರಾರ್ಥನೆ**



ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ನಡೆಯುತ್ತಿರುವ 'ಕೊಡವಾಮೆ ಬಾಳೋ' ಪಾದಯಾತ್ರೆ 2ನೇ ದಿನವಾದ ಸೋಮವಾರ ಟಿ.ಶೆಟ್ಟಿಗೇರಿಯಿಂದ ಪೊನ್ನಂಪೇಟೆವರೆಗೆ ನಡೆಯಿತು.

ಮಡಿಕೇರಿ, ಫೆ.3–ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಕುಟ್ಟದಿಂದ ಮಡಿಕೇರಿವರೆಗಿನ 'ಕೊಡವಾಮೆ ಬಾಳೋ' ಪಾದಯಾತ್ರೆ 2ನೇ ದಿನವಾದ ಸೋಮವಾರ ಟಿ.ಶೆಟ್ಟಿಗೇರಿಯಿಂದ ಪೊನ್ನಂಪೇಟೆವರೆಗೆ ಸುಸೂತ್ರವಾಗಿ ನಡೆಯಿತು.

ಟಿ.ಶೆಟ್ಟಿಗೇರಿ–ಹುದಿಕೇರಿ ಮೂಲಕ ಪೊನ್ನಂಪೇಟೆವರೆಗೆ 16 ಕಿ.ಮೀ. ಪಾದಯಾತ್ರೆ ನಡೆಸಲಾಯಿತು. ಪಾದಯಾತ್ರೆಯಲ್ಲಿ ಟಿ.ಶೆಟ್ಟಿಗೇರಿ ಕೊಡವ ಸಮಾಜದ ಪೊಮ್ಮಕ್ಕಡ ಕೂಟ ಹಾಗೂ ಸಂಭ್ರಮ ಮಹಿಳಾ ಸಾಂಸ್ಕೃತಿಕ ಕೇಂದ್ರದ ಮಹಿಳೆಯರು ಸಾಂಪ್ರದಾಯಿಕ ಕೊಡವ ಉಡುಪಿನೊಂದಿಗೆ ತಳಿಯತಕ್ಕಿ ಬೊಳಕ್ ಹಿಡಿದು ಸಾಗಿದರು.

ತಾವಳಗೇರಿ ಮಚ್ಚಮಾಡ ಐನ್ ಮನೆಯಲ್ಲಿ ಮಚ್ಚಮಾಡ ಕುಟುಂಬಸ್ಥರು ಪಾದ ಯಾತ್ರೆಯನ್ನು ಸ್ವಾಗತಿಸಿ ಉಪಚರಿಸಿದರು. ಬಳಿಕ ಐತಿಹಾಸಿಕ ತಾವಳಗೇರಿಯ ಪೆರುಮಾಳ್ ಮಂದ್‌ನಲ್ಲಿರುವ ಪೆರುಮಾಳ್ ಅಜ್ಜ ನಡೆಯಲ್ಲಿ ಪ್ರಾರ್ಥಿಸಿ ಪಾದಯಾತ್ರೆ ಹಾಗೂ ಬೇಡಿಕೆಗಳ ಈಡೇರಿಕೆ ಸಂಕಲ್ಪ ಯಶಸ್ವಿಗೊಳಿಸುವಂತೆ ಪ್ರಾರ್ಥಿಸಲಾಯಿತು.

ಹೈಸೊಡ್ಲೂರು ಗ್ರಾಮದ ಬಯವಂಡ ಸರಸ್ವತಿ ಪೂವಯ್ಯ(86) ಅವರು ವ್ಹೀಲ್ ಚೇರ್‌ನಲ್ಲಿ ಪಾದಯಾತ್ರೆಗೆ ಆಗಮಿಸಿ ಬೆಂಬಲ ವ್ಯಕ್ತಪಡಿಸಿದರು. ಇದರೊಂದಿಗೆ ಸರಸ್ವತಿ ಪೂವಯ್ಯ ಕೊಡವ ಅಭಿಮಾನದೊಂದಿಗೆ ಕೊಡವಾಮೆ ಬಾಳೋ ಪಾದಯಾತ್ರೆಯಲ್ಲಿ ಭಾಗವಹಿಸಿದ ಹಿರಿಯ ಮಹಿಳೆ ಎನಿಸಿಕೊಂಡರು. ದೇಶ ತಕ್ಕರು, ವಿವಿಧ ಕೊಡವ ಸಮಾಜ, ಕೊಡವ ಭಾಷಿಕ ಸಮುದಾಯಗಳು, ವಿವಿಧ ಕೊಡವ ಸಂಘಟನೆಗಳ ಪ್ರಮುಖರು ಪಾದಯಾತ್ರೆಯಲ್ಲಿ ಶಾಂತಿಯುತವಾಗಿ ಪಾಲ್ಗೊಂಡಿದ್ದರು.

**ಮುಸ್ಲಿಮರ ಬೆಂಬಲ:** ಪಾಲಿಬೆಟ್ಟ ತೋಡ್‌ಗೆ ಆಗಮಿಸಿದ ಕೊಡವಾಮೆ ಬಾಳೋ ಪಾದಯಾತ್ರೆಯನ್ನು ಮುಸ್ಲಿಮರು ಸ್ವಾಗತಿಸಿ ಬರಮಾಡಿಕೊಂಡರು. ಕೊಡವರ ಬೇಡಿಕೆಗಳನ್ನು ಸರ್ಕಾರ ಪರಿಗಣಿಸುವಂತಾಗಲಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ಬೆಂಬಲ ನೀಡಿದರು. ನಂತರ ಹೂ ಗುಚ್ಛ ನೀಡಿ ಶುಭ ಹಾರೈಸಿದರು.

ಈ ಸಂದರ್ಭ ಅಖಿಲ ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಚಮ್ಮಟ್ಟೀರ ಪ್ರವೀಣ್ ಉತ್ತಪ್ಪ, ಯುಕೋ ಸಂಘಟನೆ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ ಅವರು ಬೆಂಬಲಿಸಿದ ಮುಸ್ಲಿಮರಿಗೆ ಧನ್ಯವಾದ ಸಲ್ಲಿಸಿ, ಮಡಿಕೇರಿಯಲ್ಲಿ ನಡೆಯುವ ಬೃಹತ್ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

## ನಾಪೋಕ್ಲುವಿನಲ್ಲಿ ಅರೆ ಸೇನಾ ಪಡೆ ಪಥ ಸಂಚಲನ



ನಾಪೋಕ್ಲುವಿನಲ್ಲಿ ಕೇಂದ್ರ ಅರೆ ಸೇನಾ ಪಡೆ ತುಕಡಿ ಹಾಗೂ ಪೊಲೀಸರು ಪಥ ಸಂಚಲನ ನಡೆಸಿದರು.

ಮಡಿಕೇರಿ, ಫೆ.3–ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕೇಂದ್ರ ಅರೆ ಸೇನಾ ಪಡೆ ತುಕಡಿ ಹಾಗೂ ಪೊಲೀಸರು ನಾಪೋಕ್ಲುವಿನಲ್ಲಿ ಪಥಸಂಚಲನ ನಡೆಸಿದರು.

ನಾಪೋಕ್ಲುವಿನ ಮಾರುಕಟ್ಟೆ ಬಳಿಯಿಂದ ಕೇಂದ್ರ ಅರೆ ಸೇನಾ ಪಡೆ ಇನ್ಸ್‌ಪೆಕ್ಟರ್ ಕೃಷ್ಣ ಮೂರ್ತಿ, ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ಮುಖ್ಯ ಬೀದಿಗಳಲ್ಲಿ ಪಥ ಸಂಚಲನ ನಡೆಸುವ ಮೂಲಕ ನಿಮ್ಮ ರಕ್ಷಣೆಗೆ ನಾವಿದ್ದೇವೆ ಎಂಬ ಸಂದೇಶ ಸಾರಿ ಜಾಗೃತಿ ಮೂಡಿಸಿದರು. ನಾಪೋಕ್ಲು ಠಾಣೆ ಸಿಬ್ಬಂದಿ ಪಾಲ್ಗೊಂಡಿದ್ದರು.

## ಪೆಟ್ರೋಲ್ ಬಂಕ್ ಕಾರ್ಮಿಕನ ಮೇಲೆ ಹಲ್ಲೆ

ಗೋಣಿಕೊಪ್ಪಲು, ಫೆ.3– ಪೆಟ್ರೋಲ್ ಬಂಕ್‌ನಲ್ಲಿ ಸಿಗರೇಟು ಸೇವನೆ ಮಾಡಿದ್ದನ್ನು ಆಕ್ಷೇಪಿಸಿದ್ದಕ್ಕೆ ಪೆಟ್ರೋಲ್ ಬಂಕ್ ಕಾರ್ಮಿಕನ ಮೇಲೆ ಹಲ್ಲೆ ನಡೆಸಿದ ಘಟನೆ ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದಲ್ಲಿ ನಡೆದಿದೆ.

ಸೋಮವಾರ ಮುಂಜಾನೆ 4 ಗಂಟೆಗೆ ಕುಟ್ಟದ ಅನುಗ್ರಹ ಪೆಟ್ರೋಲ್ ಬಂಕ್‌ಗೆ ಇಂಧನ ಹಾಕಿಸಿಕೊಳ್ಳಲು ಕೇರಳ ನೋಂದಣಿ ವಾಹನ ಬಂದಿದೆ. ವಾಹನದಲ್ಲಿ 5 ಮಂದಿ ಪ್ರಯಾಣಿಕರಿದ್ದು, ಓರ್ವ ಸಿಗರೇಟು ಸೇವನೆ ಮಾಡುತ್ತಿದ್ದ. ಇದನ್ನು ಗಮನಿಸಿದ ಇಂಧನ ತುಂಬಿಸುವ ಕಾರ್ಮಿಕ ಗಿರೀಶ್ ಸಿಗರೇಟ್ ಸೇವನೆ ಮಾಡದಂತೆ ಆಕ್ಷೇಪಿಸಿದ್ದಾನೆ. ಈ ವೇಳೆ ಕಾರಿನಿಂದ ಇಳಿದ ಗಿರೀಶ್ ಮೇಲೆ ಹಲ್ಲೆ ನಡೆಸಿ ಅವಾಚ್ಯ ಪದಗಳಿಂದ ನಿಂದಿಸಿ ಸ್ಥಳದಿಂದ ಪರಾರಿಯಾಗಿದ್ದಾರೆ.

ಈ ಕುರಿತು ಕುಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೇರಳದಿಂದ ಕೊಡಗು ಪ್ರವಾಸಕ್ಕಾಗಿ ಬಂದಿರುವ ಗುಂಪು ಹಲ್ಲೆ ನಡೆಸಿದೆ. ಈ ವಾಹನ ಜಿಲ್ಲೆಯಲ್ಲಿ ಸಂಚರಿಸುತ್ತಿರುವ ಅನುಮಾನವಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಕಟ್ಟೆಮಾಡು ಮೃತ್ಯುಂಜಯ ದೇವಸ್ಥಾನ ಅರ್ಚಕರ ಮೇಲೆ ಹಲ್ಲೆಗೆ**

## ಕೊಡಗು ಜಿಲ್ಲಾ ವಿಶ್ವ ಹಿಂದೂ ಪರಿಷತ್ ಖಂಡನೆ

ಮಡಿಕೇರಿ, ಫೆ.3–ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯದ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಹಾಗೂ ಅವರ ತಾಯಿ ಮೇಲೆ ಮೂರ್ನಾಡಿನಲ್ಲಿ ಕಿಡಿಗೇಡಿಗಳು ನಡೆಸಿದ ಹಲ್ಲೆ ಪ್ರಕರಣವನ್ನು ತೀವ್ರವಾಗಿ ಖಂಡಿಸುವುದಾಗಿ ಕೊಡಗು ಜಿಲ್ಲಾ ವಿಶ್ವ ಹಿಂದೂ ಪರಿಷತ್ ಮಠ–ಮಂದಿರ ಪ್ರಮುಖ್ ಡಾ.ಮಹಾಬಲೇಶ್ವರ್ ತಿಳಿಸಿದ್ದಾರೆ.

ದೇವಾಲಯ, ಅರ್ಚಕರು ಹಾಗೂ ಧಾರ್ಮಿಕ ಪೂಜೆ, ಪುನಸ್ಕಾರ ಇವೆಲ್ಲವು ಹಿಂದೂ ಧರ್ಮದ ಮುಖ್ಯ ಆಧಾರ ಸ್ತಂಭವಾಗಿವೆ. ಹಿಂದೂ ಧರ್ಮವನ್ನು ಉಳಿಸಲು ಅರ್ಚಕರು ನೀಡುತ್ತಿರುವ ಕೊಡುಗೆ ಅಪಾರವಾಗಿದೆ. ಈ ರೀತಿಯ ಹಲ್ಲೆ, ಜೀವ ಬೆದರಿಕೆ ಪ್ರಕರಣಗಳು ಕುತಂತ್ರದ ಒಂದು ಭಾಗವಾಗಿದೆ. ಪ್ರಕರಣವನ್ನು ಲಘುವಾಗಿ ಪರಿಗಣಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಹಲ್ಲೆಗೊಳಗಾದ ಅರ್ಚಕರು ಹಾಗೂ ಅವರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ತಪ್ಪಿದ್ದಲ್ಲಿ ಬೀದಿಗಿಳಿದು ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

## ಇಂದು ಒಕ್ಕಲಿಗರ ಸಂಘದಿಂದ ಆರೋಗ್ಯ ತಪಾಸಣೆ ಶಿಬಿರ



ಸುದ್ದಿಗೋಷ್ಠಿಯಲ್ಲಿ ಎಂ.ಕೆ.ದಿನೇಶ್ ಮಾತನಾಡುತ್ತಿರುವುದು.

**ಕುಶಾಲನಗರ :** ಆದಿಚುಂಚನಗಿರಿ ವಿಶ್ವವಿದ್ಯಾಲಯ, ಆದಿ ಚುಂಚನಗಿರಿ ಆಸ್ಪತ್ರೆ ಹಾಗೂ ತಾಲೂಕು ಒಕ್ಕಲಿಗರ ಸಂಘದ ಆಶ್ರಯದಲ್ಲಿ ಫೆ.4ರಂದು ಪಟ್ಟಣದಲ್ಲಿ ಬೃಹತ್ ಆರೋಗ್ಯ ಉಚಿತ ತಪಾಸಣೆ ಹಾಗೂ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಕೆ.ದಿನೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಎಪಿಎಂಸಿ ಎಂಸಿ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಅಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ನಡೆಯುವ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳಲಿದ್ದಾರೆ. ಆದಿಚುಂಚನಗಿರಿ ಆಸ್ಪತ್ರೆ ಹೃದ್ರೋಗ, ನರರೋಗ, ಕ್ಯಾನ್ಸರ್, ಮಧುಮೇಹ, ಸ್ತ್ರೀ ರೋಗ, ಕಿವಿ, ಮೂಗು, ಗಂಟಲು ಸೇರಿದಂತೆ 16ಕ್ಕೂ ಹೆಚ್ಚಿನ ವಿಭಾಗದ ತಜ್ಞ ವೈದ್ಯರು ಸೇರಿದಂತೆ 110 ಸಿಬ್ಬಂದಿ ತಪಾಸಣೆ ನಡೆಸಲಿದ್ದಾರೆ ಎಂದರು.

ಶಾಸಕ ಡಾ.ಮಂತರ್‌ಗೌಡ ಶಿಬಿರಕ್ಕೆ ಚಾಲನೆ ನೀಡಲಿದ್ದು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಹರಪಳ್ಳಿ ರವೀಂದ್ರ, ಜಿಲ್ಲಾ ಸಂಘದ ಚಂಗಪ್ಪ ಹಾಗೂ ಸಂಘದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಎಂ.ಎಂ.ಪ್ರಕಾಶ್, ನಿರ್ದೇಶಕ ಮಧುಕುಮಾರ್ ಇದ್ದರು.



ವಿರಾಜಪೇಟೆಯಲ್ಲಿ ಲಿಟಲ್ ಸ್ಕಾಲರ್ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ಕ್ಯಾನ್ಸರ್ ಜಾಗೃತಿ ಜಾಥಾ ನಡೆಸಿದರು.

## ವಿರಾಜಪೇಟೆಯಲ್ಲಿ ಕ್ಯಾನ್ಸರ್ ಜಾಗೃತಿ ಜಾಥಾ

ವಿರಾಜಪೇಟೆ, ಫೆ.3–ವಿಶ್ವ ಕ್ಯಾನ್ಸರ್ ತಡೆ ದಿನ ಅಂಗವಾಗಿ ವಿರಾಜಪೇಟೆ ಲಿಟಲ್ ಸ್ಕಾಲರ್ ಅಕಾಡೆಮಿ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ನಗರದ ಮುಖ್ಯ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಿದರು.

ಇದೇ ವೇಳೆ ನಗರದ ಆಯುರ್ವೇದ ವೈದ್ಯೆ ಸುನೀತಾ ಮಾತನಾಡಿ, ಕೆಲ ಔಷಧೀಯ ಗಿಡ–ಮರಗಳಿಗೆ ಕ್ಯಾನ್ಸರ್ ಗುಣಪಡಿಸುವ ಶಕ್ತಿ ಇರುದೆ. ಅದನ್ನು ಉಪಯೋಗಿಸುವ ವಿಧಾನಗಳನ್ನು ತಿಳಿಯಬೇಕು ಎಂದು ಹೇಳಿದರು.

ಇದೇ ವೇಳೆ ಜಾಥಾ ಗಡಿಯಾರ ಕಂಬ, ಖಾಸಗಿ ಬಸ್ ನಿಲ್ದಾಣ ಮಾರ್ಗವಾಗಿ ನಡೆಯಿತು. ಪಂಜರುಪೇಟೆಯ ಹಿಲ್ ಭ್ಲೂಂ ಆಸ್ಪತ್ರೆ ವೈದ್ಯೆ ಡಾ.ದಕ್ಷಿತಾ, ಆಶೀರ್ವಾದ ಆಸ್ಪತ್ರೆ ವೈದ್ಯ ಬೋಪಣ್ಣ, ಲಿಟಲ್ ಸ್ಕಾಲರ್ ಅಕಾಡೆಮಿ ಅಧ್ಯಕ್ಷೆ ಪೂಜಾ ಸಜೇಶನ್, ಅಕಾಡೆಮಿ ಸದಸ್ಯರು, ವಿದ್ಯಾಸಂಸ್ಥೆ ಶಿಕ್ಷಕರು, ಸಿಬ್ಬಂದಿ ಮತ್ತು ನಿರ್ಮಲ ರಮಣ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸೋನಿಯಾ ಗಾಂಧಿ ಹೇಳಿಕೆ ಖಂಡನೀಯ



ಎಂ.ಎಂ.ಪರಮೇಶ್ವರ

ಮಡಿಕೇರಿ, ಫೆ.3–ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕುರಿತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ನೀಡಿರುವ ಬಡಪಾಯಿ ಮಹಿಳೆ ಎಂಬ ಹೇಳಿಕೆ ಖಂಡನೀಯ ಮತ್ತು ಇದು ಬುಡಕಟ್ಟು ಸಮುದಾಯಕ್ಕೆ ಮಾಡಿದ ಅಪಮಾನವಾಗಿದೆ ಎಂದು ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಂ.ಪರಮೇಶ್ವರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಪರಿಶಿಷ್ಟರ ಮತ ಬ್ಯಾಂಕ್‌ನಿಂದ ಶ್ರೀಮಂತ ರಾಜಕಾರಣ ಮಾಡಿ ದೇಶದ ಎಲ್ಲಾ ಅಧಿಕಾರವನ್ನು ಅನುಭವಿಸಿದ ಕಾಂಗ್ರೆಸ್ಸಿಗರು ಪರಿಶಿಷ್ಟ ಸಮುದಾಯವನ್ನು ಅಪಮಾನಿಸುತ್ತಲೇ ಬಂದಿದ್ದಾರೆ ಎಂದು ಆರೋಪಿಸಿದ್ದಾರೆ. ಕಾಂಗ್ರೆಸ್ ಪರಿಶಿಷ್ಟರನ್ನು ನಡೆಸಿಕೊಳ್ಳುತ್ತಿರುವ ರೀತಿಗೆ ರಾಷ್ಟ್ರಪತಿಗಳ ಕುರಿತು ಸೋನಿಯಾ ಗಾಂಧಿ ನೀಡಿರುವ ಕೀಳು ಅಭಿರುಚಿ ಹೇಳಿಕೆಯೇ ಸಾಕ್ಷಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸ್ಸಿಗರ ಮತ ಬ್ಯಾಂಕ್ ರಾಜಕಾರಣದ ಬಣ್ಣ ಬಯಲಾಗುತ್ತಿದ್ದು, ಪರಿಶಿಷ್ಟರು ಜಾಗೃತರಾಗುತ್ತಿದ್ದಾರೆ. ದೇಶದ ಉನ್ನತ ಹುದ್ದೆಯನ್ನು ಶ್ರೀಮಂತರು ಹಾಗೂ ಮೇಲ್ವರ್ಗದವರು ಮಾತ್ರ ಅಲಂಕರಿಸಬೇಕೆ, ಪರಿಶಿಷ್ಟರು ಅಥವಾ ಬಡವರು ಅಧಿಕಾರದಲ್ಲಿ ಇರಬಾರದೇ ಎಂದು ಪ್ರಶ್ನಿಸಿದ್ದಾರೆ.

ಸೋನಿಯಾ ಗಾಂಧಿ ಹೇಳಿಕೆಯನ್ನು ಇಡೀ ದೇಶವೇ ವಿರೋಧಿಸುತ್ತಿದೆ. ಕಾಂಗ್ರೆಸ್ ತಕ್ಷಣ ಬುಡಕಟ್ಟು ಸಮುದಾಯ ಹಾಗೂ ದೇಶದ ಜನರ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದ್ದಾರೆ.

**ಕಿವಿ ಚುಚ್ಚಿಸಲು ಆಸ್ಪತ್ರೆಗೆ ಕರೆತಂದಿದ್ದ ಮಗು ಸಾವು**

## ವೈದ್ಯರ ವಿರುದ್ಧ ಪೋಷಕರ ಪ್ರತಿಭಟನೆ



ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಗು ಕಳೆದುಕೊಂಡ ಪಾಲಕರು ಕಂಗಾಲಾಗಿರುವುದು.

> ಮಗುವಿನ ಮರಣೋತ್ತರ ಪರೀಕ್ಷೆ ನಡೆಸಿ ಸಾವಿಗೆ ಕಾರಣ ತಿಳಿದುಕೊಳ್ಳಲಾಗುವುದು. ಪ್ರಕರಣದಲ್ಲಿ ವೈದ್ಯರ ನಿರ್ಲಕ್ಷ್ಯ ಕಂಡುಬಂದರೆ ಕ್ರಮ ಕೈಗೊಳ್ಳಲಾಗುವುದು.
> –ಡಾ.ಅಲೀಂ ಪಾಷ, ತಾಲೂಕು ಆರೋಗ್ಯಾಧಿಕಾರಿ

ಗುಂಡ್ಲುಪೇಟೆ, ಫೆ.3–ಕಿವಿ ಚುಚ್ಚಿಸಲು ಆಸ್ಪತ್ರೆಗೆ ಕರೆತಂದಿದ್ದ ಆರು ತಿಂಗಳ ಗಂಡು ಮಗುವಿಗೆ ವೈದ್ಯರು ಕೊಟ್ಟ ಅನೆಸ್ತೇಷಿಯಾದಿಂದ ಮಗು ಮೃತಪಟ್ಟಿದೆ ಎಂದು ಆರೋಪಿಸಿ ಪೋಷಕರು ಹಾಗೂ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಾಲೂಕಿನ ಹಂಗಳ ಗ್ರಾಮದ ಆನಂದ್ ಸೋಮವಾರ ಪತ್ನಿ ಶುಭ ಮಾನಸಳೊಂದಿಗೆ ಶೆಟ್ಟಹಳ್ಳಿಯಿಂದ ತಮ್ಮ ಮಗುವಿಗೆ ಕಿವಿ ಚುಚ್ಚಿಸಲು ಬೊಮ್ಮಲಾಪುರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿದ್ದರು. ಈ ವೇಳೆ ವೈದ್ಯ ಡಾ.ನಾಗರಾಜು ಮಗುವಿಗೆ ಕಿವಿ ಚುಚ್ಚಲು ಅನೆಸ್ತೇಷಿಯಾ ಕೊಟ್ಟಿದ್ದಾರೆ. ಕೂಡಲೇ ಮಗು ಜೋರಾಗಿ ಕೈ ಕಾಲು ಬಡಿಯಲಾರಂಭಿಸಿದೆ. ಇದರಿಂದ ಗಾಬರಿಯಾದ ವೈದ್ಯರು ಕೂಡಲೇ ಮಗುವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮಕ್ಕಳ ವೈದ್ಯರ ಬಳಿಗೆ ಕರೆದೊಯ್ಯುವಂತೆ ಶಿಫಾರಸು ಮಾಡಿ ಕಳಿಸಿದರು. ಆದರೆ, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಮಗು ಮೃತಪಟ್ಟಿದೆ ಎಂದು ಸಂಬಂಧಿಕರು ಆರೋಪಿಸಿದರು.

ಮಗುವಿನ ಸಾವಿನಿಂದ ಕಂಗಾಲಾದ ಪಾಲಕರು ಹಾಗೂ ಸಂಬಂಧಿಕರು ಮಗುವಿನ ಸಾವಿಗೆ ವೈದ್ಯ ಡಾ.ನಾಗರಾಜು ನೀಡಿದ ಓವರ್ ಡೋಸ್ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿ, ಆಸ್ಪತ್ರೆಗೆ ಮುತ್ತಿಗೆ ಹಾಕಿದರು.

# ಅಕ್ರಮ ಸಂಬಂಧ: ಪ್ರಿಯಕರನೊಂದಿಗೆ ಸೇರಿ ಪತಿ ಕೊಂದ ಪತ್ನಿ!

**ನದಿಗೆ ಶವ ಎಸೆದು ನಾಪತ್ತೆ ಪ್ರಕರಣ ದಾಖಲಿಸಿದ್ದರು; ತನಿಖೆಗಿಳಿದ ಪೊಲೀಸರಿಗೆ ಸಿಕ್ತು ಭಯಾನಕ ಹತ್ಯೆ ಸಂಚು**

ಚಾಮರಾಜನಗರ, ಫೆ.3– ನಾಪತ್ತೆ ಪ್ರಕರಣವೊಂದನ್ನು ಭೇದಿಸಿರುವ ತಾಲೂಕಿನ ಕುದೇರು ಠಾಣೆ ಪೊಲೀಸರು, ಪ್ರಿಯಕರನೊಂದಿಗೆ ಸೇರಿ ಪತ್ನಿಯೇ ಪತಿಯನ್ನು ಹತ್ಯೆಗೈದು ದೇಹವನ್ನು ನದಿಗೆ ಎಸೆದಿದ್ದಲ್ಲದೇ, ನಾಪತ್ತೆ ದೂರು ದಾಖಲಿಸಿದ್ದನ್ನು ಪತ್ತೆ ಹಚ್ಚಿ ಪತ್ನಿ ಹಾಗೂ ಪ್ರಿಯಕರನನ್ನು ಬಂಧಿಸಿದ್ದಾರೆ.

**ವಿವರ:** ಜನ್ನೂರು ಗ್ರಾಮದ ಗೀತಾ ಎಂಬುವವರು ಜ.21ರಂದು ಕುದೇರು ಠಾಣೆಗೆ ಭೇಟಿ ನೀಡಿ ತನ್ನ ಪತಿ ರಮೇಶ್ ಜ.14ರಂದು ರಾತ್ರಿ ಮನೆ ಬಿಟ್ಟು ಹೋದವರು ಈವರೆಗೂ ವಾಪಸ್ಸಾಗಿಲ್ಲ. ಅವರು ಪದೇ ಪದೇ ಕೆಲದಿನ ಮನೆ ಬಿಟ್ಟು ಹೋಗಿ ವಾಪಸ್ಸಾಗುತ್ತಿದ್ದರು. ಆದರೆ ಈಗ ವಾರವಾದರೂ ಹಿಂದಿರುಗಿಲ್ಲ ಎಂದು ದೂರು ಸಲ್ಲಿಸಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಸಬ್‌ಇನ್ಸ್‌ಪೆಕ್ಟರ್ ಕುಮುದಾ ಅವರು ಕೇವಲ ನಾಪತ್ತೆ ದೂರು ಎಂದು ನಿರ್ಲಕ್ಷ್ಯ ವಹಿಸದೆ ತನಿಖೆಗಿಳಿದಿದ್ದಾರೆ.

ಈ ವೇಳೆ ಗೀತಾಳಿಗೆ ಅದೇ ಗ್ರಾಮದ ಗುರುಪಾದಸ್ವಾಮಿ ಎಂಬುವನೊಂದಿಗೆ ಸಂಬಂಧವಿತ್ತು ಎಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಗುರುಪಾದಸ್ವಾಮಿ, ಗೀತಾ ಮತ್ತು ರಮೇಶ್‌ನ ಮೊಬೈಲ್ ಕಾಲ್ ಡೀಟೆಲ್‌ಗಳನ್ನು ಸಂಗ್ರಹಿಸಿದಾಗ ಗೀತಾ ಹಾಗೂ ಗುರುಪಾದಸ್ವಾಮಿ ವರ್ತನೆ ಮೇಲೆ ಸಂಶಯವುಂಟಾದ ಕಾರಣ ಸಬ್‌ಇನ್ಸ್‌ಪೆಕ್ಟರ್ ಕುಮುದಾ ಅವರು ಗೀತಾಳನ್ನು ಠಾಣೆಗೆ ಕರೆಸಿ ತೀವ್ರವಾಗಿ ವಿಚಾರಣೆಗೊಳಪಡಿಸಿದ ವೇಳೆ ಆಕೆ ಪ್ರಿಯಕರ ಗುರುಪಾದಸ್ವಾಮಿಯೊಡಗೂಡಿ ಪತಿಯನ್ನು ಹತ್ಯೆಗೈದಿರುವುದು ಬಯಲಾಗಿದೆ.



ರಮೇಶ್

**ಸಂಕ್ರಾಂತಿಯಂದೇ ಹತ್ಯೆ:** ಜನ್ನೂರು ಗ್ರಾಮದಲ್ಲಿ ಜ.14ರಂದು ಸಂಕ್ರಾಂತಿ ಸಂಭ್ರಮ. ಈ ವೇಳೆ ಅಂದು ರಾತ್ರಿ ಗೀತಾ ಮನೆಗೆ ಬಂದ ಗುರುಪಾದಸ್ವಾಮಿ ಆಕೆಯ ಸಹಕಾರದೊಂದಿಗೆ ಮೊದಲಿಗೆ ರಮೇಶ್‌ನ ತಲೆ ಮೇಲೆ ಮಚ್ಚಿನ ಹಿಂಬದಿಯಿಂದ ಹಲ್ಲೆ ನಡೆಸಿದ್ದಾನೆ. ಈ ವೇಳೆ ರಮೇಶ್ ಅಸ್ವಸ್ಥನಾದ ನಂತರ ಆತನ ಉಸಿರುಗಟ್ಟಿಸಿ ಹತ್ಯೆಗೈದಿದ್ದಾರೆ.

**ಬೈಕ್‌ನಲ್ಲಿ ಶವ ಸಾಗಾಟ:** ನಂತರ ಚೀಲವೊಂದರಲ್ಲಿ ರಮೇಶ್‌ನ ಶವವನ್ನು ಕಟ್ಟಿದ ಗೀತಾ ಹಾಗೂ ಗುರುಪಾದಸ್ವಾಮಿ ಗ್ರಾಮದಲ್ಲಿ ಜನ ಸಂಚಾರ ಕಡಿಮೆಯಾಗುವವರೆಗೂ ಕಾದಿದ್ದು, ಜ.15ರಂದು ಮುಂಜಾನೆ ನಸುಗತ್ತಲಿನಲ್ಲಿ ಗುರುಪಾದಸ್ವಾಮಿ ತನ್ನ ಬೈಕ್‌ನಲ್ಲಿ ಶವವಿದ್ದ ಚೀಲವನ್ನು ಇಸಿಕೊಂಡು ಸುಮಾರು 20 ಕಿಮೀ ದೂರದ ಕುಪ್ಪೇಗಾಲ ಬಳಿ ಕಬಿನಿ ನದಿಯಲ್ಲಿ ಶವವನ್ನು ಬಿಸಾಡಿ ಬಂದಿದ್ದಾನೆ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

**ನಾಪತ್ತೆ ದೂರು:** ಏನೂ ನಡದೇ ಇಲ್ಲವೆಂಬಂತೆ ಗ್ರಾಮದಲ್ಲಿ ಓಡಾಡಿಕೊಂಡಿದ್ದ ಗೀತಾ ನದಿಯಲ್ಲಿ ಶವ ಕೊಚ್ಚಿಕೊಂಡು ಹೋಗಿರುತ್ತದೆ ಎಂಬ ವಿಶ್ವಾಸದಿಂದ ವಾರದ ನಂತರ ಜ.21ರಂದು ಕುದೇರು ಠಾಣೆಗೆ ಬಂದು ನಾಪತ್ತೆ ದೂರು ದಾಖಲಿಸುತ್ತಾಳೆ. ಅದೇ ವೇಳೆ ರಮೇಶ್‌ನ ಹತ್ಯೆಯ ನಂತರ ಗೀತಾ ಮತ್ತು ಗುರುಪಾದಸ್ವಾಮಿ ಪ್ರತಿದಿನ ಮೊಬೈಲ್ ಮೂಲಕ ಮಾತನಾಡುತ್ತಿದ್ದದ್ದು ಕಾಲ್ ಡೀಟೆಲ್‌ನಲ್ಲಿ ಪತ್ತೆಯಾಗಿದೆ. ಅಲ್ಲದೆ ಇವರಿಬ್ಬರ ಮೊಬೈಲ್‌ಗಳು ಒಂದೇ ಟವರ್‌ನಲ್ಲಿ ಕಾರ್ಯನಿರ್ವಹಿಸಿರುವುದೂ ಕೂಡ ಲೊಕೇಷನ್ ಪರಿಶೀಲನೆ ವೇಳೆ ಪತ್ತೆಯಾಗಿದ್ದು, ಇದರಿಂದಾಗಿ ಇವರಿಬ್ಬರೇ ರಮೇಶ್‌ನನ್ನು ಏನೋ ಮಾಡಿರಬಹುದು ಎಂಬ ಸಂಶಯದಿಂದ ಸಬ್‌ಇನ್ಸ್‌ಪೆಕ್ಟರ್ ಕುಮುದಾ ಅವರು ಜಿಲ್ಲಾ ಎಸ್ಪಿ ಡಾ.ಬಿ.ಟಿ.ಕವಿತಾ, ಅಡಿಷನಲ್ ಎಸ್ಪಿ ಶಶಿಧರ್, ಮಂಡ್ಯ ಡಿವೈಎಸ್ಪಿ ಲಕ್ಷ್ಮಯ್ಯ, ಸಂತೇಮರಹಳ್ಳಿ ಸರ್ಕಲ್ ಇನ್ಸ್‌ಪೆಕ್ಟರ್ ಬಸವರಾಜು ಅವರ ಮಾರ್ಗದರ್ಶನದಲ್ಲಿ ತನಿಖೆ ಮುಂದುವರೆಸಿದಾಗ ಹತ್ಯೆ ಪ್ರಕರಣ ಬಯಲಾಗಿದೆ. ಗೀತಾ ಮತ್ತು ಗುರುಪಾದಸ್ವಾಮಿಯನ್ನು ಬಂಧಿಸಿರುವ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

## ಸರ್ಕಾರಿ ನೌಕರರ ಭವನ ನಿರ್ಮಾಣದ ತೊಡಕು ನಿವಾರಣೆ



ಯಳಂದೂರು ಸರ್ಕಾರಿ ನೌಕರರ ಭವನದಲ್ಲಿ ನಡೆದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.


ಯಳಂದೂರು, ಫೆ.3–ಪಟ್ಟಣದಲ್ಲಿ ಸರ್ಕಾರಿ ನೌಕರರ ಭವನ ನಿರ್ಮಾಣಕ್ಕೆ ಇರುವ ಕೆಲ ತಾಂತ್ರಿಕ ತೊಡಕುಗಳನ್ನು ನಿವಾರಿಸಲಾಗುವುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರಿ ನೌಕರರು ಓಪಿಎಸ್ ಪಿಂಚಣಿಯನ್ನು ಮತ್ತೆ ಜಾರಿಗೆ ತರುವಂತೆ ಮನವಿ ಸಲ್ಲಿಸಿದ್ದಾರೆ. ಇದಕ್ಕೆ ನಾನು ಕೂಡ ಕೈ ಜೋಡಿಸುತ್ತೇನೆ. ಪಟ್ಟಣದಲ್ಲಿ ಸರ್ಕಾರಿ ನೌಕರರ ಭವನ ನಿರ್ಮಾಣಕ್ಕೆ ಇರುವ ಕೆಲ ತಾಂತ್ರಿಕ ತೊಡಕುಗಳನ್ನು ನಿವಾರಿಸಲಾಗುವುದು ಎಂದರು.

ಸರ್ಕಾರಿ ನೌಕರರ ವಸತಿಗೃಹ ನಿರ್ಮಾಣಕ್ಕೂ ಆದ್ಯತೆ ನೀಡಲಾಗುವುದು. ಯಳಂದೂರು ಪಟ್ಟಣ ವ್ಯಾಪ್ತಿಗೆ ಹಲವು ಸರ್ವೆ ಜಮೀನುಗಳನ್ನು ಸೇರಿಸಲು ಕ್ರಮ ವಹಿಸಲಾಗಿದೆ. ಇದರಿಂದ ಪಟ್ಟಣದ ನಿವೇಶನಗಳಿಗೆ ಹೆಚ್ಚು ಬೆಲೆ ಬರಲಿದೆ. 60 ಎಕರೆ ಪ್ರದೇಶದಲ್ಲಿ ಸೋಲಾರ್ ಪ್ಯಾನಲ್ ಅಳವಡಿಕೆಗೆ ಸ್ಥಳ ಬೇಕಿದ್ದು, ಮಲಾರಪಾಳ್ಯ ಗ್ರಾಮದ ಬಳಿ ಈಗಾಗಲೇ 11.20 ಎಕರೆ ಗುರುತಿಸಲಾಗಿದೆ. ಮೆಳ್ಳಹಳ್ಳಿ ಗೇಟ್ ಬಳಿ ಅಗ್ನಿಶಾಮಕ ಠಾಣೆ ನಿರ್ಮಿಸಲು 2 ಎಕರೆ ಜಾಗ ಗುರುತಿಸಲಾಗಿದ್ದು, ಶೀಘ್ರ ಭೂಮಿಪೂಜೆ ನೆರವೇರಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ವೈ.ಎಂ.ಮಂಜುನಾಥ್, ತಾಲೂಕು ಅಧ್ಯಕ್ಷ ಅಮ್ಮನಪುರ ಮಹೇಶ್, ಜಿಲ್ಲಾಧ್ಯಕ್ಷ ಡಾ.ರೇಣುಕಾದೇವಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ತಹಸೀಲ್ದಾರ್ ಜಯಪ್ರಕಾಶ್, ಉಪ ಪ್ರಾಂಶುಪಾಲ ನಂಜುಂಡಯ್ಯ, ಬಿಇಓ ಮಾರಯ್ಯ, ತಾಪಂ ಸಹಾಯಕ ನಿರ್ದೇಶಕ ರವೀಂದ್ರ, ಮುಖ್ಯಾಧಿಕಾರಿ ಎಂ.ಪಿ.ಮಹೇಶ್ ಕುಮಾರ್, ಪಪಂ ನಾಮನಿರ್ದೇಶಿತ ಸದಸ್ಯ ಲಿಂಗರಾಜಮೂರ್ತಿ, ಡಾ.ಶ್ರೀಧರ್ ಸಂಘದ ಗೌರವಾಧ್ಯಕ್ಷ ಯದುಗಿರಿ, ಕಾರ್ಯಾಧ್ಯಕ್ಷ ನದೀಂಷರೀಫ್, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಜಗದೀಶ್, ನಿರ್ದೇಶಕರಾದ ನವೀನ್, ಮಹೇಶ್, ಬಸವರಾಜು, ಧರ್ಮೇಂದ್ರ, ಆರ್.ಕೊಳಂದ ವೇಲು, ಮಾನಸ, ಕೀರ್ತಿಪ್ರಸಾದ್, ನಂದ, ಎಸ್.ಮಹೇಶ್, ಬಸವರಾಜೇಂದ್ರಪ್ರಭು, ಶಶಿಕಲಾ, ಸಂಪಿಗಯ್ಯ, ಮಹದೇವಸ್ವಾಮಿ, ಸೈಯದ್ ಉವೇಸ್ ಅಹಮ್ಮದ್, ಮಮತಾ, ಗಿರೀಶ್, ಪುಟ್ಟಸಿದ್ದಮ್ಮ, ಬಿಸಲಯ್ಯ ಇದ್ದರು.

## ಮಾ.1, 2ರಂದು ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿ



ಸುದ್ದಿಗೋಷ್ಠಿಯಲ್ಲಿ ಕೂಡ್ಲೂರು ಶ್ರೀಧರಮೂರ್ತಿ ಮಾತನಾಡಿದರು.

ಚಾಮರಾಜನಗರ, ಫೆ.3–ಯಳಂದೂರು ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಮಾ.1 ಮತ್ತು 2ರಂದು ರಾಜ್ಯ ಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯನ್ನು ರಾಜ್ಯ ವಿದ್ಯಾವಂತ ನಿರುದ್ಯೋಗಿಗಳ ಸಂಘ ಹಾಗೂ ಯಳಂದೂರು ತಾಲೂಕಿನ ಸಮಾನ ಮನಸ್ಕರ ವೇದಿಕೆಯಿಂದ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೂಡ್ಲೂರು ಶ್ರೀಧರಮೂರ್ತಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ 50 ಸಾವಿರ ರೂ., ದ್ವಿತೀಯ ಬಹುಮಾನ 40 ಸಾವಿರ ರೂ., ತೃತೀಯ ಬಹುಮಾನ 30 ಸಾವಿರ ರೂ. ಹಾಗೂ 4ನೇ ಬಹುಮಾನ 20 ಸಾವಿರ ರೂ. ನೀಡಲಾಗುವುದು. ಪಂದ್ಯಾವಳಿಯಲ್ಲಿ ಭಾಗವಹಿಸುವ ತಂಡಗಳು ಫೆ.20ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ವಿವಿಧ ಜಿಲ್ಲೆಗಳಿಂದ ಆಗಮಿಸುವ ತಂಡದ ಆಟಗಾರರಿಗೆ ವಸತಿ, ಊಟದ ವ್ಯವಸ್ಥೆ ಮಾಡಲಾಗಿದ್ದು, 30 ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ್, ಚಿನ್ನಸ್ವಾಮಿ, ಪಿ.ಚಂದ್ರಶೇಖರ್, ಶ್ರೀನಾಥ್ ಇದ್ದರು.

## ಕಾರು ಡಿಕ್ಕಿ: ದಂಪತಿ ಸ್ಥಳದಲ್ಲೇ ಸಾವು



ಗುಂಡ್ಲುಪೇಟೆ ಹೊರವಲಯದಲ್ಲಿ ಪಾದಚಾರಿಗಳಿಗೆ ಡಿಕ್ಕಿಹೊಡೆದ ವಾಹನ.

ಗುಂಡ್ಲುಪೇಟೆ, ಫೆ.3–ರಸ್ತೆಬದಿ ನಡೆದು ಹೋಗುತ್ತಿದ್ದ ದಂಪತಿಗೆ ಕಾರು ಡಿಕ್ಕಿಹೊಡೆದ ಪರಿಣಾಮ ಇಬ್ಬರೂ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ಪಟ್ಟಣದ ಹೊರವಲಯದಲ್ಲಿ ಸೋಮವಾರ ನಡೆದಿದೆ.

ಪಟ್ಟಣದ ಅಂಬೇಡ್ಕರ್ ಸರ್ಕಲ್ ನಿವಾಸಿಗಳಾದ ವಿಶ್ವನಾಥ್ (60), ಈತನ ಪತ್ನಿ ಭಾಗ್ಯ (48) ಮೃತ ದಂಪತಿ. ಗಂಡ–ಹೆಂಡತಿ ಇಬ್ಬರೂ ಮಧ್ಯಾಹ್ನ ಊಟಿ ರಸ್ತೆ ಸಮೀಪದ ಐಟಿಐ ಕಾಲೇಜಿನ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಅತೀ ವೇಗವಾಗಿ ಬಂದ ಬೊಲೆರೋ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ಸ್ಥಳಕ್ಕೆ ಆಗಮಿಸಿದ ಪೊಲೀಸರು ಮೃತ ದೇಹಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾರನ್ನು ವಶಕ್ಕೆ ಪಡೆಯಲಾಗಿದೆ.

## ಚಾ.ನಗರದಲ್ಲಿ ಕಣ್ಣಿನ ತಪಾಸಣಾ ಶಿಬಿರ



ಚಾಮರಾಜನಗರ ರೋಟರಿ ಭವನದಲ್ಲಿ ಕಣ್ಣಿನ ತಪಾಸಣೆ ನಡೆಯಿತು.

**ಚಾಮರಾಜನಗರ:** ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿರಸ್ತೆಯ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಶಿಬಿರದಲ್ಲಿ 160 ಮಂದಿಗೆ ತಪಾಸಣೆ ನಡೆಸಲಾಯಿತು. 60 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಂಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದೊಗಲು ವ್ಯವಸ್ಥೆ ಮಾಡಲಾಯಿತು. ರೋಟರಿ ಸಂಸ್ಥೆ, ಸಿಲ್ಕ್‌ಸಿಟಿ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.

### ಮೈಸೂರಲ್ಲಿ ಸುಸಜ್ಜಿತ ರೇಷ್ಮೆಗೂಡು ಹರಾಜು ಮಾರುಕಟ್ಟೆ ನಿರ್ಮಾಣ ಸನ್ನಿಹಿತ

# ಮಾರುಕಟ್ಟೆಯ ಸ್ವಂತ ಕಟ್ಟಡಕ್ಕಾಗಿ ಹೊಸಹುಂಡಿ ಗ್ರಾಮದಲ್ಲಿ ಎರಡು ಎಕರೆ ಭೂಮಿ ಕಾಯ್ದಿರಿಸಿದ ಜಿಲ್ಲಾಡಳಿತ


**• ಪ್ರಸ್ತುತ ಎಪಿಎಂಸಿ ಆವರಣದ ಕಟ್ಟಡದಲ್ಲಿ ಬಾಡಿಗೆಯಡಿ ಕಾರ್ಯ ನಿರ್ವಹಿಸುತ್ತಿರುವ ಮಾರುಕಟ್ಟೆ • ಈಗಿರುವ ಮಾರುಕಟ್ಟೆಯಿಂದ ಕಾಯ್ದಿರಿಸಿರುವ ಸ್ಥಳಕ್ಕೆ 2 ಕಿ.ಮೀ. ಅಂತರ**

ಮೈಸೂರು,ಫೆ.3(ಪಿಎಂ)– ಮೈಸೂರಿನಲ್ಲಿ ಸುಸಜ್ಜಿತ ರೇಷ್ಮೆಗೂಡು ಹರಾಜು ಮಾರುಕಟ್ಟೆ ನಿರ್ಮಾಣಕ್ಕಾಗಿ ಕಾಲ ಸನ್ನಿಹಿತವಾಗಿದೆ. ಇದಕ್ಕಾಗಿ ಜಿಲ್ಲಾಡಳಿತದಿಂದ ತಾಲೂಕಿನ ಹೊಸಹುಂಡಿ ಗ್ರಾಮದ ಸ.ನಂ.44ರಲ್ಲಿ ಎರಡು ಎಕರೆ ಭೂಮಿಯನ್ನು ಕಾಯ್ದಿರಿಸಲಾಗಿದೆ. ಆ ಮೂಲಕ ರೇಷ್ಮೆ ಇಲಾಖೆಯು ಸ್ವಂತ ಕಟ್ಟಡದಲ್ಲಿ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆ ವ್ಯವಸ್ಥೆ ಒದಗಿಸಲು ಸಿದ್ಧತೆ ನಡೆಸಿದೆ.

ಮೈಸೂರಿನ ನಂಜನಗೂಡು ರಸ್ತೆಯ ಬಂಡಿಪಾಳ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ಬಾಡಿಗೆ ಆಧಾರದಲ್ಲಿ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದೆ. 2019ರ ಫೆ.24ರಂದು ಆರಂಭಗೊಂಡ ಈ ಮಾರುಕಟ್ಟೆಯಲ್ಲಿ ಇದೀಗ ಹೆಚ್ಚುತ್ತಿರುವ ರೇಷ್ಮೆ ಗೂಡು ಪೂರೈಕೆಯನ್ನು ನಿರ್ವಹಿಸಲು ಕಷ್ಟಸಾಧ್ಯವಾಗುತ್ತಿದೆ.

ಹೀಗಾಗಿ ರೇಷ್ಮೆ ಇಲಾಖೆಯು ಮೈಸೂರಿನಲ್ಲಿ ರೇಷ್ಮೆಗೂಡು ಹರಾಜು ಮಾರುಕಟ್ಟೆಗಾಗಿ ಸುಸಜ್ಜಿತ ಕಟ್ಟಡ ನಿರ್ಮಾಣ ಸಂಬಂಧ 2 ಎಕರೆ ಭೂಮಿ ಅಗತ್ಯವೆಂದು ಪ್ರಸ್ತಾವನೆ ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರಿ ರೇಷ್ಮೆ ಮಾರುಕಟ್ಟೆಯ ಖಾಯಂ ಕಟ್ಟಡ ನಿರ್ಮಾಣಕ್ಕಾಗಿ ಜಿಲ್ಲಾಡಳಿತವು ಭೂಮಿ ಕಾಯ್ದಿರಿಸಿದೆ.

ಮೈಸೂರು ಭಾಗದ ಜಿಲ್ಲೆಗಳಾದ ಚಾಮರಾಜನಗರ, ಮೈಸೂರು, ಮತ್ತು ಮಂಡ್ಯ ಸೇರಿದಂತೆ 18,333 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯ ವಿಸ್ತೀರ್ಣ ಇದ್ದು, 35,458 ರೇಷ್ಮೆ ಬೆಳೆಗಾರರು ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಂತೆಯೇ ಇದಕ್ಕೆ ಪೂರಕವಾಗಿ ನೂರಾರು ರೀಲರುಗಳು ರೀಲಿಂಗ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮೈಸೂರಿನ ಕೇಂದ್ರ ಭಾಗದಲ್ಲಿ (ಎಪಿಎಂಸಿ ಆವರಣದಲ್ಲಿ) ರೇಷ್ಮೆಗೂಡು ಮಾರುಕಟ್ಟೆ ಸೌಲಭ್ಯ ಒದಗಿಸಿರುವುದರಿಂದ ಸುತ್ತಮುತ್ತಲಿನ ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುವುದಲ್ಲದೇ ಹೆಚ್ಚಿನ ರೀಲರುಗಳು ರೇಷ್ಮೆ ಉದ್ಯಮದ ಕಡೆ ಆಕರ್ಷಿತರಾಗುತ್ತಿದ್ದಾರೆ.



ಮೈಸೂರಿನ ಎಪಿಎಂಸಿ ಆವರಣದಲ್ಲಿರುವ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆಯ ಕಟ್ಟಡ

ರೇಷ್ಮೆ ಇಲಾಖೆಯು 7 ವರ್ಷಗಳ ಹಿಂದೆ ಸ್ಥಾಪಿಸಿದ ರೇಷ್ಮೆಗೂಡು ಮಾರುಕಟ್ಟೆಯು ಎಪಿಎಂಸಿ ಯಾರ್ಡ್‌ನಲ್ಲಿ 80X37 ಅಡಿ ವಿಸ್ತೀರ್ಣದ ಕಟ್ಟಡದಲ್ಲಿ ಬಾಡಿಗೆಯಡಿ ಕಾರ್ಯನಿರ್ವಹಿಸುತ್ತಿದೆ. ಇದು ಜನದಟ್ಟಣೆಯಿಂದ ಕೂಡಿದೆ. ಪ್ರಸ್ತುತ ಇಲ್ಲಿ ದಿನಕ್ಕೆ ಕೇವಲ 3 ಟನ್ ರೇಷ್ಮೆ ಗೂಡುಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿದೆ. ಕಳೆದ ಕೆಲವು ವರ್ಷಗಳಿಂದ ಸರ್ಕಾರ ಕೈಗೊಂಡ ಉತ್ತೇಜಕ ಕ್ರಮಗಳಿಂದ ರೇಷ್ಮೆ ಕೃಷಿಯ ಪ್ರದೇಶ ಮತ್ತು ಬೆಳೆಗಾರರ ಸಂಖ್ಯೆ ಹೆಚ್ಚಾದಂತೆ, ಸದರಿ ಮಾರುಕಟ್ಟೆಗೆ ರೇಷ್ಮೆಗೂಡುಗಳ ಪೂರೈಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.



ಮೈಸೂರು ತಾಲೂಕಿನ ಹೊಸಹುಂಡಿ ಗ್ರಾಮದ ಸ.ನಂ.44ರಲ್ಲಿ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾಡಳಿತ ಕಾಯ್ದಿರಿಸಿರುವ ಭೂಮಿ.

2018–19ರಲ್ಲಿ ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿರುವ ರೇಷ್ಮೆ ಇಲಾಖೆಯ ರೇಷ್ಮೆಗೂಡು ಮಾರುಕಟ್ಟೆಯಲ್ಲಿ 21.2 ಟನ್ ರೇಷ್ಮೆಗೂಡು ವಹಿವಾಟು ನಡೆದಿದೆ. ಅಂತೆಯೇ 2019–20ರಲ್ಲಿ 113.2 ಟನ್, 2020–21ರಲ್ಲಿ 144.3 ಟನ್, 2021–22ರಲ್ಲಿ 156 ಟನ್, 2022–23ರಲ್ಲಿ 265.2 ಟನ್ ಮತ್ತು 2023–24ರಲ್ಲಿ ಡಿಸೆಂಬರ್ ಅಂತ್ಯದವರೆಗೆ 358.6 ಟನ್ ರೇಷ್ಮೆಗೂಡನ್ನು ರೀಲರ್‌ಗಳು ರೇಷ್ಮೆ ಬೆಳೆಗಾರರಿಂದ ಖರೀದಿ ಮಾಡಿದ್ದಾರೆ.

ಹಾಲಿ ಮಾರುಕಟ್ಟೆಗೆ ಗೂಡಿನೊಂದಿಗೆ ಬರುವವರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದ್ದು, ಅದಕ್ಕೆ ಪೂರಕವಾಗಿ ಸೌಲಭ್ಯ ಕಲ್ಪಿಸಲು ರೇಷ್ಮೆ ಇಲಾಖೆಗೆ ಸಾಧ್ಯವಾಗದ ಸನ್ನಿವೇಶ ನಿರ್ಮಾಣವಾಗಿದೆ. ಹೀಗಾಗಿ ರೇಷ್ಮೆ ಇಲಾಖೆಯು ಸುಸಜ್ಜಿತ ಸ್ವಂತ ಕಟ್ಟಡ ನಿರ್ಮಿಸಿ, ಮಾರುಕಟ್ಟೆ ಸೌಲಭ್ಯ ಒದಗಿಸಲು 2 ಎಕರೆ ಭೂಮಿ ಒದಗಿಸುವಂತೆ ಜಿಲ್ಲಾಡಳಿತಕ್ಕೆ ಪತ್ರ ಬರೆದಿತ್ತು.

ಮೈಸೂರು, ಚಾಮರಾಜನಗರ ಮತ್ತು ನೆರೆಯ ಮಂಡ್ಯ ಜಿಲ್ಲೆಯ ರೇಷ್ಮೆ ಬೆಳೆಗಾರರು ಗೂಡು ಮಾರಾಟಕ್ಕಾಗಿ ದೂರದ ಮಳವಳ್ಳಿ, ರಾಮನಗರ, ಶಿಡ್ಲಘಟ್ಟ ಮತ್ತು ಚನ್ನಪಟ್ಟಣಕ್ಕೆ ಪ್ರಯಾಣಿಸಬೇಕಿದ್ದ ಹಿನ್ನೆಲೆಯಲ್ಲಿ ರೇಷ್ಮೆ ಗೂಡಿಗೆ ಸ್ಥಳೀಯವಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಮೈಸೂರು ಎಪಿಎಂಸಿ ಆವರಣದ ಬಾಡಿಗೆ ಕಟ್ಟಡದಲ್ಲಿ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆ ಆರಂಭಿಸಲಾಗಿತ್ತು. 86 ಎಕರೆಗಳಷ್ಟು ವಿಸ್ತಾರವಾಗಿರುವ ಬಂಡಿಪಾಳ್ಯ ಎಪಿಎಂಸಿ ಯನ್ನು ರೈತರು ಹಾಗೂ ವ್ಯಾಪಾರಿಗಳು ಪೂರ್ಣ ಪ್ರಮಾಣದಲ್ಲಿ ಬಳಸಿ ಕೊಳ್ಳುತ್ತಿದ್ದಾರೆ. ಈ ಪೈಕಿ ಮೂರು ಎಕರೆ ಪ್ರದೇಶವನ್ನು ತೆಂಗಿನ ಕಾಯಿ ಹರಾಜು, ಶೀಥಲೀಕರಣ ಘಟಕಗಳು ಹಾಗೂ ಘನತ್ಯಾಜ್ಯ ವಿಲೇವಾರಿ ಘಟಕದ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದು, ಇತರ ಚಟುವಟಿಕೆಗಳ ವಿಸ್ತರಣೆಗೆ ಎಪಿಎಂಸಿಯಲ್ಲಿ ಈಗ ಸ್ಥಳಾವಕಾಶವಿಲ್ಲವಾಗಿದೆ.

> ರೇಷ್ಮೆ ಬೆಳೆಗಾರರ ಸಂಖ್ಯೆ ಹೆಚ್ಚಾದಂತೆ ಎಪಿಎಂಸಿಯಲ್ಲಿ ಈಗಿರುವ ಮಾರುಕಟ್ಟೆಯಲ್ಲಿ ರೇಷ್ಮೆಗೂಡು ವಹಿವಾಟು ದಿನೇ ದಿನೆ ಹೆಚ್ಚಳವಾಗಿದೆ. ಸದರಿ ಮಾರುಕಟ್ಟೆಯಲ್ಲಿ 2 ಸಾವಿರ ಕೆಜಿ ಗೂಡನ್ನು ಮಾತ್ರ ಇಟ್ಟುಕೊಳ್ಳಲು ಸ್ಥಳಾವಕಾಶವಿದೆ. ಹೆಚ್ಚೆಂದರೆ 3 ಸಾವಿರ ಕೆಜಿವರೆಗೆ ಅವಕಾಶ ಮಾಡಿಕೊಡಬಹುದು. ಇದರ ಮೇಲೆ ಸ್ಥಳಾವಕಾಶ ಅಸಾಧ್ಯ. ಪ್ರತಿದಿನ ಗೂಡಿನ ಆವಕ ಹೆಚ್ಚಾಗುತ್ತಿದೆ. ಹೀಗಾಗಿ ರೈತರು ಸುಸಜ್ಜಿತ ಮಾರುಕಟ್ಟೆ ನಿರ್ಮಿಸಲು ಮನವಿ ಮಾಡಿದ್ದು, ಅದರಂತೆ ಈಗ ಭೂಮಿ ನಿಗದಿಗೊಳಿಸಲಾಗಿದೆ. ಖಾಯಂ ಆಗಿ ಸ್ವಂತ ಕಟ್ಟಡ ನಿರ್ಮಾಣಗೊಳ್ಳುವರೆಗೆ ಹಾಲಿ ಇರುವ ಎಪಿಎಂಸಿ ಕಟ್ಟಡದಲ್ಲಿ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ ಕಾರ್ಯನಿರ್ವಹಣೆ ಮುಂದುವರೆಯಲಿದೆ.
> –ರಾಚಪ್ಪ, ಉಪನಿರ್ದೇಶಕರು, ರೇಷ್ಮೆ ಇಲಾಖೆ, ಮೈಸೂರು.

## ಮಾರುಕಟ್ಟೆ ಕಟ್ಟಡ ನಿರ್ಮಾಣಕ್ಕೆ ರಾಜ್ಯ ಬಜೆಟ್‌ನಲ್ಲಿ ಅನುದಾನದ ನಿರೀಕ್ಷೆ


ಮೈಸೂರು,ಫೆ.3(ಪಿಎಂ)– ಮಾರುಕಟ್ಟೆಯ ಸುಸಜ್ಜಿತ ಕಟ್ಟಡ ನಿರ್ಮಾಣ ಮತ್ತು ಅಗತ್ಯ ಮೂಲಸೌಲಭ್ಯ, ಸಲಕರಣೆಗಾಗಿ ಮುಂಬರುವ ರಾಜ್ಯ ಬಜೆಟ್‌ನಲ್ಲಿ 15 ಕೋಟಿ ರೂ. ಅನುದಾನ ಮಂಜೂರಾಗುವ ನಿರೀಕ್ಷೆ ಇದೆ ಎಂದು ರೇಷ್ಮೆ ಇಲಾಖೆ ಉಪನಿರ್ದೇಶಕ ರಾಚಪ್ಪ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಈಗಾಗಲೇ ಈ ಸಂಬಂಧ ರೇಷ್ಮೆ ಇಲಾಖೆ ಪ್ರಧಾನ ಕಚೇರಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದಕ್ಕೂ ಪೂರ್ವದಲ್ಲಿ ಕೆಂಪಯ್ಯನಹುಂಡಿ ಗ್ರಾಮದ ರೈತರು ಮೈಸೂರಿನಲ್ಲೇ ಸುಸಜ್ಜಿತ ರೇಷ್ಮೆ ಮಾರುಕಟ್ಟೆ ನಿರ್ಮಿಸಿಕೊಡಲು ಕ್ರಮ ವಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಕಚೇರಿಯಿಂದ ನಮ್ಮ ಇಲಾಖೆಗೂ ಅಗತ್ಯ ಕ್ರಮ ವಹಿಸಲು ನಿರ್ದೇಶನ ಬಂದಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ರೇಷ್ಮ ಸಚಿವ ಕೆ.ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ಆಸಕ್ತಿಯಿಂದ ಶೀಘ್ರಗತಿಯಲ್ಲಿ ಭೂಮಿ ಲಭಿಸಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಪಂ ಸಿಇಓ, ರೇಷ್ಮೆ ಇಲಾಖೆ ಕಾರ್ಯದರ್ಶಿಗಳು, ಆಯುಕ್ತರು ತ್ವರಿತವಾಗಿ ಸೂಕ್ತ ಕ್ರಮ ವಹಿಸಿದ್ದರು. ಅಂತಿಮವಾಗಿ ರೇಷ್ಮೆಗೂಡು ಹರಾಜು ಮಾರುಕಟ್ಟೆ ನಿರ್ಮಿಸಲು ಜಿಲ್ಲಾಡಳಿತದಿಂದ ರೇಷ್ಮೆ ಇಲಾಖೆಗೆ ಹೊಸಹುಂಡಿ ಗ್ರಾಮದಲ್ಲಿ ಭೂಮಿ ದೊರೆತಿದೆ. ಎಪಿಎಂಸಿಯಲ್ಲಿರುವ ಪ್ರಸ್ತುತದ ಮಾರುಕಟ್ಟೆಯಿಂದ ಮಂಜೂರಾಗಿರುವ ಭೂಮಿಗೆ ಸುಮಾರು 2 ಕಿ.ಮೀ. ಅಂತರ ಆಗಲಿದೆ ಎಂದು ಅವರು ವಿವರಿಸಿದರು.

## 1.48 ಲಕ್ಷ ದಾಖಲೆ ಮೊತ್ತಕ್ಕೆ ಮಾರಾಟವಾದ ಬಂಡೂರು ಟಗರು!

ಮಂಡ್ಯ, ಫೆ.3– ಕೇವಲ 8 ತಿಂಗಳ ಬಂಡೂರು ತಳಿಯ ಟಗರು ಬರೋಬ್ಬರಿ 1.48 ಲಕ್ಷ ರೂ.ಗೆ ಮಾರಾಟವಾಗುವ ಮೂಲಕ ದಾಖಲೆಯ ಜೊತೆಗೆ ರೈತರಲ್ಲಿ ಅಚ್ಚರಿಯನ್ನು ಮೂಡಿಸಿದೆ.



ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದ ಉಲ್ಲಾಸ್ ಗೌಡ ಎಂಬುವವರಿಗೆ ಸೇರಿದ ಬಂಡೂರು ತಳಿ ಟಗರು ಇದೀಗ ದಾಖಲೆ ಮೊತ್ತಕ್ಕೆ ಮಾರಾಟವಾಗಿದೆ. 8 ತಿಂಗಳ ಹಿಂದೆ ಉಲ್ಲಾಸ್ ಮನೆಯಲ್ಲಿಯೇ ಈ ಬಂಡೂರು ಟಗರು ಜನಿಸಿತ್ತು. ಬಳಿಕ ಕೆಲ ದಿನದಲ್ಲೇ ಟಿ.ನರಸೀಪುರದ ಮೂಲದವರಿಗೆ 20 ಸಾವಿರ ರೂ.ಗೆ ಟಗರನ್ನು ಮಾರಾಟ ಮಾಡಲಾಗಿತ್ತು.

ಮಾರಾಟ ಮಾಡಿದ ಬಳಿಕ ಮತ್ತೆ ಆ ಟಗರನ್ನು 50 ಸಾವಿರ ರೂ.ಗೆ ಉಲ್ಲಾಸ್ ಹಾಗೂ ಅವರ ತಂದೆ ಮನೋಹರ್ ಖರೀದಿ ಮಾಡಿದ್ದರು. ಇದೀಗ ಶಿವಮೊಗ್ಗ ಮೂಲದ ಉದ್ಯಮಿ ಜವಾದ್‌ಗೆ ಅದೇ ಬಂಡೂರು ಟಗರನ್ನು ಬರೋಬ್ಬರಿ 1.48 ಲಕ್ಷ ರೂ.ಗೆ ಮಾರಾಟ ಮಾಡಲಾಗಿದೆ.

ಮಾರಾಟವಾದ ಈ ಬಂಡೂರು ಟಗರಿಗೆ ವಿಶೇಷ ಪೂಜೆ ಸಲ್ಲಿಸಿ ಹಸ್ತಾಂತರ ಮಾಡಲಾಯಿತು. ಇದೇ ವೇಳೆ ಉಲ್ಲಾಸ್ ತಂದೆ ಮನೋಹರ್‌ಗೆ ಸನ್ಮಾನ ಮಾಡಿ, 148 ಲಕ್ಷರೂ. ಹಣ ನೀಡಿ ಜವಾದ್ ಟಗರನ್ನು ಕೊಂಡೊಯ್ದಿದಿದ್ದಾರೆ. ಮಾಂಸದ ದೃಷ್ಟಿಗಿಂತ ಹೆಚ್ಚಾಗಿ ಬಂಡೂರು ತಳಿ ಅಭಿವೃದ್ಧಿಗಾಗಿ ಈ ಟಗರು ದಾಖಲೆ ಬೆಲೆಗೆ ಖರೀದಿ ಮಾಡಲಾಗಿದೆ.

## ಕುಂಭಮೇಳದಲ್ಲಿ ಸುತ್ತೂರು ಶ್ರೀಗಳು ಮತ್ತು ವಚನಾನಂದ ಸ್ವಾಮೀಜಿಗಳಿಂದ ಪುಣ್ಯಸ್ನಾನ



**ಪ್ರಯಾಗ್‌ರಾಜ್:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭ ಮೇಳ ಯಾವುದೇ ಅಡತಡೆಯಿಲ್ಲದೆ ಮುಂದುವರಿದಿದೆ. ಭಕ್ತಾದಿಗಳು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಆಗಮಿಸಿ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡುತ್ತಿದ್ದಾರೆ. ಸೋಮವಾರ ವಸಂತ ಪಂಚಮಿ ಹಿನ್ನೆಲೆಯಲ್ಲಿ ಸುತ್ತೂರು ಮಠದ ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ದಾವಣಗೆರೆ ಜಿಲ್ಲೆಯ ಹರಿಹರದಲ್ಲಿರುವ ಪಂಚಮಸಾಲಿ ಪೀಠದ ಜಗದ್ಗುರು ವಚಾನಾನಂದ ಸ್ವಾಮೀಜಿಯವರು ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡಿದರು.

## ನಾಳೆ 'ಅರಳಿ'ರಂಗ ತಂಡದ ಉದ್ಘಾಟನೆ; 'ಊರುವಿ' ನಾಟಕ ಪ್ರದರ್ಶನ

ಮೈಸೂರು,ಫೆ3(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಫೆ.5ರಂದು ಸಂಜೆ 6.30ಕ್ಕೆ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ 'ಅರಳಿ' ರಂಗತಂಡದ ಉದ್ಘಾಟನೆ ಹಾಗೂ ಮಹಾಭಾರತದ ಕರ್ಣನ ಕುರಿತಾದ ಪೌರಾಣಿಕ ನಾಟಕ 'ಊರುವಿ' ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 7 ಮಂದಿ ಹವ್ಯಾಸಿ ಕಲಾವಿದರು ಸೇರಿ ರಚಿಸಿಕೊಂಡು 'ಅರಳಿ' ರಂಗ ತಂಡವನ್ನು ರಚಿಸಿಕೊಂಡಿದ್ದು, ಆ ತಂಡಕ್ಕೆ ಹಿರಿಯ ರಂಗಕರ್ಮಿಗಳು ಬೆಂಬಲದೊಂದಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಮೈಸೂರು ಭಾಗದಲ್ಲಿ ನಾಟಕ ಕ್ಷೇತ್ರಕ್ಕೆ ಉತ್ತಮ ಬೆಂಬಲ ನೀಡುತ್ತಿದ್ದು, ಈಗಾಗಲೇ ಹಲವು ರಂಗತಂಡಗಳು ನಾಟಕ ಪ್ರದರ್ಶನ ಆಯೋಜಿಸುತ್ತಾ ಬಂದಿವೆ. ಇದೀಗ ಅರಳಿ ತಂಡ ಭೂಮಿಕೆ ಬಂದಿದ್ದು, ಅದನ್ನು ಫೆ.5ರಂದು ಸಂಜೆ 6.30ಕ್ಕೆ ಮಾಜಿ ಸಚಿವೆ ಡಾ.ಬಿ.ಟಿ.ಲಲಿತಾ ನಾಯಕ್ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ರಂಗಕರ್ಮಿಗಳಾದ ಡಾ.ಆರ್.ಸಂತೋಷ್, ಆರ್.ಗೀತಾ ಮೋಂಟಡ್ಕ, ಡಾ.ಸಿ. ರವೀಂದ್ರನಾಥ್, ಮಲ್ಲಿಕಾರ್ಜುನ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸಭಾ ಕಾರ್ಯಕ್ರಮದ ನಂತರ ಅರಳಿ ರಂಗತಂಡದ ಮೊದಲ ನಾಟಕ, ಡಾ.ಸಿ. ರವೀಂದ್ರನಾಥ್ ಅವರು ರಚಿಸಿರುವ 'ಊರುವಿ' ನಾಟಕ ಪ್ರದರ್ಶನಗೊಳ್ಳಲಿದೆ. ಊರವಿ ನಾಟಕ ಮಹಾಭಾರತದ ದುರಂತ ನಾಯಕ ಕರ್ಣನ ವೈಯಕ್ತಿಕ ಜೀವನದ ಕಥಾಹಂದರ ಹೊಂದಿರುವ ಪೌರಾಣಿಕ ನಾಟಕವಾಗಿದೆ. ಕರ್ಣನ ಹೆಂಡತಿಯರ ಹೆಸರು ಮತ್ತು ಅವರ ಸುತ್ತ ಕಥೆ ಹೆಣೆದು ಪರದೆ ಮೇಲೆ ಬಿಂಬಿಸಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರಂಗಾಯಣದ ಹಿರಿಯ ಕಲಾವಿದೆ ಗೀತಾ ಮೋಂಟಡ್ಕ, ಅರಳಿ ತಂಡದ ಗೌತಮ್, ಬಿ. ರಮ್ಯ ಶೇಖರ್, ಪಾವನ ಧನರಾಜ್ ಇದ್ದರು.

## ಮೈಸೂರು ರಿಂಗ್ ರಸ್ತೆಯಲ್ಲಿ ಗಾಂಜಾ ಮಾರಾಟ ಯತ್ನ: ಮೂವರ ಬಂಧನ

ಮೈಸೂರು, ಫೆ.3(ಎಸ್‌ಬಿಡಿ)– ಮೈಸೂರಿನ ರಿಂಗ್ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರನ್ನು ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಹಿನಕಲ್ ಫ್ಲೈಓವರ್‌ನಿಂದ ಬೋಗಾದಿ ಕಡೆಗೆ ಹೋಗುವ ರಿಂಗ್ ರಸ್ತೆಯಲ್ಲಿ ಸಿಸಿಬಿ ಪೊಲೀಸರು ಗಸ್ತಿನಲ್ಲಿದ್ದಾಗ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಮೂವರನ್ನು ಬಂಧಿಸಿ, ಅವರ ಬಳಿ ಇದ್ದ 1 ಕೆಜಿ 110 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೊಡಗಲ್ಲಿ ಫೆ.7ರಿಂದ ಮೂರು ದಿನ ರಾಜ್ಯಮಟ್ಟದ ಪ್ಲಾಸ್ಟಿಕ್ ಸರ್ಜರಿ ಸಮಾವೇಶ

ಮೈಸೂರು,ಫೆ3(ಎಂಟಿವೈ)– ಕೊಡಗು ಜಿಲ್ಲೆಯ ವಿರಾಜಪೇಟೆಯ ಮಹೀಂದ್ರ ಕ್ಲಬ್‌ನಲ್ಲಿ ಫೆ.7ರಿಂದ 9ರವರೆಗೆ ರಾಜ್ಯ ಮಟ್ಟದ ಪ್ಲಾಸ್ಟಿಕ್ ಸರ್ಜರಿ ಸಮಾವೇಶ ಆಯೋಜಿಸಲಾಗಿದೆ ಎಂದು ಅಪೊಲೊ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿ ತಜ್ಞ ಡಾ.ಹೆಚ್.ವಿ.ಸತೀಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ಲಾಸ್ಟಿಕ್ ಸರ್ಜರಿ ಕುರಿತಂತೆ ಆಗಿರುವ ಹೊಸ ಆವಿಷ್ಕಾರ, ಚಿಕಿತ್ಸಾ ಪದ್ಧತಿಯಲ್ಲಿ ಆಗಿರುವ ಬದಲಾವಣೆ, ತಂತ್ರಜ್ಞಾನ ಬಳಕೆ ಸೇರಿದಂತೆ ಮಹತ್ತರ ವಿಷಯಗಳ ಬಗ್ಗೆ ಚರ್ಚಿಸಲು ರಾಜ್ಯಮಟ್ಟದ ಪ್ಲಾಸ್ಟಿಕ್ ಸರ್ಜರಿ ಸಮಾವೇಶ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ 160ಕ್ಕೂ ಹೆಚ್ಚು ಪ್ಲಾಸ್ಟಿಕ್ ಸರ್ಜನ್‌ಗಳು ಭಾಗವಹಿಸಲಿದ್ದಾರೆ. ಫೆ.7ರಂದು ಮಧ್ಯಾಹ್ನ 2.30ಕ್ಕೆ ಸಮಾವೇಶ ಉದ್ಘಾಟನೆಗೊಳ್ಳಲಿದೆ. ಇದರಲ್ಲಿ ಖ್ಯಾತ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ತಜ್ಞರು ಮಾಹಿತಿ ಹಂಚಿಕೊಳ್ಳಲಿದ್ದಾರೆ ಎಂದರು.

ಸೌಂದರ್ಯವರ್ಧಕ ಶಸ್ತ್ರಚಿಕಿತ್ಸೆ, ಕ್ಯಾನ್ಸರ್ ಶಸ್ತ್ರ ಚಿಕಿತ್ಸೆ ನಂತರ ಪುನರ್ ನಿರ್ಮಾಣ, ಜನ್ಮ ದೋಷಗಳಿಗೆ ಶಸ್ತ್ರ ಚಿಕಿತ್ಸೆ ಸಂಕೀರ್ಣ ಅಂಗ ಗಾಯಗಳು, ನರಗಳ ಗಾಯದ ಚಿಕಿತ್ಸೆ, ಮೈಕ್ರೋ ವಾಸ್ಕ್ಯುಲರ್ ಶಸ್ತ್ರ ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ಲಾಸ್ಟಿಕ್ ಸರ್ಜನ್‌ಗಳಾದ ಡಾ.ಎಸ್. ಚೈತ್ರಾ, ಡಾ. ಅಮನ್ ನಾಯಕ್ ಇದ್ದರು.

### ಹುಟ್ಟುಹಬ್ಬದ ಶುಭಾಶಯ...



ಮೈಸೂರು ಎಪಿಎಂಸಿ ಮಾಜಿ ನಿರ್ದೇಶಕರು ಹಾಗೂ ಚಾಮುಂಡೇಶ್ವರಿ ಕ್ಷೇತ್ರ ಶಾಸಕ ಜಿ.ಟಿ.ದೇವೇಗೌಡರ ಆಪ್ತರಾದ ಕೋಟೆಹುಂಡಿ ಮಹದೇವು ಅವರ 44ನೇ ವರ್ಷದ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಗಳ ಮೂಲಕ ಅಭಿಮಾನಿಗಳು ಮತ್ತು ಸ್ನೇಹಿತರು ಆಚರಿಸಿದರು. ಈ ವೇಳೆ ಟಿ.ಕೆ ಲೇಔಟ್ ರಾಜು, ಮಾಜಿ ಕಾರ್ಪೋರೇಟರ್ ಗೋಪಿ, ಕೋಟೆಹುಂಡಿ ಗ್ರಾಮಸ್ಥರು, ಧನಗಹಳ್ಳಿ, ದೊಡ್ಡಮಾರಗೌಡನಹಳ್ಳಿ, ಗೋಪಾಲಪುರ ಮತ್ತು ಜಯಪುರ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಸದಸ್ಯರು, ಮುಖಂಡರು ಹುಟ್ಟುಹಬ್ಬದ ಶುಭಕೋರಿದರು.

## ಡಿವೈಡರ್‌ಗೆ ಬೈಕ್ ಡಿಕ್ಕಿ; ಸವಾರ ದುರ್ಮರಣ

ಮೈಸೂರು, ಫೆ3(ಎಸ್‌ಬಿಡಿ)– ಡಿವೈಡರ್‌ಗೆ ಡಿಕ್ಕಿ ಹೊಡೆದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಮೈಸೂರು–ಹುಣಸೂರು ಮುಖ್ಯರಸ್ತೆಯಲ್ಲಿ ಶನಿವಾರ ಸಂಭವಿಸಿದೆ.

ಬೆಂಗಳೂರಿನಲ್ಲಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವ ಪಶ್ಚಿಮ ಬಂಗಾಳದ ಆನಂದನಗರ ನಿವಾಸಿ ಸೋಮನಾಥ ಮಜುಂದಾರ್(34) ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ತಮ್ಮ ರಾಯಲ್ ಎನ್‌ಫೀಲ್ಡ್(ಎಂಹೆಚ್–05, ಎಫ್‌ಎಫ್–9875) ಬೈಕ್‌ನಲ್ಲಿ ಪ್ರವಾಸಕ್ಕೆ ಬಂದಿದ್ದ ಅವರು, ಮೈಸೂರಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಕೊಡಗಿಗೆ ತೆರಳುವಾಗ ದುರಂತ ಸಂಭವಿಸಿದೆ.

ಇಲವಾಲದ ಭಾರತ್ ಪೆಟ್ರೋಲ್ ಬಂಕ್ ಬಳಿ ತಿರುವಿನಲ್ಲಿ ಬೈಕ್ ಡಿವೈಡರ್‌ಗೆ ಡಿಕ್ಕಿ ಹೊಡೆದು ನೆಲಕ್ಕುರುಳಿದ್ದರಿಂದ ಸೋಮನಾಥ ಮಜುಂದಾರ್ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ಕೂಡಲೇ ಅವರನ್ನು ಆಂಬುಲೆನ್ಸ್‌ನಲ್ಲಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಬೈಕ್ ಮುಂಭಾಗದಲ್ಲಿ ಮೊಬೈಲ್ ಇಟ್ಟು, ಗೂಗಲ್ ಮ್ಯಾಪ್ ನೋಡಿಕೊಂಡು ಚಾಲನೆ ಮಾಡುವಾಗ ತಿರುವಿನಲ್ಲಿ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

## ಸಿಂಧುವಳ್ಳಿ–ದಡದಹಳ್ಳಿ ಕೆರೆಗೆ ಕಲುಷಿತ ನೀರು ಸೇರ್ಪಡೆ

### ಕೆರೆ ಪುನಶ್ಚೇತನಕ್ಕೆ ರೈತ ಮುಖಂಡರ ಆಗ್ರಹ

ಮೈಸೂರು,ಫೆ.3(ಎಂಟಿವೈ)– ಮೈಸೂರು ತಾಲೂಕಿನ ಜಯಪುರ ಹೋಬಳಿಯ ಸಿಂಧುವಳ್ಳಿ– ದಡದಹಳ್ಳಿ ಕೆರೆಗೆ ಕಲುಷಿತ ನೀರು ಸೇರುತ್ತಿದ್ದು, ಕೆರೆ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ರೈತ ಪರ್ವದ ಪ್ರಧಾನ ಕಾರ್ಯದರ್ಶಿ ಡಾ. ಉಮಾಪತಿ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಂಧುವಳ್ಳಿ–ದಡದಹಳ್ಳಿ ಕೆರೆ ಈ ಹಿಂದೆ ಹತ್ತಾರು ಗ್ರಾಮಗಳಿಗೆ ಜೀವ ಜಲ ನೀಡುತ್ತಿತ್ತು. ಆದರೆ, ಈ ಕೆರೆಗೆ ಕಳಲವಾಡಿಗೆ ಸೇರಿದ ರಾಯನಕೆರೆಯಲ್ಲಿ ಸಂಗ್ರಹವಾದ ಕಲುಷಿತ ನೀರು, ಗ್ರಾಮಗಳ ಚರಂಡಿ, ಕಾರ್ಖಾನೆ ತ್ಯಾಜ್ಯ ನೀರು ನಿರಂತರವಾಗಿ ಹರಿದು ಬರುತ್ತಿದೆ. ಇದರಿಂದಾಗಿ ಕೆರೆ ಮಲೀನಗೊಂಡಿರುವುದಲ್ಲದೆ ಈ ಭಾಗದ ಜನರಲ್ಲಿ ಅನಾರೋಗ್ಯ ಭೀತಿ ಕಾಡುತ್ತಿದೆ. ಈ ಹಿಂದೆ ಈ ಕೆರೆಯ ಸಂಪೂರ್ಣ ನಿರ್ವಹಣೆ ಮತ್ತು ಅಭಿವೃದ್ಧಿ ಸಣ್ಣ ನೀರಾವರಿ ಇಲಾಖೆ ಮೇಲ್ವಿಚಾರಣೆಯಲ್ಲಿತ್ತು. ಆದರೆ ಜಲ ಸಂವರ್ಧನ ಯೋಜನೆ ಜಾರಿಗೆ ತಂದ ಬಳಿಕ ಕೆರೆ ಪರಿಸ್ಥಿತಿ ಹದಗೆಟ್ಟಿದೆ ಎಂದು ಆರೋಪಿಸಿದರು.

ಕೆರೆ ಸಂರಕ್ಷಣೆಗೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ಕೆರೆ ಒತ್ತುವರಿ ತೆರವುಗೊಳಿಸಬೇಕು. ಕಲುಷಿತ ನೀರು ಕೆರೆಗೆ ಬರುವುದನ್ನು ತಡೆಯಬೇಕು. ಕಾರ್ಖಾನೆಗಳು ವಿಷಯುಕ್ತ ನೀರನ್ನು ಈ ಕೆರೆಗೆ ಹರಿಸುವುದನ್ನು ತಡೆಯಬೇಕು. ಈಗ ಕೆರೆಯಲ್ಲಿರುವ ಮಲಿನ ನೀರು ತೆರವುಗೊಳಿಸಬೇಕು. ಕೆರೆಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬೇಕು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸ್ಥಳೀಯ ಮುಖಂಡರಾದ ಕೃಷ್ಣಯ್ಯ, ನಂಜುಂಡ, ನವೀನ್ ಕುಮಾರ್, ಶಿವಯ್ಯ ಬ್ಯಾತಹಳ್ಳಿ ಇದ್ದರು.


### ಬೆಂಗಳೂರಿಗೆ 2ನೇ ವಿಮಾನ ನಿಲ್ದಾಣ

# ಹೆಚ್.ಡಿ.ದೇವೇಗೌಡರ ಮನವಿಗೆ ಕೇಂದ್ರದಿಂದ ಸಕಾರಾತ್ಮಕ ಸ್ಪಂದನೆ

## ಹೊಸೂರಿನಲ್ಲಿ ವಿಮಾನ ನಿಲ್ದಾಣಕ್ಕೆ ತಮಿಳುನಾಡು ಆಗ್ರಹ

ನವದೆಹಲಿ, ಫೆ.3– ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನಕ್ಕೆ ಬೆಂಗಳೂರು ನಗರ ಜಾಗತಿಕ ಹಬ್ ಆಗಿದ್ದು, ಸುಲಭ ಸಂಪರ್ಕಕ್ಕೆ ಮತ್ತೊಂದು ವಿಮಾನ ನಿಲ್ದಾಣ ನಗರಕ್ಕೆ ಅಗತ್ಯವಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಪ್ರತಿಪಾದಿಸಿದರು.

ರಾಜ್ಯಸಭೆಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸರ್ಕಾರ ಈಗಾಗಲೇ ಮತ್ತೊಂದು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ನಾಗರಿಕ ವಿಮಾನಯಾನ ಸಚಿವರನ್ನು ಸಂಪರ್ಕಿಸಿ ಈ ಬಗ್ಗೆ ಚರ್ಚೆ ನಡೆಸಿದೆ. ಬೆಂಗಳೂರು ನಗರಕ್ಕೆ, ಅದರಲ್ಲಿಯೂ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಮತ್ತೊಂದು ವಿಮಾನ ನಿಲ್ದಾಣದ ಅಗತ್ಯವಿದೆ ಎಂದು ಒತ್ತಿ ಹೇಳಿದರು.



ಈ ನಿಟ್ಟಿನಲ್ಲಿ ಕೇಂದ್ರವು ಕರ್ನಾಟಕದಲ್ಲಿ ಮತ್ತೊಂದು ವಿಮಾನ ನಿಲ್ದಾಣವನ್ನು ನಿರ್ಮಿಸುವ ಬಗ್ಗೆ ಗಮನ ಹರಿಸಬೇಕು. ನಾನು ಮಂಜೂರು ಮಾಡಿದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಈಗ ಪ್ರಯಾಣಿಕರ ದಟ್ಟಣೆಯಿಂದ ವಿಪರೀತ ಒತ್ತಡ ಎದುರಿಸುತ್ತಿದೆ. ಹೀಗಾಗಿ ಬೆಂಗಳೂರಿನಲ್ಲಿ ಇನ್ನೂ ಒಂದು ವಿಮಾನ ನಿಲ್ದಾಣದ ಅಗತ್ಯವಿದೆ ಎಂದು ಅವರು ಹೇಳಿದರು.

ಮಾಜಿ ಪ್ರಧಾನಿಗಳ ಮಾತಿಗೆ ಸಂಪೂರ್ಣ ಸಹಮತ ವ್ಯಕ್ತಪಡಿಸಿದ ಕೇಂದ್ರದ ನಾಗರಿಕ ವಿಮಾನಯಾನ ಖಾತೆ ಸಚಿವ ರಾಮಮೋಹನ್ ನಾಯ್ಡು, ಬೆಂಗಳೂರು ವಿಮಾನ ನಿಲ್ದಾಣವು ದಿನದಿಂದ ದಿನಕ್ಕೆ ಬಹಳಷ್ಟು ಪ್ರಯಾಣಿಕರ ದಟ್ಟಣೆಯನ್ನು ಎದುರಿಸುತ್ತಿದೆ. ಇದನ್ನು ನಾವೆಲ್ಲರೂ ಒಪ್ಪುತ್ತೇವೆ. ಕರ್ನಾಟಕ ಸರ್ಕಾರವು ಬೆಂಗಳೂರಿನಲ್ಲಿ ಮತ್ತೊಂದು ವಿಮಾನ ನಿಲ್ದಾಣ ನಿರ್ಮಿಸಲು ಬಯಸಿದೆ. ಅದಕ್ಕೆ ಸೂಕ್ತ ಸ್ಥಳ ಗುರುತಿಸಿ, ಕೇಂದ್ರ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಿದರೆ ಆ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತೇವೆ ಎಂದು ಭರವಸೆ ನೀಡಿದರು.

**ಹೊಸೂರಿನಲ್ಲಿ ವಿಮಾನ ನಿಲ್ದಾಣ:** ಬೆಂಗಳೂರು ವಿಮಾನ ನಿಲ್ದಾಣಕ್ಕೆ ಜನದಟ್ಟಣೆಯ ಹೆಚ್ಚಾಗಿದೆ, ಹೀಗಾಗಿ ತಮಿಳುನಾಡಿನ ಹೊಸೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಅಗತ್ಯವಿದೆ ಎಂದು ಎಐಡಿಎಂಕೆ ಸಂಸದ ತಂಬಿದೊರೈ ಆಗ್ರಹಿಸಿದರು.

ವಿಮಾನ ನಿಲ್ದಾಣದ ಚರ್ಚೆಯಲ್ಲಿ ಮಾತನಾಡಿದ ಅವರು, ದೆಹಲಿನೊಯ್ಡಾ ರೀತಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡಬಹುದು. 25 ವರ್ಷಗಳೊಳಗೆ ಮತ್ತೊಂದು ವಿಮಾನ ನಿಲ್ದಾಣ ಮಾಡಬಾರದು ಎನ್ನುವ ನಿಯಮ ಸಡಿಲಗೊಳಿಸಬೇಕು. ಹೊಸೂರಿನಲ್ಲಿ ವಿಮಾನ ನಿಲ್ದಾಣಕ್ಕೆ ತಮಿಳುನಾಡು ಸರ್ಕಾರ ಕೂಡಾ ಶಿಫಾರಸು ಮಾಡಿದೆ ಎಂದರು.

ತಂಬಿದೊರೈ ಪ್ರಶ್ನೆಗೆ ಉತ್ತರಿಸಿದ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು, ವಿಮಾನ ನಿಲ್ದಾಣ ಎಲ್ಲಿ ನಿರ್ಮಾಣ ಆಗಬೇಕು ಎನ್ನುವ ಬಗ್ಗೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಕೂತು ಈ ಸಮಸ್ಯೆ ಬಗೆಹರಿಸಬೇಕು, ಹೊಸ ವಿಮಾನ ನಿಲ್ದಾಣ ಮಾಡುವುದು ನಮ್ಮ ಉದ್ದೇಶವಿದೆ. ಆದರೆ 150 ಕಿ.ಮೀ ವ್ಯಾಪ್ತಿಯಲ್ಲಿ ಮತ್ತೊಂದು ನಿಲ್ದಾಣ ಮಾಡಬಾರದು ಎನ್ನುವ ನಿಯಮ ಇದೆ ಹೀಗಾಗಿ ಕೂತು ಮಾತುಕತೆ ಮೂಲಕ ಈ ಸಮಸ್ಯೆ ಬಗೆಹರಿಸಬೇಕಿದೆ ಎಂದರು.

### ಅಭಿನಂಧನೆ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಲದ ಸಂಘಗಳ ನೂತನ ನಿರ್ದೇಶಕರಾಗಿ ಆಯ್ಕೆಯಾದ ಸಿ.ಚಂದ್ರಶೇಖರ್ ಅವರನ್ನು ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ನೇತೃತ್ವದಲ್ಲಿ ಅಭಿನಂಧಿಸಲಾಯಿತು. ಈ ವೇಳೆ ಕನ್ನಡ ಸ್ನೇಹ ಬಳಗದ ಅಧ್ಯಕ್ಷ ಪಿ.ಬಂದಿಗೌಡ, ನಗರಪಾಲಿಕೆ ಮಾಜಿ ಸದಸ್ಯ ಗೋಪಿ ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಎಂ ಶ್ರೀನಿವಾಸಕುಮಾರ್, ಕೊಪ್ಪಲ್ ರಾಜಣ್ಣ, ರಾಜಕುಮಾರ್ ದತ್ತು ಕಿಟ್ಟಪ್ಪ, ಕಲಾಮಂದಿರ ರಮೇಶ್, ಬಸವರಾಜು, ಡೆಲ್ಲಿ ರವಿ, ಭೀಮಣ್ಣ ಮುಂತಾದವರಿದ್ದರು

# ಜಯಪುರದಲ್ಲಿ ಆರಂಭವಾಯ್ತು 'ಸೋಮವಾರ ಸಂತೆ'

● ಸುತ್ತಮುತ್ತಲ ಗ್ರಾಮಸ್ಥರಿಗೆ ಅನುಕೂಲಕಾರಿಯಾಗಿ ಶಾಸಕ ಜಿ.ಟಿ.ದೇವೇಗೌಡರ ಮಹತ್ವದ ಕ್ರಮ ● ಇನ್ನು ಮುಂದೆ ದನ, ಕುರಿ, ಮೇಕೆ, ಕೋಳಿ ಮಾರಾಟಕ್ಕೂ ಅನುವು ● ವಾಣಿಜ್ಯ-ವಹಿವಾಟಿನಿಂದ ಜನರ ಆರ್ಥಿಕ ಸ್ಥಿತಿ ಸುಧಾರಿಸುವ ವಿಶ್ವಾಸ

ಮೈಸೂರು, ಫೆ.3(ಎಸ್‌ಬಿಡಿ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜಯಪುರ ಹೋಬಳಿ ಕೇಂದ್ರವನ್ನು ತಾಲೂಕು ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಸರ್ಕಾರವನ್ನು ಒತ್ತಾಯಿಸುವುದಾಗಿ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಜಯಪುರ ಗ್ರಾಮ ಪಂಚಾಯಿತಿ ಮತ್ತು ಸಂಜೀವಿನಿ ಮಹಿಳಾ ಒಕ್ಕೂಟದ ಸಹಯೋಗದಲ್ಲಿ ಜಯಪುರದಲ್ಲಿ ನೂತನವಾಗಿ ಆರಂಭಿಸಲಾದ 'ಸಾರ್ವಜನಿಕ ಸೋಮವಾರ ಸಂತೆ'ಗೆ ಚಾಲನೆ ನೀಡಿ ಮಾತನಾಡಿದ ಅವರು, ವಿಸ್ತಾರವಾದ ಈ ಹೋಬಳಿ ಕೇಂದ್ರವು ತಾಲೂಕು ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಅಗತ್ಯತೆ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಇದನ್ನು ಶೀಘ್ರ ಸಾಕಾರಗೊಳಿಸುವಂತೆ ಒತ್ತಾಯಿಸಲಾಗುವುದು ಎಂದರು.



ಜಯಪುರದಲ್ಲಿ ಆರಂಭಿಸಲಾಗಿರುವ ಸೋಮವಾರದ ಸಾರ್ವಜನಿಕ ಸಂತೆಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿ, ಸಂತೆಯಲ್ಲಿ ಒಂದು ಸುತ್ತು ಹಾಕಿದರು.

ಜಯಪುರದಲ್ಲಿ ಸಂತೆ ಆರಂಭವಾಗಿರುವುದರಿಂದ ಸ್ಥಳೀಯ ರೈತರಿಗೆ ಅನುಕೂಲವಾಗಿದೆ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಜಾಗ ನೀಡಿದರೆ ಎಪಿಎಂಸಿ ವತಿಯಿಂದ ಸಂತೆಯನ್ನು ಅಭಿವೃದ್ಧಿಪಡಿಸಿ, ವ್ಯಾಪಾರಿಗಳಿಗೆ ಶಾಶ್ವತ ಅನುಕೂಲ ಕಲ್ಪಿಸಬಹುದು. ಈ ಬಗ್ಗೆ ಕೂಡಲೇ ಕ್ರಮ ವಹಿಸಬೇಕು. ಮುಂದಿನ ದಿನಗಳಲ್ಲಿ ಕುರಿ ಮತ್ತು ದನಗಳ ಸಂತೆಗೆ ಅವಕಾಶ ಮಾಡಿಕೊಡಲಾಗುವುದು. ಹಾಗೆಯೇ ಹೊಸದಾಗಿ ಕಲ್ಪಿಸಿರುವ ಗುಣಮಟ್ಟದ ಡಿಜಿಟಲ್ ಗ್ರಂಥಾಲಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ವಿದ್ಯೆಯ ಜೊತೆಗೆ ವಿನಯ, ಒಳ್ಳೆಯ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಗ್ರಾಮಕ್ಕೆ ಸಮರ್ಪಕವಾಗಿ ಕಬಿನಿಯಿಂದ ಕುಡಿಯುವ ನೀರು ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ವಹಿಸುತ್ತೇನೆ. ಬೆಲೆ ಹೆಚ್ಚಿದೆ ಎಂದು ರೈತರು ಭೂಮಿ ಮಾರಿಕೊಳ್ಳಬೇಡಿ. ಜಮೀನು ಮಾರಿ ಆಡಂಬರದ ಮದುವೆ ಮಾಡುವ ಬದಲು ಅದೇ ಜಮೀನನ್ನು ಮಕ್ಕಳಿಗೆ ನೀಡಿ ಅವರ ಜೀವನೋಪಾಯಕ್ಕೆ ಅನುಕೂಲ ಮಾಡಿಕೊಡಿ. ಸರಳ ವಿವಾಹ ಅಥವಾ ಸಾಮೂಹಿಕ ವಿವಾಹದಲ್ಲಿ ಸತಿ–ಪತಿಗಳಾಗುವುದರಿಂದ ಘನತೆ ಕಡಿಮೆ ಆಗುವುದಿಲ್ಲ ಎಂದು ಕಿವಿಮಾತು ಹೇಳಿದರು.

ಈ ಭಾಗದ ಹಲವು ಕೆರೆಗಳಿಗೆ ನೀರು ತುಂಬಿಸುವ ನಿಟ್ಟಿನಲ್ಲಿ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನೀರಾವರಿ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದ್ದು, ಶೀಘ್ರದಲ್ಲಿ ನೆರವೇರಲಿದೆ. ಪದವಿ ಪೂರ್ವ ಕಾಲೇಜು ಆರಂಭಿಸಲಾಗುವುದು. ಜಯಪುರ ಸಮುದಾಯ ಆರೋಗ್ಯ ಕೇಂದ್ರವನ್ನು 30ರಿಂದ 100 ಹಾಸಿಗೆ ಸಾಮರ್ಥ್ಯದೊಂದಿಗೆ ಮೇಲ್ದರ್ಜೆಗೇರಿಸಲಾಗುವುದು. ಆರೋಗ್ಯ ಇಲಾಖೆಯ ಯೋಜನಾ ಕಾರ್ಯಕ್ರಮಗಳ ಪ್ರಯೋಜನ ಪಡೆದುಕೊಳ್ಳಬೇಕು. ಬಿಪಿಎಲ್ ಕಾರ್ಡ್ ಮೂಲಕ ಆರೋಗ್ಯ ಸೇವೆ ಶಸ್ತ್ರಚಿಕಿತ್ಸೆ ಪಡೆಯಬಹುದು. ಯಶಸ್ವಿನಿ ಆರೋಗ್ಯ ವಿಮೆ ಪ್ರಯೋಜನದ ಬಗ್ಗೆ ತಿಳಿದುಕೊಂಡು, ಅನುಕೂಲ ಪಡೆಯಬೇಕಿದೆ ಎಂದರು.

**ಅಧಿಕಾರಿಗಳ ತರಾಟೆಗೆ:** ಇದೇ ವೇಳೆ ಹಲವರು ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲಚೇತನ ಸಹಾಯಧನ ಬರುತ್ತಿಲ್ಲ ಎಂದು ದೂರಿದ ಹಿನ್ನೆಲೆಯಲ್ಲಿ ಜಿ.ಟಿ.ದೇವೇಗೌಡರು, ನಮ್ಮ ಬಳಿ ಅರ್ಜಿ ಹಿಡಿದು ಬರುವವರೆಗೆ ಕಂದಾಯ ಅಧಿಕಾರಿಗಳು ಏನು ಮಾಡುತ್ತೀರಿ, ನೀವೇ ಮನೆ ಮನೆಗೆ ಹೋಗಿ ಜನರ ಸಮಸ್ಯೆ ಬಗೆಹರಿಸಿ ಎಂದು ತಾಕೀತು ಮಾಡಿದರು. ಗ್ರಾಮಸ್ಥ ಕೆಂಪರಾಜು, ನಾಡಕಚೇರಿ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದು, ಮುಖ್ಯವಾದ ಕಡತಗಳು ನಾಶವಾಗುವ ಭೀತಿ ಉಂಟಾಗಿದೆ. ಕಟ್ಟಡ ದುರಸ್ತಿ ಪಡಿಸಿ, ರಾತ್ರಿ ಪಾಳಿಯಲ್ಲಿ ಕಾವಲುಗಾರರನ್ನು ನೇಮಿಸಬೇಕು ಎಂದರು. ಈ ಬಗ್ಗೆ ಕ್ರಮವಹಿಸುವುದಾಗಿ ಶಾಸಕರು ಭರವಸೆ ನೀಡಿದರು.

**ವಿವಿಧ ಕಾರ್ಯಕ್ರಮಗಳು:** ಶಾಸಕರು ಉನ್ನತ ವ್ಯಾಸಂಗ ಮಾಡುತ್ತಿರುವ ಇಬ್ಬರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಿದರು. ಗ್ರಾಮ ಪಂಚಾಯಿತಿ ವತಿಯಿಂದ ಅಂಗವಿಕಲರ ಶೇ.3ರ ಅನುದಾನದಲ್ಲಿ 57 ಅಂಗವಿಕಲರಿಗೆ ತಲಾ 5 ಸಾವಿರ ಸಹಾಯಧನದ ಚೆಕ್ ವಿತರಿಸಿ ದರು. ರೇಷ್ಮೆ ಘಟಕ ನಿರ್ಮಾಣಕ್ಕೆ ರೈತರಿಗೆ ಮಂಜೂರಾತಿ ಪತ್ರ ನೀಡಿದರು. ಅಲ್ಲದೆ ಸಮುದಾಯ ಆರೋಗ್ಯ ಕೇಂದ್ರದ ಹೆರಿಗೆ ವಾರ್ಡ್‌ಗೆ 3 ಲಕ್ಷ ವೆಚ್ಚದಲ್ಲಿ ಅಳವಡಿಸಿರುವ ಸೋಲಾರ್ ಪ್ಲಾಂಟ್‌ಗೆ ಚಾಲನೆ ನೀಡಿದರು. 20 ಲಕ್ಷ ವೆಚ್ಚದ ಡಿಜಿಟಲ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ನೂತನ ಕಟ್ಟಡ ಉದ್ಘಾಟಿಸಿದರು. 3 ಲಕ್ಷ ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ, ಕಂದಾಯ ಅಧಿಕಾರಿಗಳ ಕಟ್ಟಡ ಉದ್ಘಾಟಿಸಿದರು. ಸಾರ್ವಜನಿಕ ಸಂತೆಯಲ್ಲಿ ಸಂಜೀವಿನಿ ಒಕ್ಕೂಟ ಮಹಿಳಾ ಸದಸ್ಯರು ತಯಾರಿಸಿದ ಖಾದ್ಯಗಳ ಸವಿದರು. ತರಕಾರಿ–ಹಣ್ಣು ಸೊಪ್ಪು, ಮೀನು, ಬುಟ್ಟಿ, ಬೀಸಣಿಗೆ, ಅರಿಶಿನ–ಕುಂಕುಮ ಖರೀದಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಪಂ ಉಪಕಾರ್ಯದರ್ಶಿ ಸವಿತಾ, ತಾಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸಿ.ಕೃಷ್ಣ, ಪಂಚಾಯತ್ ರಾಜ್ ಉಪವಿಭಾಗ ಸಹಾಯಕ ಇಂಜಿನಿಯರ್ ಹೆಚ್.ಸಿ ರವಿಕುಮಾರ್, ಜಯಪುರ ನಾಡಕಚೇರಿ ಉಪತಹಸೀಲ್ದಾರ್ ಎಂ.ನಿಂಗಪ್ಪ ಕಂದಾಯ ಅಧಿಕಾರಿ ಲೋಹಿತ್, ಎಪಿಎಂಸಿ ಮಾಜಿ ನಿರ್ದೇಶಕ ಕೋಟೆಹುಂಡಿ ಮಹದೇವು, ಸಮಾಜ ಸೇವಕ ಎಸ್. ಶ್ರೀಕಾಂತ್, ಜಯಪುರ ಗ್ರಾಪಂ ಅಧ್ಯಕ್ಷ ಎಂ.ಮಹಾದೇವಯ್ಯ, ಉಪಾಧ್ಯಕ್ಷೆ ಬಿ.ರಾಣಿ ಮಂಜುನಾಥ್, ಸದಸ್ಯರಾದ ಮಾರಿಸಿದ್ದೇಗೌಡ, ಬಸವಣ್ಣ, ಎಂ.ನಾಗರಾಜು, ಬಿ.ರೇಣುಕಾ, ನಂಜಮ್ಮಣಿ, ಆಶಾ, ಮಹಾದೇವಿ, ಬೈರೇಶ್, ಸುಮಾ, ರಾಣಿ, ಶಿವಣ್ಣ, ಲಕ್ಷ್ಮಮ್ಮ, ಪಿಡಿಓ ಬಸವಣ್ಣ, ಕಾರ್ಯದರ್ಶಿ ನಾಗವೇಣಿ, ಲೆಕ್ಕಸಹಾಯಕ ಆನಂದೇಗೌಡ, ಗ್ರಂಥಾಲಯ ಮೇಲ್ವಿಚಾರಕ ಎಸ್.ಸೋಮೇಗೌಡ, ಸಿಬ್ಬಂದಿ ಭಾರತೀ, ರಾಣಿ, ಮುರುಡಪ್ಪ, ಶಿಕ್ಷಣ ಇಲಾಖೆಯ ಗೀತಾ, ಎಪಿಎಂಸಿ ಕಾರ್ಯದರ್ಶಿ ಕುಮಾರಸ್ವಾಮಿ, ನಿರ್ದೇಶಕ ಸಿದ್ದರಾಜು, ರೇಷ್ಮೆ ಇಲಾಖೆಯ ಮಹೇಶ್ ಕುಮಾರ್, ಪಶು ಸಂಗೋಪನೆ ಇಲಾಖೆಯ ರಘುನಂದನ್, ಸಂಜೀವಿನಿ ಒಕ್ಕೂಟ ಅಧ್ಯಕ್ಷೆ ಮೀನಾಕ್ಷಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನಾಗರಾಜು, ಜಯಪುರ ಹಾಲಿನ ಡೇರಿ ಅಧ್ಯಕ್ಷ ಮೂಗನಾಯಕ, ಅಂಗವಿಕಲ ಇಲಾಖೆಯ ಆರ್.ಎಲ್.ಸ್ವಾಮಿ, ಮುಖಂಡರಾದ ಬರಡನಪುರ ಬಸವಣ್ಣ, ಜವರನಾಯಕ, ಅಬ್ದುಲ್ ಮುತಾಲಿಫ್, ರಾಮೇಗೌಡ, ಧನಗಹಳ್ಳಿ ಸ್ವಾಮಿ, ಬಿ.ಕೆ.ಬಸವೇಗೌಡ, ದೂರ ನಾಗರಾಜು ಮತ್ತಿತರರು ಭಾಗವಹಿಸಿದ್ದರು.

## ಕೃಷಿ ಪರಿಕರಗಳ ವಿತರಣೆ



ಜಯಪುರ ಹೋಬಳಿ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ 30 ರೈತರಿಗೆ ಯಂತ್ರೋಪಕರಣ ಹಾಗೂ 21 ರೈತರಿಗೆ ತುಂತುರು ಹನಿ ನೀರಾವರಿ ಪರಿಕರಗಳನ್ನು ಶಾಸಕ ಜಿ.ಟಿ.ದೇವೇಗೌಡರು ವಿತರಿಸಿದರು. ಈ ವೇಳೆ ಮೈಸೂರು ತಹಶೀಲ್ದಾರ್ ಕೆ.ಎಂ.ಮಹೇಶ್ ಕುಮಾರ್, ತಾಲೂಕು ಸಹಾಯಕ ಕೃಷಿ ನಿರ್ದೇಶಕ ಜಯರಾಮ್, ಜಯಪುರ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಅರುಣಾ, ಇಲವಾಲ ರೈತ ಸಂಪರ್ಕ ಕೇಂದ್ರ ಕೃಷಿ ಅಧಿಕಾರಿ ವಿರೂಪಾಕ್ಷ, ತಾಂತ್ರಿಕ ವ್ಯವಸ್ಥಾಪಕಿ ಪಲ್ಲವಿ, ಲೆಕ್ಕ ಸಹಾಯಕ ವಿಜಯ್ ಮತ್ತಿತರರಿದ್ದರು.

# ರಸ್ತೆ ಸುರಕ್ಷತಾ ನಿಯಮ ಪಾಲಿಸಿ

## ಸಿಪಿಐ ಪ್ರಸನ್ನಕುಮಾರ್ ಸಲಹೆ

ಸರಗೂರು, ಫೆ.3– ವಾಹನ ಚಾಲನೆ ಮಾಡುವ ವೇಳೆ ರಸ್ತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸಿಪಿಐ ಪ್ರಸನ್ನಕುಮಾರ್ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣಾ ಆವರಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಆಟೋ ಚಾಲಕರು ಪ್ರಯಾಣಿಕನ್ನು ಸೌಜನ್ಯದಿಂದ ಕಾಣಬೇಕು. ಸುರಕ್ಷಿತವಾಗಿ ಅವರ ಸ್ಥಳಕ್ಕೆ ತಲುಪಿಸಬೇಕು. ಜನಸ್ನೇಹಿ ಚಾಲಕರಾಗಿ ನಿಮ್ಮ ಊರಿನ ಘನತೆ ಹೆಚ್ಚಿಸಬೇಕು ಎಂದರು.



ಸಭೆಯಲ್ಲಿ ಸಿಪಿಐ ಪ್ರಸನ್ನಕುಮಾರ್ ಮಾತನಾಡಿದರು.

ಸವಾರರು ದ್ವಿಚಕ್ರ, ನಾಲ್ಕು ಚಕ್ರ ವಾಹನ ಚಾಲನೆ ಮಾಡುವ ವೇಳೆ ಎಚ್ಚರಿಕೆ ವಹಿಸಬೇಕು. ಮದ್ಯಪಾನ ಮಾಡಿ ವಾಹನ ಚಾಲನೆ, ಮೊಬೈಲ್‌ನಲ್ಲಿ ಮಾತನಾಡುತ್ತಾ ವಾಹನ ಚಾಲನೆ ಮಾಡುವುದರಿಂದ ಅಪಘಾತಗಳು ಸಂಭವಿಸುತ್ತವೆ. ಇದರಿಂದ ನಿಮ್ಮನ್ನೇ ನಂಬಿರುವ ಕುಟುಂಬ ಬೀದಿಗೆ ಬರಲಿದೆ ಎಂಬುದನ್ನು ಮರೆಯಬಾರದು. ಪ್ರತಿಯೊಬ್ಬರೂ ವಾಹನ ವಿಮೆ, ಡಿಎಲ್ ಮಾಡಿಸಬೇಕು. ಅವಧಿ ಮುಗಿದಿದ್ದರೇ ನವೀಕರಣ ಮಾಡಿಸಬೇಕು. ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ವಾಹನದ ಸೀಟ್ ಬೆಲ್ಟ್ ಹಾಕಬೇಕು. ಇಲ್ಲದಿದ್ದರೇ ದಂಡ ತೆರಬೇಕಾಗುತ್ತದೆ ಎಂದರು.

ಕಾನೂನು ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು. ವಾಹನ ಸವಾರರು ಎಲ್ಲೆಂದರಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸಿ ಸಾರ್ವಜನಿಕರಿಗೆ ತೊಂದರೆ ಕೊಡಬಾರದು. ಕಾನೂನು ಬಾಹಿರ ಕೃತ್ಯಗಳನ್ನು ಯಾರೇ ಮಾಡಿದರೂ ಅಪರಾಧ. ಹೀಗಾಗಿ ವಾಹನ ಚಾಲಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಿ ಎಂದು ತಿಳಿಸಿದರು.

ಈ ವೇಳೆ ಎಸ್‌ಐ ಆರ್.ಕಿರಣ್ ಸೇರಿದಂತೆ ಸಿಬ್ಬಂದಿಗಳಾದ ಇಮ್ರಾನ್ ಅಹಮ್ಮದ್, ಆನಂದ್ ಹಾಗೂ ವಾಹನ ಚಾಲಕರು ಆಟೋ ಚಾಲಕರು ಹಾಜರಿದ್ದರು.

## ನಾಳೆ ಉಪನ್ಯಾಸ

ಹುಣಸೂರು, ಫೆ.3– ತಾಲೂಕಿನ ಬೆಂಕಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಯುವ ಸಮುದಾಯ ವಿಷಯ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಫೆ.5ರಂದು ಸಂಜೆ 5.30ಕ್ಕೆ ನಡೆಯಲಿದೆ ಎಂದು ಉಪನ್ಯಾಸಕ ಆನಂದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಕುವೆಂಪು ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ಯೂತ್ ಫಾರ್ ಮೈ ಭಾರತ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಸಾಹಿತಿ ಟಿ.ಸತೀಶ್ ಜವರೇಗೌಡ ಗ್ರಾಮೀಣಾಭಿವೃದ್ಧಿ ಮತ್ತು ಯುವ ಸಮುದಾಯ ವಿಷಯ ಕುರಿತು ಉಪನ್ಯಾಸ ನೀಡುವರು.

ಸ್ಪಂದನ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಲೋಕೇಶ್ ಅಧ್ಯಕ್ಷತೆ ವಹಿಸಲಿದ್ದು, ಮೈಸೂರಿನ ಶ್ರೀವಿವೇಕಾನಂದ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ವೆಂಕಟೇಶ್, ಅದಮ್ಯ ರಂಗಶಾಲೆ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ, ಗ್ರಾಮದ ಮುಖಂಡ ಪುಟ್ಟಸ್ವಾಮಿ ನಾಯಕ, ಗ್ರಾಪಂ ಕಾರ್ಯದರ್ಶಿ ಕೆ.ರಮೇಶ್, ಡೈರಿ ನಿರ್ದೇಶಕಿಯರಾದ ಮಣಿಯಮ್ಮ ಮತ್ತು ವಿಜಯಲಕ್ಷ್ಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

### ಸೋಮನಾಥಪುರ ಪಿಎಸಿಎಸ್ ಚುನಾವಣೆ

# 6 ಮಂದಿ ನಿರ್ದೇಶಕರು ಅವಿರೋಧ ಆಯ್ಕೆ

● ಫೆ.9ರಂದು ಚುನಾವಣೆ ● ಉಳಿದ 6 ಸ್ಥಾನಕ್ಕೆ 10 ಅಭ್ಯರ್ಥಿಗಳು ಕಣದಲ್ಲಿ

ತಿ.ನರಸೀಪುರ, ಫೆ.3– ತಾಲೂಕಿನ ಸೋಮನಾಥಪುರ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಫೆ.9ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಅಂತಿಮ ದಿನವಾದ ಸೋಮವಾರ ಹಲವು ಮಂದಿ ನಾಮಪತ್ರ ವಾಪಸ್ ಪಡೆದ ಹಿನ್ನೆಲೆಯಲ್ಲಿ 6 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾದರು.



ಎಂ.ಸಿದ್ದರಾಜು



ಆರ್‌ಟಿಓ ಶಿವಣ್ಣ

ಸಂಘದ ಒಟ್ಟು 12 ನಿರ್ದೇಶಕರ ಪೈಕಿ 6 ಮಂದಿ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಉಳಿದ 6 ನಿರ್ದೇಶಕರ ಸ್ಥಾನಕ್ಕೆ ಭಾನುವಾರ ಚುನಾವಣೆ ನಡೆಯಲಿದ್ದು, ಸಾಲಗಾರರು ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ 10 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಉಳಿದಿದ್ದಾರೆ.

ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಸ್ಥಾನಕ್ಕೆ ಶ್ರೀರಂಗರಾಜಪುರ ಎಂ.ಸಿದ್ದರಾಜು 2ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾದರೆ, ಹಿಂದುಳಿದ ಬಿ ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ಮಾಜಿ ಅಧ್ಯಕ್ಷ ಆರ್‌ಟಿಓ ಡಿ.ಶಿವಣ್ಣ ಆಯ್ಕೆಯಾಗಿದ್ದಾರೆ. ಹಿಂದುಳಿದ ವರ್ಗ ಎ ಮಹಿಳೆ ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ಮರಮ್ಮ ಹಾಗೂ ನಂಜುಂಡಯ್ಯ ಸೇರಿದಂತೆ 6 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಳಿದಂತೆ ಸಾಲಗಾರರಲ್ಲದ ಕ್ಷೇತ್ರದಿಂದ ಉಷಾ ಹಾಗೂ ಎಸ್.ಎ.ಯದುನಂದನ್, ಸಾಲಗಾರರ ಕ್ಷೇತ್ರದಿಂದ ಗಿರೀಶ್ ಗೌಡ, ಕೆ.ಎಂ.ಚಂದ್ರಶೇಖರ್, ಎಸ್.ನಾಗರಾಜು, ಎಂ.ಮಹದೇವು, ಆರ್.ರಂಗಸ್ವಾಮಿ, ರಾಜು, ಲೋಕೇಶ್, ಶಿವಶಂಕರಪ್ಪ ನಿರ್ದೇಶಕರ ಆಯ್ಕೆ ಬಯಸಿ ಅಂತಿಮವಾಗಿ ಕಣದಲ್ಲಿ ಉಳಿದಿದ್ದಾರೆ.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜಣ್ಣ, ಡಿಸಿಸಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಗುತ್ತಿಗೆದಾರ ಕಗ್ಗಲೀಪುರ ಕೆ.ಎಂ.ಮಧುಕುಮಾರ್, ಸೋಮನಾಥಪುರ ಗಣೇಶ್, ತಾಪಂ ಮಾಜಿ ಸದಸ್ಯ ರಾಮಲಿಂಗು, ನ್ಯಾಯಬೆಲೆ ಅಂಗಡಿ ನಾಗೇಂದ್ರ, ದಿನೇಶ್, ಶಿವಪ್ಪ, ಮಹದೇವಯ್ಯ, ಬೋರೇಗೌಡ, ಪುಟ್ಟಸ್ವಾಮಿ, ಡೆಲ್ಲಿ ರಾಮಣ್ಣ, ಕುಳ್ಳ ಮಹದೇವಯ್ಯ, ಷಡಕ್ಷರಿ, ಮಂಜುನಾಥ್ ಸೇರಿದಂತೆ ಮತ್ತಿತರಿದ್ದರು.

> ಐದನೇ ಬಾರಿಗೆ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಗ್ರಾಮಸ್ಥರಿಗೂ ಮತ್ತು ಸಂಘದ ಸದಸ್ಯರಿಗೆ ಅಭಿನಂದನೆಗಳು. ನಾನು ಈ ಹಿಂದೆ ಅಧ್ಯಕ್ಷನಾಗಿ ಪ್ರಾಮಾಣಿಕವಾಗಿ ಸರ್ಕಾರದಿಂದ ಬರುವ ಸವಲತ್ತುಗಳನ್ನು ರೈತರಿಗೆ ಸಕಾಲ ದೊರಕಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಿದ್ದೇನೆ. ಮುಂದೆ ಸಹ ಮಾಡುತ್ತೇನೆ. - ಡಿ.ಶಿವಣ್ಣ

## ಮೊಪೆಡ್‌ಗೆ ಶಾಲಾ ವಾಹನ ಡಿಕ್ಕಿ: ರೈತ ಸಾವು

ಹುಣಸೂರು, ಫೆ.3– ಮೊಪೆಡ್‌ಗೆ ಶಾಲಾ ವಾಹನ ಡಿಕ್ಕಿ ಹೊಡೆದ ಪರಿಣಾಮ ರೈತರೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಕಸಬಾ ಹೋಬಳಿಯ ಹೊಸೂರು ಜಂಕ್ಷನ್ ಬಳಿ ನಡೆದಿದೆ.



ಉಯಿಗೌಡನಹಳ್ಳಿ ಗ್ರಾಮದ ನಿವಾಸಿ ಸ್ವಾಮಿ(59) ಮೃತಪಟ್ಟವರು. ಇವರು ಸೋಮವಾರ ಬೆಳಗ್ಗೆ ತಮ್ಮ ಟಿವಿಎಸ್ ಮೊಪೆಡ್‌ನಲ್ಲಿ ಜಮೀನಿಗೆ ತೆರಳುತ್ತಿದ್ದ ವೇಳೆ ಹೊಸೂರು ಕಡೆಯಿಂದ ಹುಣಸೂರಿಗೆ ಬರುತ್ತಿದ್ದ ಖಾಸಗಿ ಶಾಲಾ ಬಸ್ ಡಿಕ್ಕಿ ಹೊಡೆದಿದ್ದು, ಪರಿಣಾಮ ಸ್ವಾಮಿ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸ್ಥಳಕ್ಕೆ ಶಾಸಕ ಜಿ.ಡಿ.ಹರೀಶ್ ಗೌಡ, ಉದ್ದೂರು ಗ್ರಾಪಂ ಅಧ್ಯಕ್ಷ ಉಯಿಗೌಡನಹಳ್ಳಿ ಶಿವಕುಮಾರ್, ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್, ರಾಜ್ಯ ಸಮಿತಿ ಸದಸ್ಯ ಬಸವರಾಜು ಮತ್ತಿತರ ಮುಖಂಡರು ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.

## ಹಾಡಹಗಲೇ 3 ಕರುಗಳ ಮೇಲೆ ಹುಲಿ ದಾಳಿ

ಹುಣಸೂರು, ಫೆ.3– ಹಾಡಹಗಲೇ ಹುಲಿ ಜಾನುವಾರುಗಳ ಮೇಲೆ ದಾಳಿ ನಡೆಸಿ 3 ಕರುಗಳನ್ನು ಗಾಯಗೊಳಿಸಿರುವ ಘಟನೆ ತಾಲೂಕಿನ ಕೆ.ಜಿ.ಹಬ್ಬನಕುಪ್ಪೆಯಲ್ಲಿ ನಡೆದಿದೆ.



ನಾಗರಹೊಳೆ ಉದ್ಯಾನದಂಚಿನ ಹನಗೋಡು ಹೋಬಳಿಯ ಕೆ.ಜಿ.ಹಬ್ಬನಕುಪ್ಪೆ ಗ್ರಾಮದ ಭೋಜಪ್ಪ ಹಾಗೂ ಸೋಮಣ್ಣ ಸಹೋದರರಿಗೆ ಸೇರಿದ ಕರುಗಳು ಗಾಯಗೊಂಡಿದ್ದು, ಒಂದು ಕರು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದರೆ, ಇನ್ನೆರಡು ಕರುಗಳು ಪ್ರಾಣಾಪಾಯದಿಂದ ಪಾರಾಗಿವೆ. ಹುಲಿ ಕಾಣಿಸಿಕೊಂಡಿರುವುದರಿಂದ ಗ್ರಾಮಸ್ಥರು ಭಯಭೀತರಾಗಿದ್ದು, ಓಡಾಡಲು ಹೆದರುತ್ತಿದ್ದಾರೆ.

ಸೋಮವಾರ ಕೆ.ಜಿ.ಹಬ್ಬನಕುಪ್ಪೆಯ ತಾವರೆಕೆರೆ ಆವರಣದಲ್ಲಿ ಜಾನುವಾರುಗಳನ್ನು ಮೇಯಲು ಬಿಡಲಾಗಿತ್ತು. ಈ ವೇಳೆ ಹುಲಿ ಕರುಗಳ ಮೇಲೆ ದಾಳಿ ನಡೆಸುತ್ತಿದ್ದಂತೆ ಕರುಗಳು ಚೀರಾಟ ಕೇಳಿ ಹೊಲದಲ್ಲಿ ಕೆಲಸ ಮಾಡುತ್ತಿದ್ದವರು ಜೋರಾಗಿ ಕೂಗಿಕೊಳ್ಳುತ್ತಿದ್ದಂತೆ ಹುಲಿ ಕರುಗಳನ್ನು ಬಿಟ್ಟು ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಗಾರ್ಡ್‌ಗಳಾದ ಅಕ್ಷಯ್, ಕೃಷ್ಣ ಹಾಗೂ ಸಿಬ್ಬಂದಿ ಹುಲಿ ದಾಳಿಯಿಂದ ಗಾಯಗೊಂಡಿರುವ ಕರುಗಳನ್ನು ಪರಿಶೀಲಿಸಿದರು.

**ಹುಲಿ ಸೆರೆಗೆ ಒತ್ತಾಯ:** ಹಗಲು ವೇಳೆ ಹುಲಿ ಕಾಣಿಸಿಕೊಂಡಿರುವುದರಿಂದ ಕೆ.ಜಿ.ಹಬ್ಬನಕುಪ್ಪೆ, ಚಂದನಗಿರಿ ಹಾಡಿ, ಬಿಲ್ಲೇನಹೊಸಹಳ್ಳಿ ಗ್ರಾಮಸ್ಥರು ಭಯಗೊಂಡಿದ್ದಾರೆ. ಈ ಭಾಗದಲ್ಲಿ ಆಗಾಗ್ಗೆ ಹುಲಿಗಳು ಕಾಣಿಸಿಕೊಳ್ಳುವುದರಿಂದ ಮಕ್ಕಳು ಶಾಲೆಗೆ ಹೋಗಲು ಹಾಗೂ ರೈತರು ಜಮೀನಿಗೆ ತೆರಳಲು ಹೆದರುತ್ತಿದ್ದು, ಇನ್ನಾದರೂ ಅರಣ್ಯ ಇಲಾಖೆ ಹುಲಿ ಸೆರೆ ಹಿಡಿಯುವಂತೆ ನೇರಳಕುಪ್ಪೆ, ಕೆ.ಜಿ.ಹಬ್ಬನಕುಪ್ಪೆ, ಚಂದನಗಿರಿ ಸುತ್ತಮುತ್ತಲ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ನಿರುದ್ಯೋಗಿ ಯುವಕರು ಸ್ವಯಂ ಉದ್ಯೋಗ ಕೈಗೊಳ್ಳಿ

## ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವ್ಯವಸ್ಥಾಪಕ ಪಿ.ಡಿ.ನಾಯಕ್

ಹೆಚ್.ಡಿ.ಕೋಟೆ, ಫೆ.3– ನಿರುದ್ಯೋಗಿ ಯುವಕರು ಸ್ವಯಂ ಉದ್ಯೋಗ ಕೈಗೊಂಡಲ್ಲಿ ತಮ್ಮ ಬದುಕನ್ನು ರೂಪಿಸಿಕೊಳ್ಳಬಹುದು ಎಂದು ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವ್ಯವಸ್ಥಾಪಕ ಪಿ.ಡಿ.ನಾಯಕ್ ತಿಳಿಸಿದರು.

ತಾಲೂಕಿನ ಕೆಂಚನಹಳ್ಳಿ ಗ್ರಾಮದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ತರಬೇತಿ ಕೇಂದ್ರದ ಆವರಣದಲ್ಲಿ ನಡೆದ ಎಲೆಕ್ಟ್ರಿಕಲ್ ಮತ್ತು ಗೃಹ ಉಪಯೋಗಿ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಇದು ಎಲೆಕ್ಟ್ರಿಕಲ್ ಮತ್ತು ಗೃಹೋಪಯೋಗಿ ತರಬೇತಿಯ 9ನೇ ಶಿಬಿರವಾಗಿದ್ದು, ನೂರಾರು ಶಿಬಿರಾರ್ಥಿಗಳು ಇದರ ಪ್ರಯೋಜನ ಪಡೆದು ಸ್ವಉದ್ಯೋಗ ಕೈಗೊಂಡಿದ್ದಾರೆ ಎಂದರು.

ನಮ್ಮ ತರಬೇತಿ ಕೇಂದ್ರದಲ್ಲಿ ಮೊಬೈಲ್, ಹೊಲಿಗೆ ತರಬೇತಿ, ಬ್ಯೂಟಿಷಿಯನ್, ಕೋಳಿ ಸಾಕಾಣಿಕೆ, ಮೀನು ಸಾಕಾಣಿಕೆ, ಹಣಬೆ ಬೇಸಾಯ, ರೈತರಿಗೆ ಕೃಷಿ ಸಂಬಂಧಿಸಿದಂತೆ ಹಲವು ತರಬೇತಿಗಳನ್ನು ನೀಡಲಾಗುತ್ತಿದೆ ಎಂದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿ, ತಾಲೂಕು ಹಲವು ವೈಶಿಷ್ಟ್ಯತೆಯಿಂದ ಕೂಡಿದ್ದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ಕಾರ್ಯ ನಿರ್ವಹಿಸುತ್ತಿರುವುದು ಪ್ರಮುಖವಾಗಿದೆ. ಸಂಸ್ಥೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವ ಜೊತೆಗೆ ಗ್ರಾಮೀಣ ನಿರುದ್ಯೋಗಿಗಳಿಗೆ ತರಬೇತಿ ನೀಡುವ ಮಹತ್ವದ ಕಾರ್ಯ ಕೈಗೊಂಡಿರುವುದು ಶ್ಲಾಘನೀಯ ಎಂದರು. ಕಾರ್ಯಕ್ರಮವನ್ನು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು ಉದ್ಘಾಟಿಸಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ಹಾಗೂ ಟೂಲ್ಸ್ ಕಿಟ್‌ಗಳನ್ನು ವಿತರಿಸಿದರು. ರಾಜ್ಯದ ವಿವಿಧ ಜಿಲ್ಲೆಗಳ 31 ಶಿಬಿರಾರ್ಥಿಗಳು ಒಂದು ತಿಂಗಳ ತರಬೇತಿಯಲ್ಲಿ ಪಾಲ್ಗೊಂಡಿದ್ದರು.



ಶಿಬಿರಾರ್ಥಿಗಳಿಗೆ ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು ಪ್ರಮಾಣ ಪತ್ರ ಹಾಗೂ ಟೂಲ್ಸ್ ಕಿಟ್ ವಿತರಿಸಿದರು.

ಕಾರ್ಯಕ್ರಮದಲ್ಲಿ ತರಬೇತಿ ಶಿಕ್ಷಕ ಎಸ್.ಬಿ.ನಾಗರಾಜು, ಹುಣಸೂರು ಐಟಿಐ ಕಾಲೇಜ್ ಉಪನ್ಯಾಸಕರಾದ ಮುಜಾಹಿದ್, ಸಮೀನಾ, ವಿವೇಕ ಗ್ರಾಮೀಣ ತರಬೇತಿ ಕೇಂದ್ರ ಕಾರ್ಯಕ್ರಮ ವ್ಯವಸ್ಥಾಪಕ ಪಿ.ಜಿ.ರವಿಕುಮಾರ್, ಬಿ.ನಾಗೇಂದ್ರ, ಚಿನ್ನಮಾದು, ಅಜೀಮ್ ಇನ್ನಿತರರಿದ್ದರು.

# ನಾಳೆ ಶ್ರೀಅಭಯ ಆಂಜನೇಯಸ್ವಾಮಿ ದೇವಸ್ಥಾನ ಲೋಕಾರ್ಪಣೆ

ತಿ.ನರಸೀಪುರ, ಫೆ.3– ಪಟ್ಟಣದ ತಲಕಾಡು ಮುಖ್ಯ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಅಭಯ ಆಂಜನೇಯಸ್ವಾಮಿ ದೇವಸ್ಥಾನ ಲೋಕಾರ್ಪಣೆ, ನೂತನ ಪ್ರತಿಷ್ಠಾಪನಾ ಮತ್ತು ಮಹಾಕುಂಭಾಭಿಷೇಕ ಮಹೋತ್ಸವ ಕಾರ್ಯಕ್ರಮ ಫೆ.5ರಿಂದ ಮೂರು ದಿನಗಳ ಕಾಲ ನಡೆಯಲಿದೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿ ನಿರ್ಮಾಣವಾಗಿರುವ ಶ್ರೀಅಭಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸುದ್ದಿಗೋಷ್ಠಿಯಲ್ಲಿ ದೇವಾಲಯ ಉದ್ಘಾಟನಾ ಸಮಾರಂಭದ ಮಾಹಿತಿ ನೀಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಇದೇ ಪ್ರಥಮ ಬಾರಿಗೆ ಶ್ರೀಆಂಜನೇಯಸ್ವಾಮಿ ದೇವಸ್ಥಾನ ನಿರ್ಮಾಣ ಮಾಡಲಾಗಿದ್ದು, ಫೆ.5ರ ಬುಧವಾರದಿಂದ 7ರ ಶುಕ್ರವಾರದವರೆಗೆ ವಿವಿಧ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಇಡೀ ಜಿಲ್ಲೆಯಲ್ಲೇ ಭವ್ಯ, ಸುಂದರವಾದ ಅಭಯ ಆಂಜನೇಯಸ್ವಾಮಿ ದೇವಸ್ಥಾನ ನಿರ್ಮಾಣ ಮಾಡಲಾಗಿದೆ. ಹೀಗಾಗಿ 3 ದಿನಗಳ ಕಾಲ ನಡೆಯುವ ನೂತನ ಶಿಲಾ ಪ್ರತಿಷ್ಠಾಪನಾ ಹಾಗೂ ಮಹಾಕುಂಭಾಭಿಷೇಕ ಮಹೋತ್ಸವ ಕಾರ್ಯಕ್ರಮಕ್ಕೆ ತಾಲೂಕಿನ ಭಕ್ತ ಸಮೂಹ ಹಾಗೂ ಶ್ರೀಆಂಜನೇಯಸ್ವಾಮಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.



ಸುದ್ದಿಗೋಷ್ಠಿಯಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ಮಾತನಾಡಿದರು.

ದೇವಸ್ಥಾನದ ಪ್ರಧಾನ ಅರ್ಚಕ ಎಂ.ಪವನ್ ಕುಮಾರ್ ಮಾತನಾಡಿ, ದೇವಸ್ಥಾನದ ಲೋಕಾರ್ಪಣೆ ಅಂಗವಾಗಿ ಬುಧವಾರ ಗಂಗೆ ಪೂಜೆ, ಗಣಪತಿಪೂಜೆ, ಮಹಾಸಂಕಲ್ಪ, ಧ್ವಜಾರೋಹಣ ವಾಸ್ತು ಹೋಮ, ಗಣಪತಿ ಹೋಮ, ಗುರುವಾರ ಬೆಳಗ್ಗೆ 6 ಗಂಟೆಗೆ ವೇದ ಪಾರಾಯಣ, ಅಂಕುರಾರ್ಪಣ, ಪ್ರಧಾನ ಕಳಶಾರಾಧನೆ, 108 ಕಳಶಗಳ ಆರಾಧನೆ, ನವಗ್ರಹ, ಗಣಪತಿ ಹೋಮ, ಮೃತ್ಯುಂಜಯ ಹೋಮ, ಪ್ರಸಾದ ವಿನಿಯೋಗ, ಸಂಜೆ 6 ಗಂಟೆಗೆ ಅಷ್ಟಲಕ್ಷ್ಮಿ ಹೋಮ, ರುದ್ರಹೋಮ, ದುರ್ಗಾ ಹೋಮ, ಗಾಯತ್ರಿ ಹೋಮ, ಅಷ್ಟಲಕ್ಷ್ಮಿ ಹೋಮ, 7 ರಂದು ಬೆಳಗ್ಗೆ 4 ಗಂಟೆಗೆ ಪಿಂಡಿಕಾ ಪೂಜೆ, ದೇವರ ವಿಗ್ರಹಗಳ ಅಷ್ಟ ಬಂಧನ ಪ್ರತಿಷ್ಠೆ, ಮೂರ್ತಿ ಹೋಮಪ್ರಾಣ ಪ್ರತಿಷ್ಠೆ ಹೋಮ, ಮಹಾಸಂಕಲ್ಪ, ವಿಶೇಷ ಪುಷ್ಪಾಲಂಕಾರ, ಮಹಾಪೂರ್ಣಾಹುತಿ ವಿವಿಧ ರಾಗ ತಾಳ ಸೇವೆ ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು. ಬುಧವಾರ ಸಂಜೆ 5 ಗಂಟೆಗೆ ಗಂಗೆ ಪೂಜೆಗೆ ಕನ್ಯೆಯರು ಮತ್ತು ಸುಮಂಗಲಿಯರು ಸಾಂಸ್ಕೃತಿಕ ವಸ್ತ್ರ ಧರಿಸಿ ಒಂದು ಬಿಂದಿಗೆ ಮತ್ತು ತೆಂಗಿನ ಕಾಯಿ ತೆಗೆದುಕೊಂಡು ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಬರಬೇಕೆಂದು ಮನವಿ ಮಾಡಿದರು. ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಲ್.ಮಹದೇವಪ್ಪ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

## ಕೆಂಪಮ್ಮ ನಿಧನ



ತಿ.ನರಸೀಪುರ, ಫೆ.3– ತಾಲೂಕಿನ ಚೆನ್ನಬಸವಯ್ಯನಹುಂಡಿ ಗ್ರಾಮದ ನಿವಾಸಿ ಲೇ.ಸಿ.ಕೆ.ನಂಜಪ್ಪನವರ ಧರ್ಮಪತ್ನಿ ಕೆಂಪಮ್ಮ(88) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಸಾಹಿತಿ ಚ.ನಂ.ಪ್ರಕಾಶ್ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕಿನ ಸಿ.ಬಿ.ಹುಂಡಿ ಗ್ರಾಮದಲ್ಲಿ ಮಂಗಳವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ನೊಂದವರ ಪರ ಕೆಲಸ ಮಾಡುವೆ: ಡಿ.ರವಿಶಂಕರ್



ಚಂದಗಾಲು ಗ್ರಾಮದ ಕುಟುಂಬಗಳಿಗೆ ಶಾಸಕ ಡಿ.ರವಿಶಂಕರ್ ಚೆಕ್ ವಿತರಿಸಿದರು.

ಕೆ.ಆರ್.ನಗರ, ಫೆ.3– ಕ್ಷೇತ್ರ ವ್ಯಾಪ್ತಿಯಲ್ಲಿರುವ ನೊಂದವರು ಮತ್ತು ತುಳಿತಕ್ಕೊಳಗಾದವರ ಪರ ನಾನು ಕೆಲಸ ಮಾಡುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಳೆದ 6 ತಿಂಗಳ ಹಿಂದೆ ಚಂದಗಾಲು ಗ್ರಾಮದಲ್ಲಿ ಯುವಕನ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡ ಕುಟುಂಬದವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ನೀಡಲಾದ ಪರಿಹಾರದ ಚೆಕ್ ವಿತರಿಸಿ ಅವರು ಮಾತನಾಡಿದರು. ಇಂತಹ ಘಟನೆ ನಡೆಯಬಾರದಿತ್ತು. ನಾಗರಿಕ ಸಮಾಜ ತಲೆ ತಗ್ಗಿಸುವ ಪ್ರಕರಣಗಳು ನಡೆದಾಗ ನಾವೆಲ್ಲರೂ ನೊಂದ ಕುಟುಂಬದ ಬೆನ್ನೆಲುಬಾಗಿ ನಿಲ್ಲಬೇಕಾದದ್ದು ನಮ್ಮ ಕರ್ತವ್ಯವಾಗಿದ್ದು, ಮುಂದೆ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಒದಗಿಸುವ ಭರವಸೆ ನೀಡಿದರು. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ದೊರೆತಿರುವ ಹಣವನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಅಧಿಕಾರಿಗಳು ಈ ಕುಟುಂಬಕ್ಕೆ ಅಗತ್ಯ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು ಎಂದು ಸೂಚಿಸಿದರು.

ಈ ವೇಳೆ ನಿಶ್ಚಿತ ಮತ್ತು ವಿನೂತ್ ಹಾಗೂ ಗೌರಮ್ಮನವರ ಕುಟುಂಬಗಳಿಗೆ ತಲಾ 5 ಲಕ್ಷ ರೂ.ಗಳ ಮುಖ್ಯಮಂತ್ರಿಗಳ ಪರಿಹಾರ ನಿಧಿಯ ಚೆಕ್‌ಗಳನ್ನು ಶಾಸಕರು ವಿತರಿಸಿದರು. ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಮಾತನಾಡಿದರು.

ಗ್ರೇಡ್–2 ತಹಸೀಲ್ದಾರ್ ಚಂದ್ರಶೇಖರ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ಮುಖಂಡರಾದ ಕಲ್ಲಹಳ್ಳಿ ಶ್ರೀ ನಿವಾಸ್, ಅಪ್ಪಾಜಿಗೌಡ, ಶಂಕರ್, ನಿಶಾಂತ್, ಕೆಂಚಿಮಂಜು, ಡಿ.ಸಿ.ರವಿ, ಗೌತಮ್ ಜಾಧವ್, ಮಹದೇವಸ್ವಾಮಿ, ದಿನೇಶ್ ಮತ್ತಿತರರಿದ್ದರು.

# ಹಣ್ಣುಗಳ ಬೆಲೆ ಬಿಸಿ; ತರಕಾರಿ ಬೆಲೆ ತಂಪು

ಮೈಸೂರು, ಫೆ3(ಎಂಕೆ)– ಬಿಸಿಲಿನ ತೀವ್ರತೆ ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹಣ್ಣುಗಳ ಬೆಲೆಯಲ್ಲಿ ಏರಿಕೆಯಾಗಿದ್ದು, ಸೇಬು, ದಾಳಿಂಬೆ, ತಣ್ಣನೆಯ ಬಟರ್ ಫ್ರೂಟ್ ಕೂಡ ಬಿಸಿಲಿನ ಶಾಖಕ್ಕಿಂತಲೂ ಹೆಚ್ಚು ಸುಡುತ್ತಿವೆ..!

ಬೇಸಿಗೆ ಆರಂಭಕ್ಕೂ ಮುನ್ನವೇ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ಬಿಸಿಗಾಳಿಯ ಹೊಡೆತದಿಂದ ತಪ್ಪಿಸಿಕೊಳ್ಳಲು ತಾಜಾ ಹಣ್ಣುಗಳು, ಹಣ್ಣಿನ ಜ್ಯೂಸ್‌ಗಳು ಹಾಗೂ ಎಳನೀರಿನತ್ತ ಜನರ ಚಿತ್ತ ಹರಿಯುತ್ತಿದೆ. ಹಾಗೆಯೇ ಮಾರುಕಟ್ಟೆಗೆ ಹಣ್ಣುಗಳ ಧಾರಣೆ ಪ್ರಮಾಣವೂ ಕಡಿಮೆಯಾಗುತ್ತಿರುವುದರಿಂದ ಸಹಜವಾಗಿ ಹಣ್ಣುಗಳ ಬೆಲೆಯಲ್ಲಿ ಶೇ.50 ರಷ್ಟು ಏರಿಕೆಯಾಗಿದೆ.

ತಿಂಗಳ ಹಿಂದೆಯಷ್ಟೇ 100–120 ರೂ. ಇದ್ದ ಸೇಬು ಕೆಜಿಗೆ ಬರೋಬ್ಬರಿ 240–280 ರೂ.ಗಳಾಗಿದ್ದು, 100–120 ರೂ. ಏರಿಕೆಯಾಗಿದೆ. ಒಳ್ಳೆಯ ರಸಭರಿತ ಜಾತಾ ಸೇಬು ಬೇಕಾದಲ್ಲಿ 300 ರೂ. ಕೊಡಲೇಬೇಕಿದೆ. ಹಾಗೆಯೇ ದಾಳಿಂಬೆ ಕೆಜಿಗೆ 200–280 ರೂ., ಬಟರ್‌ಫ್ರೂಟ್ ಕೆಜಿಗೆ 400 ರೂ., ಅನಾನಸ್ (ಪೈನಾಪಲ್) ಕೆಜಿಗೆ 60 ರೂ., ಮೊಸಂಬಿ ಕೆಜಿಗೆ 80 ರೂ., ಕಿತ್ತಳೆ ಕೆಜಿಗೆ 60–80, ಡ್ರ್ಯಾಗನ್ ಫ್ರೂಟ್ ಕೆಜಿಗೆ 200 ರೂ. ಮಾವು ಕೆಜಿಗೆ 360 ರೂ. ಇದ್ದು ದ್ರಾಕ್ಷಿ ಹೊರತುಪಡಿಸಿ ಉಳಿದೆಲ್ಲಾ ಹಣ್ಣುಗಳ ಬೆಲೆಯಲ್ಲಿ ಭಾರಿ ಏರಿಕೆ ಕಂಡುಬಂದಿದೆ.

ಸೇಬು, ಮಾವು, ಬಟರ್ ಫ್ರೂಟ್, ಕಿತ್ತಳೆ ಇನ್ನಿತರೆ ಹಣ್ಣಿನ ಸೀಸನ್ ಮುಗಿದಿದೆ. ಅಲ್ಲದೆ ಬಿಸಿಲಿನ ತಾಪದಿಂದಲೂ ಬೇಡಿಕೆ ಹೆಚ್ಚಿದ್ದು, ಮಾರುಕಟ್ಟೆಗೆ ಬರುತ್ತಿದ್ದ ಪ್ರಮಾಣ ಕಡಿಮೆಯಾಗಿರುವುದರಿಂದ ಹಣ್ಣುಗಳ ಬೆಲೆ ಏರಿಕೆಯಾಗಿದೆ. ಸದ್ಯಕ್ಕೆ ಬೇರೆ ದೇಶಗಳಿಂದ ಆಮದಾಗುವ ಹಣ್ಣುಗಳು ಬರುತ್ತಿದ್ದು, ಬೇಡಿಕೆಗೆ ಅನುಗುಣವಾಗಿ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ದೇವರಾಜ ಮಾರುಕಟ್ಟೆ ಹಣ್ಣಿನ ವ್ಯಾಪಾರಿ ಎಂ.ಡಿ.ಯೂನಿಸ್ ತಿಳಿಸಿದರೆ, ಏಲಕ್ಕಿ ಮತ್ತು ನಂಜನಗೂಡು ರಸಬಾಳೆ ಕೆಜಿಗೆ 100–120 ರೂ.ಗಳಾಗಿದೆ ಎಂದು ಬಾಳೆ ಹಣ್ಣಿನ ವ್ಯಾಪಾರಿ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

**ಖಾರದ ಘಾಟು ಮತ್ತಷ್ಟು ಕಮ್ಮಿ:** ಒಂದೆಡೆ ಹಣ್ಣುಗಳ ಬೆಲೆ ಏರಿಕೆಯಾದರೆ, ಮತ್ತೊಂದೆಡೆ ದಿನಬಳಕೆ ಅಗತ್ಯ ದಿನಸಿ ಪದಾರ್ಥಗಳ ಬೆಲೆಯಲ್ಲಿ ಕೊಂಚ ಇಳಿಕೆಯಾಗಿದೆ. ಮುಖ್ಯವಾಗಿ ಖಾರದ ಒಣ ಮೆಣಸಿನಕಾಯಿ ಕೆಜಿಗೆ 180–190 ರೂ.ನಿಂದ 150–155 ರೂ.ಗೆ ಕಡಿಮೆಯಾಗಿದೆ. ಬ್ಯಾಡಗಿ ಕೆಜಿಗೆ 300 ರೂನಿಂದ 260 ರೂಗೆ ಇಳಿಕೆಯಾದರೆ, ಗೋಧಿ ಮತ್ತು ರವೆ ಬೆಲೆ ಸ್ವಲ್ಪ ಏರಿಕೆಯಾಗಿದೆ.

ಇನ್ನುಳಿದಂತೆ ಗುಣಮಟ್ಟಕ್ಕೆ ತಕ್ಕಂತೆ ತೊಗರಿಬೇಳೆ ಕೆಜಿಗೆ 120–150 ರೂ., ಹೆಸರುಕಾಳು ಕೆಜಿಗೆ 108–118 ರೂ., ಉದ್ದಿನಬೇಳೆ ಕೆಜಿಗೆ 130–135 ರೂ., ಕಡಲೆ ಬೇಳೆ 105 ರೂ. ಹಾಗೂ ರಾಜಮುಡಿ ಅಕ್ಕಿ ಸೇರಿದಂತೆ ಇನ್ನಿತರೆ ಬಗೆಯ ಅಕ್ಕಿಗಳ ಬೆಲೆಯಲ್ಲೂ ಸುಮಾರು 5–10 ರೂ. ಇಳಿಕೆಯಾಗಿದೆ ಎಂದು ಶಿವರಾಂಪೇಟೆ ಡೂಪ್ಲಿನ್ ಕಾಂಪ್ಲೆಕ್ಸ್‌ನ ಚಂದನ್ ಎಂಟರ್‌ಪ್ರೈಸಸ್ ಮಾಲೀಕ ಹರ್ಷ ತಿಳಿಸಿದರು.

ಅದೇ ರೀತಿ ಅಡುಗೆ ಎಣ್ಣೆ ಬೆಲೆ ಯಥಾಸ್ಥಿತಿಯಲ್ಲಿದ್ದು, ಸನ್‌ಪ್ಯೂರ್ ಮತ್ತು ಫ್ರೀಡಂ ಲೀಟರ್‌ಗೆ 140 ರೂ.ಗಳಿದ್ದರೆ, ಗೋಲ್ಡ್‌ವಿನ್ನರ್, ಫಾರ್ಚೂನ್, ಇಮಾಮಿ ಸನ್‌ಫ್ಲವರ್ ಲೀಟರ್‌ಗೆ 145 ರೂ.ಇದೆ. ಉಳಿದಂತೆ ವನಸ್ಪತಿ ತುಪ್ಪದ ಬೆಲೆಯಲ್ಲಿ ಏರಿಕೆ ಮತ್ತು ಇಳಿಕೆ ಕಂಡುಬಂದಿಲ್ಲ ಎಂದು ಅಡುಗೆ ಎಣ್ಣೆ ವ್ಯಾಪಾರಿ ಶಾಲಿನಿ ಮಾಹಿತಿ ನೀಡಿದರು.

## ತೆಂಗಿನಕಾಯಿ ದರವಂತೂ ಗಗನದತ್ತ!



### ತೆಂಗಿನ ದರ ಏರಿಕೆ...



ಕಳೆದ ಕೆಲ ದಿನಗಳಿಂದ ತೆಂಗಿನಕಾಯಿ ದರ ದಾಖಲೆಯ ಏರಿಕೆಯಾಗಿದ್ದು, ತೆಂಗು ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿಸಿದರೆ, ಗ್ರಾಹಕರ ಜೇಬಿಗೆ ಕತ್ತರಿ ಹಾಕಿದೆ. ಮಾರುಕಟ್ಟೆಯಲ್ಲಿ ಪ್ರತಿ ಕೆಜಿ ತೆಂಗಿನಕಾಯಿ ಬೆಲೆ 60 ರಿಂದ 65 ರೂ.ಗೆ ಏರಿದ್ದು, ಗ್ರಾಹಕರಿಗೆ ಹೊರೆಯಾಗಿ ಪರಿಣಮಿಸಿದೆ. ಎಳನೀರಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಮಾರುಕಟ್ಟೆಗೆ ಬರುವ ತೆಂಗಿನಕಾಯಿ ಪ್ರಮಾಣ ಕಡಿಮೆಯಾಗಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ದೇವರಾಜ ಮಾರುಕಟ್ಟೆ ತೆಂಗಿನಕಾಯಿ ವ್ಯಾಪಾರಿ ವಿನೋದ್ ಹೇಳಿದರು. ಈ ಮೊದಲು 30 ರೂಗಳಿದ್ದ ದೊಡ್ಡಗಾತ್ರದ ತೆಂಗಿನಕಾಯಿ 50 ರೂ.ಗೆ ಮಾರಾಟ ಮಾಡಲಾಗುತ್ತಿದ್ದು, ಗಾತ್ರದಲ್ಲಿ ಸಣ್ಣದಾಗಿರುವ ತೆಂಗಿನ ಕಾಯಿಗಳನ್ನು 20 ರಿಂದ 30 ರೂಗಳವರೆಗೆ ಮಾರಾಟ ಮಾಡಲಾಗುತ್ತಿದೆ. ತೆಂಗಿನಕಾಯಿ ಬೆಲೆ ಏರಿಕೆ ಜೊತೆಗೆ ಕೊಬ್ಬರಿ ಬೆಲೆಯೂ ಜಾಸ್ತಿಯಾಗಿದೆ ಎಂದರು.

### ತರಕಾರಿ ತಂಪು...!

ಹಣ್ಣುಗಳ ಬೆಲೆ ಬಿಸಿಲಿನಷ್ಟೇ ಬಿಸಿಯಾಗಿದ್ದರೆ, ತರಕಾರಿಗಳ ಬೆಲೆ ಕಡಿಮೆಯಾಗಿರುವುದು ಗ್ರಾಹಕರಿಗೆ ನಿರಾಳ ತಂದಿದೆ. ಈರುಳ್ಳಿ ಬೆಲೆ ಮತ್ತೆ ಕಡಿಮೆಯಾಗಿದ್ದು, 100 ರೂ.ಗೆ ಎರಡೂವರೆಯಿಂದ 3 ಕೆಜಿವರೆಗೆ ದೊರೆಯುತ್ತಿದೆ. ಬೆಳ್ಳುಳ್ಳಿ ಕೆಜಿಗೆ 180–200 ರೂ., ಆಲೂಗೆಡ್ಡೆ 30 ರೂ., ಕ್ಯಾರೆಟ್ ಕೆಜಿಗೆ 20 ರೂ., ಬಿಟ್‌ರೂಟ್ 20, ಬಿನ್ಸ್ 30 ರೂ., ನುಗ್ಗೆಕಾಯಿ 160 ರೂ., ಹೂ ಮತ್ತು ಎಲೆ ಕೋಸು 30 ರೂ, ದಪ್ಪ ಮೆಣಸಿನಕಾಯಿ 60 ರೂ., ಹಸಿಮೆಣಸಿನ ಕಾಯಿ 80 ರೂ., ಬೂದುಗುಂಬಳ 40 ರೂ., ಬೆಂಡೆಕಾಯಿ 60 ರೂ.ಗೆ ಮಾರಾಟವಾದರೆ, ಬಾಯಾರಿಕೆ ತಣಿಸುವ ನಿಂಬೆಹಣ್ಣು 10 ರೂ.ಗೆ 4 ನಿಂಬೆ (ಮಿಡಿಯಂ ಗಾತ್ರ)ಹಣ್ಣು ಸಿಗಲಿದೆ.

### ಗ್ರಾಹಕರಲ್ಲಿ ಬೆಲೆ ಏರಿಕೆ ಆತಂಕ...

ತೆಂಗಿನಕಾಯಿ ಬೆಲೆ ಏರಿಕೆಯಿಂದಾಗಿ ಖರೀದಿಗೆ ಗ್ರಾಹಕರು ಹಿಂದೇಟು ಹಾಕುತ್ತಿದ್ದಾರೆ. ಸಾಲು–ಸಾಲು ಹಬ್ಬ, ಸಮಾರಂಭದ ಅಡುಗೆ, ಹೋಟೆಲ್, ಶುಭ ಕಾರ್ಯಗಳಲ್ಲಿ ಫಲ ತಾಂಬೂಲ ನೀಡುವವರಿಗೆ ಇನ್ನಿಲ್ಲದ ಯೋಚನೆ ತಂದಿದೆ. ದೇಶದಲ್ಲಿ ಕರ್ನಾಟಕದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನಕಾಯಿ ಬೆಳೆಯಲಾಗುತ್ತಿದೆ. ರಾಜ್ಯದ ಎಲ್ಲಾ ಕಡೆಗಳಲ್ಲೂ ತೆಂಗಿಗೆ ಬೇಡಿಕೆಯಿದೆ. ಆದರೆ ಬೇಡಿಕೆಗೆ ತಕ್ಕಂತೆ ತೆಂಗು ಮಾರುಕಟ್ಟೆಗೆ ಬರುತ್ತಿಲ್ಲ. ಇದರಿಂದ ದರವು ಗಣನೀಯವಾಗಿ ಏರಿಕೆ ಕಂಡುಬಂದಿದೆ. ಮುಂದಿನ ದಿನಗಳಲ್ಲಿ ಶಿವರಾತ್ರಿ, ಯುಗಾದಿ ಹಬ್ಬ ಇರುವುದರಿಂದ ತೆಂಗು ಮತ್ತಷ್ಟು ದುಬಾರಿಯಾಗುವ ಆತಂಕ ಎದುರಾಗಿದೆ. ಹಾಗೆಯೇ ಹಣ್ಣುಗಳ ಬೆಲೆಯಲ್ಲೂ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಹೆಚ್ಚಾಗಿದೆ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಮದಗಜರಾಜ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಮಾರ್ಕೋ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ದೇವ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಬೇಗೂರು ಕಾಲೋನಿ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಮಾರ್ಕೋ (ತ)+ ಮಾರ್ಕೋ (ಕ) | 1+4 ಪ್ರದರ್ಶನಗಳು |
| **ರಾಜಕಮಲ್** | |
| ದೇವ (ಹಿಂ) | 4 ಪ್ರದರ್ಶನಗಳು |
| **ಸಂಗಂ** | |
| ರಾಯಲ್ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಗಣ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಮದಗಜರಾಜ (ತ) | 4 ಪ್ರದರ್ಶನಗಳು |
| **ಪ್ರಭಾ** | |
| ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ) | 2+2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಭೂ ಮಂತರ್ (ಕ): ರಾ.10.10ಕ್ಕೆ. |
| ಸ್ಕ್ರೀನ್ 2 | ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಭೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ. |
| ಸ್ಕ್ರೀನ್ 3 | ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ |
| ಸ್ಕ್ರೀನ್ 4 | ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ. |

### ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ. |
| ಸ್ಕ್ರೀನ್ 2 | ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ. |
| ಸ್ಕ್ರೀನ್ 3 | ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ |
| ಸ್ಕ್ರೀನ್ 4 | ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ. |

### ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಗ್ರಾಪಂ ಸದಸ್ಯೆಯಿಂದ ಅಕ್ರಮ ಮನೆ ನಿರ್ಮಾಣ ಆರೋಪ

## ಮಾನವ ರಕ್ಷಣಾ ಸಮಿತಿಯಿಂದ ಪ್ರತಿಭಟನೆ



ಚಾಮುಂಡಿಬೆಟ್ಟದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಲಾಗುತ್ತಿದೆ ಎಂದು ಆರೋಪಿಸಿ ತಾಲೂಕು ಕಚೇರಿ ಬಳಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಫೆ3(ಎಂಟಿವೈ)– ಚಾಮುಂಡಿ ಬೆಟ್ಟ ಗ್ರಾ.ಪಂ. ಪಿಡಿಓ ರೂಪೇಶ್ ಸುಳ್ಳು ದಾಖಲೆ ನೀಡಿ ಗ್ರಾ.ಪಂ.ಸದಸ್ಯೆ ಅಂಬಿಕಾ ಅವರು ಅಕ್ರಮವಾಗಿ ಮನೆ ಕಟ್ಟಲು ಅವಕಾಶ ನೀಡಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಿನಿ ವಿಧಾನಸೌಧದ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ, ಚಾಮುಂಡಿಬೆಟ್ಟದಲ್ಲಿ ಅಕ್ರಮವಾಗಿ ಮನೆ ನಿರ್ಮಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಚಾಮುಂಡಿಬೆಟ್ಟ ಗ್ರಾ.ಪಂ. ಪಿಡಿಓ ರೂಪೇಶ್ ತಮಗೆ ಅಧಿಕಾರ ಇಲ್ಲದಿದ್ದರೂ ಸರ್ವೆ ನಂಬರ್ 64/1ಕ್ಕೆ ಖಾತೆ ಮಾಡಿ ಕಾನೂನು ಉಲ್ಲಂಘನೆ ಮಾಡಿದ್ದಾರೆ. ಚಾಮುಂಡಿಬೆಟ್ಟ ಗ್ರಾಪಂ. ಸದಸ್ಯೆ ಅಂಬಿಕಾ ಪಂಚಾಯಿತಿ ಜಾಗವನ್ನು ಒತ್ತುವರಿ ಮಾಡಿ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ. ಅನುಮತಿ ಪಡೆಯದೆ ಮನೆ ಕಟ್ಟಿ ಗೃಹಪ್ರವೇಶಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಇದೆಲ್ಲವೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ತಿಳಿದಿದ್ದರೂ ಆಮಿಷಗಳಿಗೆ ಒಳಗಾಗಿ ಸ್ಥಳ ಪರಿಶೀಲನೆ ಮಾಡದೆ, ದಾಖಲಾತಿ ಪರಿಶೀಲಿಸಿ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಕಾಲಹರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲ, ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟರಾಜು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಮೈಸೂರಿನ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಗುಣಮಟ್ಟ ಪರೀಕ್ಷೆಗಾಗಿ ನೀರಿನ ಮಾದರಿ ಸಂಗ್ರಹ

## ಪ್ರಯೋಗಾಲಯದ ವರದಿ ಬಂದ ನಂತರ ಕ್ರಮ



ಮೈಸೂರು, ಫೆ.3(ಬಿಎಲ್‌ಯು)– ಮೈಸೂರು ನಗರದಲ್ಲಿ ತಯಾರಾಗುತ್ತಿರುವ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಗುಣಮಟ್ಟದ ಪರೀಕ್ಷೆಗಾಗಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ನೀರಿನ ಮಾದರಿಯನ್ನು ಸಂಗ್ರಹಿಸಿದೆ.

ಆಹಾರದ ಜೊತೆಗೆ ನೀರಿನಲ್ಲೂ ಗುಣಮಟ್ಟ ಇರಬೇಕೆಂದು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ನಿಯಮವಿದೆ. ಈ ಹಿನ್ನೆಲೆ ಒಂದೊಂದು ವಾರ ಒಂದೊಂದು ಆಹಾರ ಪದಾರ್ಥಗಳ ಗುಣಮಟ್ಟ ಪರೀಕ್ಷೆ ಮಾಡುವಂತೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡುತ್ತದೆ. ಇದು ಪ್ರಾಧಿಕಾರದ ನಿಗಾ ಯೋಜನೆಯಾಗಿದೆ.

ಅದರಂತೆ ಈ ವಾರ ಮೈಸೂರಿನಲ್ಲಿ ತಯಾರಾಗುತ್ತಿರುವ ಪ್ಯಾಕೇಜ್ ಡ್ರಿಂಕಿಂಗ್ ವಾಟರ್‌ನ ಮಾದರಿಯನ್ನು ಸಂಗ್ರಹಿಸಲಾಗಿದೆ. ಮೈಕ್ರೊ ಬಯಾಲಜಿಕಲ್ ಪ್ಯಾರ ಮೀಟರ್‌ಗಾಗಿ ಮೈಸೂರಿನ ವಿಭಾಗೀಯ ಆಹಾರ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಜೊತೆಗೆ ಕೆಮಿಕಲ್ ಅನಾಲಿಸಸ್‌ಗಾಗಿ ಬೆಂಗಳೂರಿನಲ್ಲಿರುವ ವಿಭಾಗೀಯ ಆಹಾರ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ನಿಯಮಗಳಿಗೆ ಅನುಗುಣವಾಗಿದೆಯೇ, ಕುಡಿಯಲು ಇದು ಸುರಕ್ಷಿತವೇ ಅಥವಾ ಇಲ್ಲವೇ ಎಂಬ ಬಗ್ಗೆ ಪ್ರಯೋಗಾಲಯ ವರದಿ ನೀಡುತ್ತದೆ. ತರುವಾಯ ಪ್ರಯೋಗಾಲಯ ನೀಡುವ ವರದಿ ಆಧಾರದ ಮೇಲೆ ಲೋಪ ಕಂಡು ಬಂದರೆ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಅಂಕಿತ ಅಧಿಕಾರಿ ಡಾ.ಎಸ್.ಎಲ್.ರವೀಂದ್ರ ತಿಳಿಸಿದ್ದಾರೆ.

### ಸಂಸ್ಕರಣ ದಿನಾಂಕ, ಬ್ಯಾಚ್ ನಂಬರ್ ಹಾಕದಿದ್ದರೆ ದಂಡ ಖಚಿತ

ಮೈಸೂರಿನಲ್ಲಿ ತಯಾರಾಗುತ್ತಿರುವ ಬಹಳಷ್ಟು ಪ್ಯಾಕೇಜ್ ಡ್ರಿಂಕಿಂಗ್ ವಾಟರ್‌ನಲ್ಲಿ ಕಡ್ಡಾಯವಾಗಿ ಲೇಬಲ್ ಹಾಕಿರಬೇಕು. ಲೇಬಲ್‌ನಲ್ಲಿ ನೀರನ್ನು ಸಂಸ್ಕರಿಸಿದ ದಿನಾಂಕ ಮತ್ತು ಬ್ಯಾಚ್ ನಂಬರ್ ಅನ್ನು ಹಾಕಬೇಕು. ಈ ನಿಯಮವನ್ನು ಉಲ್ಲಂಘಿಸುವ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಕಂಪನಿಗಳಿಗೆ ಈಗಾಗಲೇ ದಂಡ ವಿಧಿಸಲಾಗಿದೆ.

ಮತ್ತೆ ಈ ನಿಯಮ ಉಲ್ಲಂಘನೆ ಮಾಡಿದರೆ ಯಾವುದೇ ನೋಟಿಸ್ ನೀಡದೆ ದಂಡ ವಿಧಿಸುವುದರ ಜೊತೆಗೆ ಕಾನೂನು ಕ್ರಮ ಕೈಗೊಳ್ಳಲಾಗುವುದು.


– **ಡಾ.ಎಸ್.ಎಲ್.ರವೀಂದ್ರ,** ಅಂಕಿತ ಅಧಿಕಾರಿ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ

### ಹುಟ್ಟುಹಬ್ಬದ ಶುಭಾಶಯ



ಮೈಸೂರು ತಾಲೂಕು ಎಪಿಎಂಸಿ ಮಾಜಿ ನಿರ್ದೇಶಕ ಕೋಟೆಹುಂಡಿ ಮಹದೇವ್ಪ ಅವರಿಗೆ ಡಿಎಂಜಿ ಹಳ್ಳಿ ಗ್ರಾಮ ಪಂಚಾಯಿತಿ ಮುಖಂಡರು ಸೇಬಿನ ಹಾರ ಹಾಕಿ ಸನ್ಮಾನಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಡಿಎಂಜಿ ಹಳ್ಳಿ ಗ್ರಾಪಂ ಅಧ್ಯಕ್ಷೆ ವನಿತಾ ಎಂ.ಮಂಜು, ಗ್ರಾಪಂ ಮಾಜಿ ಉಪಾಧ್ಯಕ್ಷ ಸುಂದರಾಜು, ಪ್ರಭಾ, ಸದಸ್ಯರಾದ ಲತಾ, ರಾಜಣ್ಣ ಡಿ.ಬಿ ಶಂಕರ್, ಭಗವಾನ್ ಸ್ವಾಮಿ, ಪುಟ್ಟಸ್ವಾಮಿ, ಉದಯ್‌ಕುಮಾರ್, ಸೋಮೇಶ, ಬಲ್ಲಹಳ್ಳಿ ಮನು, ಡಿ.ಸಿ.ಕುಮಾರ್, ದಾಸಯ್ಯ, ಮಾರಯ್ಯನಹುಂಡಿ ಮನು, ಪುರಶಿವಮೂರ್ತಿ, ಮಾದಹಳ್ಳಿ ಮಾದಪ್ಪ ಪ್ರಕಾಶ, ಲತಾ ಪ್ರಸನ್ನಚಾರಿ, ಶಿವಕುಮಾರ್, ಡಿ.ಪಿ.ಶಂಕರ್, ಸೋಮನಾಯಕ, ಶೆಟ್ಟಿನಾಯಕನಹಳ್ಳಿ ಪುರಶಿವಮೂರ್ತಿ, ಕಮರಳ್ಳಿ ಮಂಜು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

### ಅಭಿನಂದನೆ



ಮೈಸೂರು ಮಹಾನಗರ ಪಾಲಿಕೆ ನೂತನ ಆಯುಕ್ತ ಶೇಖ್ ತನ್ವಿರ್ ಆಸಿಫ್ ಅವರನ್ನು ಸೋಮವಾರ ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ, ಉಪಾಧ್ಯಕ್ಷ ಎಂ.ಆನಂದ ಶೆಟ್ಟಿ ಅವರು ಪುಷ್ಪಗುಚ್ಛ ನೀಡಿ ಶುಭ ಕೋರಿದರು. ಎ.ಸಿ.ರವಿ, ಹೆಚ್.ಸಿ.ಚಂದ್ರು, ರಾಜಶೇಖರ ಅವರನ್ನು ಚಿತ್ರದಲ್ಲಿ ಕಾಣಬಹುದು.

# ವೈದ್ಯಲೋಕ ರೋಗಗಳಿಗೆ ಬರೀ ತಾತ್ಕಾಲಿಕ ಉಪಶಮನದತ್ತಲೇ ಕೆಲಸ ಮಾಡುತ್ತಿದೆ; ಶಾಶ್ವತ ಪರಿಹಾರದತ್ತ ಪ್ರಯತ್ನವೇ ಸಾಗಿಲ್ಲ

- ಆಯುರ್ವೇದ ಹಿರಿಯ ವೈದ್ಯ ಡಾ.ಗುರುಬಸವರಾಜು ವಿಷಾದ
- ಅದೆಷ್ಟೋ ಗಂಭೀರ ರೋಗಗಳಿಗೆ ಇನ್ನೂ ಔಷಧಿಯನ್ನೇ ಕಂಡು ಹಿಡಿದಿಲ್ಲ

ಮೈಸೂರು, ಫೆ.3(ಎಸ್‌ಪಿಎನ್)– ಜಗತ್ತಿನಾದ್ಯಂತ ತಂತ್ರಜ್ಞಾನ ಶರವೇಗದಲ್ಲಿ ಅಭಿವೃದ್ಧಿ ಹೊಂದುತ್ತಿದೆ. ಈ ವೇಗಕ್ಕೆ ತಕ್ಕಂತೆ ಯುವಕ–ಯುವತಿಯರು ತಮ್ಮ ಆಧುನಿಕ ಜೀವನಶೈಲಿ ರೂಢಿಸಿಕೊಂಡಿದ್ದರಿಂದ ಈ ಹೆಣ್ಣು ಮಕ್ಕಳು ತಮ್ಮ ಬಾಲ್ಯದಿಂದ ವಂಚಿತರಾಗಿದ್ದಾರೆ ಎಂದು ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಯ ಮಾಜಿ ವೈದ್ಯಕೀಯ ಅಧೀಕ್ಷಕ ಡಾ.ಗುರುಬಸವರಾಜು ಅಭಿಪ್ರಾಯಪಟ್ಟರು.

ಮೈಸೂರು ಜಯಲಕ್ಷ್ಮೀಪುರಂ ಹಿರಿಯ ನಾಗರಿಕರ ಮಂಡಳಿಯ ಮಾಸಿಕ ಸಾಮಾನ್ಯ ಸಭೆಯಲ್ಲಿ ಏರ್ಪಡಿಸಿದ್ದ 'ಹಿರಿಯ ನಾಗರಿಕರ ಅಸ್ಪಷ್ಟತೆಯ ಜೀವನ ಶೈಲಿ ಮತ್ತು ಆರೋಗ್ಯ ಸುಧಾರಣೆಯ ಸಮಗ್ರ ತಿಳುವಳಿಕೆ' ಕುರಿತು ಮಾತನಾಡಿದ ಅವರು, ಆಧುನಿಕ ಆಹಾರ ಪದ್ಧತಿಯಿಂದ ಹೆಣ್ಣು ಮಕ್ಕಳು ಅತೀ ಚಿಕ್ಕವಯಸ್ಸಿಗೆ ಋತುಮತಿಗಳಾಗುತ್ತಿದ್ದಾರೆ. ಅತೀ ಚಿಕ್ಕವಯಸ್ಸಿನಲ್ಲೇ ಇದರ ನಿರ್ವಹಣೆಯಿಂದಾಗಿ ತಮ್ಮ ಬಾಲ್ಯವನ್ನು ಮರೆಯುವಂತಾಗಿದೆ ಎಂದರು.

ಮುಂದುವರೆದು ಕಳೆದ 45 ವರ್ಷಗಳಿಂದ ಮಧುಮೇಹ, ರಕ್ತದೊತ್ತಡ ರೋಗಗಳ ಕುರಿತು ಮಾತನಾಡುತ್ತಿದ್ದೇವೆ. ಆದರೆ, ಅದರ ಸಂಪೂರ್ಣ ನಿವಾರಣೆ ಕುರಿತು ಒಬ್ಬ ತಜ್ಞರೂ ಮಾತನಾಡುತ್ತಿಲ್ಲ. ರೋಗಿಗಳಿಗೆ ಬರೀ ಔಷಧಿ ನೀಡಿ, ತಾತ್ಕಾಲಿಕ ಶಮನದ ಕಡೆಗೆ ಎಲ್ಲಾ ವೈದ್ಯರು ಸೀಮಿತವಾಗಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಕ್ಯಾನ್ಸರ್, ಹೃದ್ರೋಗ, ಕಿಡ್ನಿ ವೈಫಲ್ಯ ಸೇರಿದಂತೆ ಗಂಭೀರ ರೋಗಗಳಿಗೆ ಔಷಧಿ ಕಂಡು ಹಿಡಿದಿಲ್ಲ. ಗಂಭೀರ ಸ್ವರೂಪದ ಖಾಯಿಲೆಗಳಿಗೆ ತಾತ್ಕಾಲಿಕ ಉಪಶಮನ ಆಗುವಂತಹ ಔಷಧಿಗಳನ್ನು ನೀಡಿ, ಚಿಕಿತ್ಸೆ ನೀಡಲಾಗುತ್ತಿದೆ. ಈ ರೋಗವನ್ನು ಸಂಪೂರ್ಣ ವಾಸಿ ಮಾಡುವಂತಹ ಔಷಧಿ ಕಂಡು ಹಿಡಿಯಲು ಇಲ್ಲಿಯವರೆಗೂ ಭಾರತದಂತಹ ದೇಶಕ್ಕೆ ಸಾಧ್ಯವಾಗಿಲ್ಲ ಎಂದು ಬೇಸರ ಹೊರಹಾಕಿದರು.

ನಾವು ಇಲ್ಲಿಯವರೆಗೆ ಮಾನಸಿಕ, ದೈಹಿಕ, ಸಾಮಾಜಿಕ ಆರೋಗ್ಯ ಚಿಕಿತ್ಸೆ ಕುರಿತು ಮಾತನಾಡುತ್ತಿದ್ದೇವು. ಇದೀಗ ಆಧ್ಯಾತ್ಮ ಚಿಕಿತ್ಸೆ ಕುರಿತು ಚರ್ಚೆ ಆರಂಭವಾಗಿದೆ. ಒತ್ತಡಮುಕ್ತ ಸಮಾಜ ನಿರ್ಮಾಣ ಮಾಡಲು ಆಧ್ಯಾತ್ಮ ಚಿಂತನೆಗಳು ಪ್ರಮುಖ ಅಂಶವಾಗಿದೆ ಎಂದ ಅವರು, ಸರ್ವಜ್ಞ, ಕನಕದಾಸ, ಪುರಂದರದಾಸರು, ಹನ್ನೆರಡನೇ ಶತಮಾನದ ಬಸವಣ್ಣ, ಅಲ್ಲಮಪ್ರಭು ಸೇರಿದಂತೆ ಇತರೆ ಶರಣರು ರಚಿಸಿದ ವಚನ ಸಾಹಿತ್ಯದಲ್ಲಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವಂತಹ ಸಾಹಿತ್ಯ ರಚನೆಯಾಗಿವೆ. ಇದನ್ನು ಜನರಿಗೆ ತಿಳಿಸಿಕೊಡುವ ಕೆಲಸವಾಗಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಜಗತ್ತಿನಲ್ಲಿ ರೋಗಮುಕ್ತ ಸಮಾಜ ನಿರ್ಮಾಣ ಮಾಡಲು ವಿಶ್ವ ಆರೋಗ್ಯ ಸಂಸ್ಥೆ ವತಿಯಿಂದ ಸಾಧ್ಯವಾಗಿಲ್ಲ. ಏಕೆಂದರೆ, ಮುಖ ನೋಡಿ ಮಣೆ ಹಾಕುವ ಮನಸ್ಥಿತಿ ಹೊಂದಿರುವ ವಿಶ್ವ ಆರೋಗ್ಯ ಸಂಸ್ಥೆ, ಆರೋಗ್ಯ ಕುರಿತಾಗಿ ಅತೀ ಬಡತನದಿಂದ ಬಳಲುತ್ತಿರುವ ದೇಶಗಳಿಗೆ ಒಂದು ರೀತಿ ಸಲಹೆ ನೀಡಿದರೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಮತ್ತೊಂದು ರೀತಿಯಲ್ಲಿ ಸಲಹೆ ನೀಡುತ್ತಿದೆ. ಮುಂದುವರೆದ ರಾಷ್ಟ್ರಗಳಿಗೆ ಸಲಹೆ ನೀಡಲು ಹಿಂದೂಮುಂದು ನೋಡುತ್ತಿದೆ ಎಂದು ಕೋವಿಡ್–19 ಘಟನೆಗಳನ್ನು ಉಲ್ಲೇಖಿಸಿ ಆರೋಪಿಸಿದರು.

ನಮ್ಮ ಹಿರಿಯರು ಆಧ್ಯಾತ್ಮದ ಮೂಲಕ ಸಮುದಾಯದ ಸ್ವಾಸ್ಥ್ಯ ಕದಡದಂತೆ ನೋಡಿಕೊಂಡಿದ್ದರು. ಅವರು ತನು–ಮನ, ನುಡಿ–ನಡೆ, ಭಾವ ಕುರಿತು ತಮ್ಮ ತಮ್ಮ ಸಾಹಿತ್ಯದಲ್ಲಿ ಉಲ್ಲೇಖಿಸಿದ್ದಾರೆ. ಇದು ಆಧ್ಯಾತ್ಮದಲ್ಲೂ ಚಿಕಿತ್ಸೆ ಇದೆ ಎಂಬುದನ್ನು ಸಾಬೀತುಪಡಿಸಿದೆ ಎಂದು ಶರಣರ ವಚನಗಳು, ವೇದ–ಉಪನಿಷತ್ ಶ್ಲೋಕಗಳು, ದಾಸರ ಕೀರ್ತನೆಗಳನ್ನು ಉಲ್ಲೇಖಿಸಿದರಲ್ಲದೆ, ಸಮಾಜದ ಸ್ವಾಸ್ಥ್ಯ ಎಷ್ಟು ಮುಖ್ಯ ಹಾಗೂ ಐವತ್ತು ದಾಟಿದ ಮೇಲೆ ಹಿರಿಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ತೆಗೆದುಕೊಳ್ಳಬೇಕಾದ ಮುಂಜಾಗ್ರತೆ ಕ್ರಮಗಳ ವಿವರಿಸಿದರು. ವೇದಿಕೆಯಲ್ಲಿ ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎನ್.ನಾಗರಾಜು ಉಪಸ್ಥಿತರಿದ್ದರು.



'ಹಿರಿಯ ನಾಗರಿಕರ ಅಸ್ಪಷ್ಟತೆಯ ಜೀವನ ಶೈಲಿ ಮತ್ತು ಆರೋಗ್ಯ ಸುಧಾರಣೆಯ ಸಮಗ್ರ ತಿಳುವಳಿಕೆ' ಕುರಿತ ವಿಚಾರ ಸಂಕಿರಣದಲ್ಲಿ ಆಯುರ್ವೇದ ತಜ್ಞ ಡಾ.ಗುರು ಬಸವರಾಜು ಮಾತನಾಡಿದರು.

ಇತ್ತೀಚೆಗೆ ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಗಂಭೀರ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ 'ಘನತೆ ಸಾವು' ಹೆಸರಿನಲ್ಲಿ ರಾಜ್ಯ ಸರ್ಕಾರ ಕಾನೂನು ತಂದಿರುವುದು ಸರಿಯಷ್ಟೇ. ಆದರೆ, ಭಾರತದಲ್ಲಿ 'ಹುಟ್ಟು ಮತ್ತು ಸಾವು' ಭಾವನಾತ್ಮಕ ವಿಷಯ. ಇದಕ್ಕೆ ಜನರ ಪ್ರತಿಕ್ರಿಯೆಗೆ ಕಾದು ನೋಡಬೇಕಿದೆ. ಏಕೆಂದರೆ, ಇಂತಹ ಕಾನೂನು ಯುರೋಪ್ ದೇಶಗಳಲ್ಲಿ ಸುಲಭವಾಗಿ ಅನುಷ್ಠಾನಗೊಳಿಸಬಹುದು. ನಮ್ಮ ದೇಶದಲ್ಲಿ ಕಾರ್ಯ ಸಾಧುವೇ ಎಂಬುದನ್ನು ಕಾದು ನೋಡಬೇಕಿದೆ.

– **ಡಾ.ಗುರು ಬಸವರಾಜು,** ಹಿರಿಯ ಆಯುವೇದ ತಜ್ಞ

# ಇ–ಸ್ವತ್ತು ಮಾಡಲು 8 ಸಾವಿರ ಲಂಚಕ್ಕೆ ಬೇಡಿಕೆ; ಪಾಲಿಕೆ ಎಸ್‌ಡಿಎ ಲೋಕಾಯುಕ್ತ ಬಲೆಗೆ

ಮೈಸೂರು, ಫೆ.3(ಎಂಕೆ)– ಇ–ಸ್ವತ್ತು ಮಾಡಿಕೊಡಲು 8 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದ ನಗರಪಾಲಿಕೆ ಎಸ್‌ಡಿಎ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮೈಸೂರು ಜಯನಗರದಲ್ಲಿರುವ ವಲಯ ಕಚೇರಿ–2ರ ದ್ವಿತೀಯ ದರ್ಜೆ ಸಹಾಯಕ ಶೈಲೇಶ, ವ್ಯಕ್ತಿಯೊಬ್ಬರಿಗೆ ಇ–ಸ್ವತ್ತು ಮಾಡಿಕೊಡಲು 8 ಸಾವಿರ ರೂ. ನೀಡುವಂತೆ ಬೇಡಿಕೆ ಇಟ್ಟಿದ್ದು, 5 ಸಾವಿರ ರೂ. ಲಂಚ ಸ್ವೀಕರಿಸುವ ವೇಳೆ ರೆಡ್‌ಹ್ಯಾಂಡ್ ಆಗಿ ಲೋಕಾಯುಕ್ತ ಪೊಲೀಸರಿಗೆ ಇಂದು ಸಿಕ್ಕಿಬಿದ್ದಿದ್ದಾರೆ.

ಮಧುವನ ಚಂದ್ರು ಎಂಬುವರು ನೀಡಿದ ದೂರಿನ ಮೇರೆಗೆ ಸೋಮವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಪಾಲಿಕೆ ವಲಯ ಕಚೇರಿಗೆ ಭೇಟಿ ನೀಡಿದ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ರೂಪಶ್ರೀ ನೇತೃತ್ವದ ತಂಡ, ಲಂಚ ಸ್ವೀಕರಿಸುವ ವೇಳೆ ಶೈಲೇಶನನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದೆ.

ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಟಿ.ಅಶೋಕ್ ಕುಮಾರ್, ಸಿಬ್ಬಂದಿಗಳಾದ ವೀಣಾ, ತ್ರಿವೇಣಿ, ನೇತ್ರಾವತಿ, ಗುರುಪ್ರಸಾದ್, ಮೋಹನ್ ಕುಮಾರ್, ಮೋಹನ್ ಗೌಡ, ಶೇಖರ್ ಭಾಗಿಯಾಗಿದ್ದರು.

# ಪಡುವಾರಹಳ್ಳಿಯಲ್ಲಿ ಶಾಸಕ ಕೆ.ಹರೀಶ್‌ಗೌಡ ಪಾದಯಾತ್ರೆ

## ನಿವಾಸಿಗಳ ಕುಂದು–ಕೊರತೆ ಆಲಿಕೆ; ಸ್ಥಳದಲ್ಲೇ ಕೆಲ ಸಮಸ್ಯೆಗೆ ಪರಿಹಾರ



ಪಡುವಾರಹಳ್ಳಿಯಲ್ಲಿ ಸೋಮವಾರ ಪಾದಯಾತ್ರೆ ನಡೆಸಿದ ಶಾಸಕ ಕೆ.ಹರೀಶ್‌ಗೌಡ, ಸ್ಥಳೀಯ ನಿವಾಸಿಗಳ ಸಮಸ್ಯೆ ಆಲಿಸುತ್ತಿರುವುದು.

ಮೈಸೂರು, ಫೆ.3(ಎಂಕೆ)– ಮೈಸೂರು ನಗರಪಾಲಿಕೆ ವಾರ್ಡ್ ನಂ–22ರ ವ್ಯಾಪ್ತಿಯ ಪಡುವಾರಹಳ್ಳಿಯಲ್ಲಿ ಪಾದ ಯಾತ್ರೆ ನಡೆಸಿದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ನಿವಾಸಿಗಳ ಕುಂದು–ಕೊರತೆ ಆಲಿಸಿದರಲ್ಲದೆ ಸ್ಥಳದಲ್ಲಿಯೇ ಕೆಲ ಸಮಸ್ಯೆಗಳನ್ನು ಬಗೆಹರಿಸಿದರು.

ಪಾಲಿಕೆ ಅಧಿಕಾರಿಗಳೊಂದಿಗೆ ಸೋಮ ವಾರ ಬೆಳಗ್ಗೆ ಪಡುವಾರಹಳ್ಳಿಯಲ್ಲಿ ಪಾದ ಯಾತ್ರೆ ನಡೆಸಿದ ಶಾಸಕರು, ನಿವಾಸಿಗಳ ಹತ್ತಾರು ಸಮಸ್ಯೆಗಳನ್ನು ಆಲಿಸಿದರು. ರಸ್ತೆ, ಒಳ ಚರಂಡಿ ಅಭಿವೃದ್ಧಿ, ಕುಡಿಯುವ ನೀರು ಸೇರಿದಂತೆ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಭರವಸೆ ನೀಡಿದರು.

ಶಾಸಕನಾಗಿ ಯಾವಾಗಲೂ ಚಾಮ ರಾಜ ಕ್ಷೇತ್ರದ ಜನತೆಯ ಎಲ್ಲಾ ಸಮಸ್ಯೆ ಗಳಿಗೆ ಸ್ಪಂದಿಸುತ್ತೇನೆ. ಕಚೇರಿ ಹತ್ತಿರದಲ್ಲೇ ಇದ್ದು, ನನ್ನ ಆಪ್ತ ಸಹಾಯಕರನ್ನು ಸಂಪರ್ಕಿಸಿ ಸಣ್ಣ–ಪುಟ್ಟ ಸಮಸ್ಯೆಗಳಿದ್ದರೆ ಬಗೆಹರಿಸಿಕೊಳ್ಳಿ ಎಂದರಲ್ಲದೆ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿ, ಬಾಕಿ ಇರುವ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಹಾಗೆಂಯೇ ಅಂಬೇಡ್ಕರ್ ಕಾಲೋನಿಯ ಮುಂಭಾಗ ಹಾದು ಹೋಗಿರುವ ರಾಜ ಕಾಲುವೆಗೆ ಕಾಂಕ್ರೀಟ್ ಸ್ಲಾಬ್ ಅಳವಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪಡುವಾರಹಳ್ಳಿಯ ಭಾಗದಲ್ಲಾಗ ಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿ, ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿ ಗಳ ಸಮ್ಮುಖದಲ್ಲಿ ಚರ್ಚಿಸಿ, ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮಕೈ ಗೊಳ್ಳಲಾಗಿದೆ. ಸದ್ಯಕ್ಕೆ ಪಡುವಾರಹಳ್ಳಿ ಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ. ಹಲವೆಡೆ ಒಳಚರಂಡಿ, ರಸ್ತೆ ಹಾಗೂ ಮಳೆ ನೀರು ಚರಂಡಿ ಕಾಮಗಾರಿ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ, ಮಳೆ ನೀರು ಚರಂಡಿ, ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಪಡಿಸಿ ಶಾಶ್ವತವಾಗಿ ಸಮಸ್ಯೆಗಳು ಬರದಂತೆ ಕಾಮಗಾರಿ ಮಾಡು ವುದಾಗಿ ತಿಳಿಸಿದರು.

**ಅಹವಾಲು ಸ್ವೀಕಾರ:** ನಂತರ ಮಹದೇಶ್ವರ ದೇವಸ್ಥಾನದ ಆವರಣ ದಲ್ಲಿ ನಿವಾಸಿಗಳಿಂದ ಅಹ ವಾಲು ಸ್ವೀಕರಿಸಿ, ಸಮಸ್ಯೆಗಳನ್ನು ಪರಿಹರಿಸುವಂತೆ ಸೂಚಿಸಿದರು. ಮಹಾರಾಣಿ ಕಾಲೇಜಿನ ಮಧ್ಯದಲ್ಲಿರುವ ರಸ್ತೆಗೆ ಸ್ವಾಗತ ಕಮಾನು ನಿರ್ಮಾಣ ಮಾಡುವಂತೆ ಪಡುವಾರಹಳ್ಳಿಯ ಹಿರಿಯರು ಮನವಿ ಮಾಡಿದರು.

**ಅದ್ದೂರಿ ಸ್ವಾಗತ:** ಪಡುವಾರಹಳ್ಳಿಯಲ್ಲಿ ಪಾದಯಾತ್ರೆ ನಡೆಸಿದ ಶಾಸಕ ಹರೀಶ್ ಗೌಡರಿಗೆ ಗ್ರಾಮಸ್ಥರು ಅದ್ದೂರಿ ಸ್ವಾಗತ ನೀಡಿದರಲ್ಲದೆ ಸನ್ಮಾನಿಸಿದರು.

ಗ್ರಾಮದ ಹಿರಿಯರಾದ ಟಿ.ತಿಮ್ಮಯ್ಯ, ಶಾಸಕರ ಬಗ್ಗೆ ತಾವು ಬರೆದಿದ್ದ ಬರವಣಿಗೆಯ ಫೋಟೋ ಫ್ರೇಮ್ ಅನ್ನು ಉಡುಗೊರೆಯಾಗಿ ನೀಡುವ ಮೂಲಕ ಅಭಿಮಾನ ತೋರಿದರು. ವಾರ್ಡ್ ಅಧ್ಯಕ್ಷ ಕುಮಾರ್, ಮುಖಂಡರಾದ ಜೆ.ಯೋಗೇಶ್, ಮರಿಸ್ವಾಮಿ, ಕೃಷ್ಣ, ಪಾಪಣ್ಣ, ರಾಮಚಂದ್ರ, ಮಹದೇಶ್, ಭೀಮಣ್ಣ, ಕೃಪಾನಂದ, ರಾಜಣ್ಣ, ನಿತಿನ್, ರಾಜೇಶ್ವರಿ ಪುಟ್ಟಸ್ವಾಮಿ, ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.



## ಚೆಸ್: ಪ್ರಜ್ಞಾನಂದಗೆ ಟಾಟಾ ಸ್ಟೀಲ್ ಮಾಸ್ಟರ್ಸ್ ಕಿರೀಟ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್),: ಅಂತರ ರಾಷ್ಟ್ರೀಯ ಚೆಸ್‌ನಲ್ಲಿ ಭಾರತದ ಪ್ರಾಬಲ್ಯ ಮುಂದುವರಿದಿದೆ. ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ 'ಅನಿರೀಕ್ಷಿತ ಬೆಳವಣಿಗೆಗಳ' ನಂತರ ವಿಶ್ವ ಚಾಂಪಿಯನ್ ಗುಕೇಶ್ ಅವರನ್ನು ಸೋಲಿಸಿ ವರ್ಷದ ಮೊದಲ ಪ್ರಮುಖ ಟೂರ್ನಿಯಾದ ಟಾಟಾ ಸ್ಟೀಲ್ ಮಾಸ್ಟರ್ಸ್‌ನಲ್ಲಿ ಚಾಂಪಿ ಯನ್ ಕಿರೀಟ ಧರಿಸಿದರು.

87ನೇ ವರ್ಷದ ಈ ಟೂರ್ನಿಯ ಅಂತಿಮ ಸುತ್ತಿನ ನಂತರ ಪ್ರಜ್ಞಾನಂದ ಮತ್ತು ಗುಕೇಶ್ ತಲಾ 8.5 ಪಾಯಿಂಟ್ಸ್ ಸಂಗ್ರಹಿಸಿದ್ದರು. ಇಬ್ಬರೂ 12ನೇ ಸುತ್ತಿನ ನಂತರ ಅಗ್ರಸ್ಥಾನ ಹಂಚಿಕೊಂಡಿದ್ದರು. ಅರ್ಜುನ್ ಇರಿಗೇಶಿ 13ನೇ ಸುತ್ತಿನಲ್ಲಿ ಸ್ವದೇಶದ ಗುಕೇಶ್ ಅವರನ್ನು ಸೋಲಿಸಿದರೆ, ಜರ್ಮನಿಯ ವಿನ್ಸೆಂಟ್ ಕೀಮರ್ ಅವರು ಪ್ರಜ್ಞಾನಂದ ಅವರನ್ನು ಮಣಿಸಿದ್ದರು.



ಪ್ರಜ್ಞಾನಂದ

ಸ್ಕೋರ್ ಸಮನಾದ ಕಾರಣ ಅಲ್ಪಾವಧಿಯ ಟೈ ಬ್ರೇಕರ್ ಜಾರಿಗೊಳಿಸಲಾಯಿತು. ಚೆನ್ನೈನ ಆಟಗಾರರಿಬ್ಬರ ಈ ಪೈಪೋಟಿಯಲ್ಲಿ ಪ್ರಜ್ಞಾನಂದ 2–1 ರಿಂದ ಗುಕೇಶ್ ಅವರನ್ನು ಸೋಲಿಸಿದರು. ಮೊದಲ ಎರಡು ಗೇಮ್‌ಗಳಲ್ಲಿ ಇಬ್ಬರೂ ಒಂದೊಂದು ಗೆದ್ದರು. 2ನಿ.30 ಸೆಕೆಂಡುಗಳ 'ಸಡನ್ ಡೆತ್' ಪಂದ್ಯದಲ್ಲಿ 19 ವರ್ಷ ವಯಸ್ಸಿನ ಪ್ರಜ್ಞಾನಂದ ಜಯಗಳಿಸಿದರು.

'ನಾನಿನ್ನೂ ಆ ಒತ್ತಡದ ಗುಂಗಿನಿಂದ ಹೊರ ಬಂದಿಲ್ಲ. ಈ ಸಂತಸವನ್ನು ಹೇಗೆ ಬಣ್ಣಿಸಬೇಕೆಂದು ತಿಳಿಯುತ್ತಿಲ್ಲ. ನಾನು ಗೆಲ್ಲುವೆನೆಂಬ ನಿರೀಕ್ಷೆಯೇ ಇರಲಿಲ್ಲ. ಫಲಿತಾಂಶ ಹೇಗೋ ನನ್ನ ಕಡೆ ವಾಲಿತು' ಎಂದು ಟೂರ್ನಿಯ ಅಧಿಕೃತ ವೆಬ್‌ಸೈಟ್‌ಗೆ ಪ್ರಜ್ಞಾನಂದ ಬರೆದಿದ್ದಾರೆ. ವಿಶ್ವನಾಥನ್ ಆನಂದ್ ನಂತರ ಈ ಪ್ರಶಸ್ತಿ ಗೆದ್ದ ಭಾರತದ ಮೊದಲ ಆಟಗಾರ ಎಂಬ ಗೌರವ ಪ್ರಜ್ಞಾನಂದ ಅವರದಾಯಿತು. ಈ ಹಿಂದೆ ಕೋರಸ್ ಚೆಸ್ ಟೂರ್ನಿಯ ಎಂಬ ಹೆಸರು ಹೊಂದಿದ್ದ ಈ ಟೂರ್ನಿಯನ್ನು ಆನಂದ್ 2003, 2004 ಮತ್ತು 2006ರಲ್ಲಿ ಗೆದ್ದುಕೊಂಡಿದ್ದರು. 1989 ಮತ್ತು 1998 ರಲ್ಲಿ ಅವರು ಪ್ರಶಸ್ತಿಯನ್ನು ಹಂಚಿಕೊಂಡಿದ್ದರು.

ಗುಕೇಶ್ ಸತತ ಎರಡನೇ ವರ್ಷ ನಿರಾಶೆ ಅನುಭವಿಸ ಬೇಕಾಯಿತು. 2024ರಲ್ಲಿ ಅವರು ಅಗ್ರಸ್ಥಾನಕ್ಕೆ ಚೀನಾದ ವೀ ಯಿ ಜೊತೆ ಟೈ ಮಾಡಿಕೊಂಡಿದ್ದರು. ಆದರೆ ಟೈ ಬ್ರೇಕರ್‌ನಲ್ಲಿ ಚೀನಾದ ಆಟಗಾರ ಜಯಗಳಿಸಿದ್ದರು.

## ಗ್ರಾಹಕರ ದೂರಿಗೆ 30 ದಿನಗಳ ಒಳಗೆ ಬ್ಯಾಂಕ್‌ಗಳು ಉತ್ತರಿಸಬೇಕು

### ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಆರ್‌ಬಿಐ ಬ್ಯಾಂಕಿಂಗ್ ಒಂಬಡ್ಸ್‌ಮನ್ ಡಾ.ಬಾಲು ಕೆಂಚಪ್ಪ ಮಾಹಿತಿ



ಆರ್‌ಬಿಐ ಬ್ಯಾಂಕಿಂಗ್ ಒಂಬಡ್ಸ್‌ಮನ್ ಡಾ.ಬಾಲು ಕೆಂಚಪ್ಪ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಫೆ.3(ಪಿಎಂ)– ಬ್ಯಾಂಕ್‌ಗಳು ದೂರು ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಒಳಗೆ ಗ್ರಾಹಕರಿಗೆ ಉತ್ತರ ತಿಳಿಸಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಬ್ಯಾಂಕಿಂಗ್ ಒಂಬಡ್ಸ್‌ಮನ್ ಡಾ.ಬಾಲು ಕೆಂಚಪ್ಪ ಹೇಳಿದರು.

ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ವತಿಯಿಂದ ಬ್ಯಾಂಕಿಂಗ್ ಮತ್ತು ಬ್ಯಾಂಕಿಂಗೇತರ ಗ್ರಾಹಕರ ಅನುಕೂಲಕ್ಕಾಗಿ ಸೋಮವಾರ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇದರ ಜೊತೆಗೆ ಗ್ರಾಹಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ದೂರಿನ ನಮೂನೆಯನ್ನು ಬ್ಯಾಂಕಿನ ವೆಬ್‌ಸೈಟ್‌ನ ಮುಖಪುಟದಲ್ಲಿ ಪ್ರಕಟಿಸಬೇಕು. ಬ್ಯಾಂಕಿನ ಶಾಖೆಯಲ್ಲಿಯೂ ದೂರು ಸಲ್ಲಿಸುವ ಸೌಲಭ್ಯ ಕಲ್ಪಿಸಬೇಕು ಎಂದು ತಿಳಿಸಿದ ಅವರು, ಗ್ರಾಹಕರ ಸೇವೆ ಕುರಿತು ಆರ್‌ಬಿಐ ಮಾಸ್ಟರ್ ಸುತ್ತೋಲೆಯ (Master Circular on Customer Service in Banks) ಬಗ್ಗೆ ವಿವರಿಸಿದರು.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಿಶ್ವಾಸ ಅತ್ಯಂತ ಮುಖ್ಯ. ಗ್ರಾಹಕರ ರಕ್ಷಣೆ ಹಾಗೂ ಅವರಿಗೆ ತಿಳುವಳಿಕೆ ನೀಡುವುದು ಒಂಬಡ್ಸ್‌ಮನ್ ಜವಾಬ್ದಾರಿ. ಆರ್‌ಬಿಐ ವ್ಯಾಪ್ತಿಯ ಸಂಸ್ಥೆಗಳಲ್ಲಿ ಗ್ರಾಹಕರಿಗೆ ನೀಡುವ ಸೇವೆಗಳಲ್ಲಿ ತೊಂದರೆ ಉಂಟಾದಲ್ಲಿ ಕೋರ್ಟ್‌ಗೆ ಹೋಗುವ ಬದಲು ಆರ್‌ಬಿಐನ ಒಂಬಡ್ಸ್‌ಮನ್‌ಗೆ ದೂರು ನೀಡಿದ್ದಲ್ಲಿ ಶುಲ್ಕ ರಹಿತವಾಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ತಿಳಿಸಿದರು.

ಆರ್‌ಬಿಐ ಒಂಬಡ್ಸ್‌ಮನ್ ಯೋಜನೆ 2021ರ ಅಡಿಯಲ್ಲಿರುವ ಪರಿಹಾರ ವಿಧಾನ ಹಾಗೂ ದೂರುಗಳನ್ನು ಆರ್‌ಬಿಐ ಪೋರ್ಟಲ್ ಹಾಗೂ ಇತರೆ ಮಾಧ್ಯಮದ ಮೂಲಕ ಹೇಗೆ ಸಲ್ಲಿಸಬೇಕು. ನಾನಾ ವಿಧದಲ್ಲಿ ನಡೆಯುವ ವಂಚನೆಗಳ ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆಯೂ ಹೇಳಿದರು. ಬ್ಯಾಂಕಿಂಗ್ ಸೇವೆಗಳನ್ನು ಡಿಜಿಟಲ್‌ಗೊಳಿಸಿ ಗ್ರಾಹಕರ ಅಂಗೈಗೆ ನೀಡಲಾಗಿದೆ. ಗ್ರಾಹಕರ ಪ್ರತಿಯೊಂದು ರೂಪಾಯಿ ವ್ಯತ್ಯಾಸವಾಗದಂತೆ ಸುರಕ್ಷಿತವಾಗಿ ಇಡುವುದು ಬ್ಯಾಂಕಿಂಗ್‌ನ ಉದ್ದೇಶ. ಗ್ರಾಹಕರು ಜಾಗೃತರಾದಾಗ ಮಾತ್ರ ಬ್ಯಾಂಕಿಂಗ್ ವ್ಯವಸ್ಥೆಗಳು ಸುಲಭ ಎಂದರು.

ಇದೇ ಸಂದರ್ಭದಲ್ಲಿ ರಿಸರ್ವ್ ಬ್ಯಾಂಕ್ ಒಂಬಡ್ಸ್‌ಮನ್ ಯೋಜನೆ 2021ರ ಕುರಿತ ಕರಪತ್ರ ಹಾಗೂ ಕಿರು ಹೊತ್ತಿಗೆಯನ್ನು ವಿತರಣೆ ಮಾಡಲಾಯಿತು. ಸುಮಾರು 200 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಹಾಗೂ ಪ್ರಶ್ನೋತ್ತರ ಅವಧಿಯನ್ನೂ ಏರ್ಪಡಿಸಲಾಗಿತ್ತು. ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಸ್.ಹೊನ್ನೇಗೌಡ, ಇಂಡಿಯನ್ ಬ್ಯಾಂಕಿನ ಪ್ರಾದೇಶಿಕ ವ್ಯವಸ್ಥಾಪಕ ಅನಿಲ್ ಆರ್.ಕುಲಕರ್ಣಿ, ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಮನೋಜ್ ಕುಮಾರ್ ಸಾಹು ಮತ್ತಿತರರು ಹಾಜರಿದ್ದರು.



### PUBLIC NOTICE

Notice is hereby given that Sri B. Sadananda, son of B. Basavaiah, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No. 2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE-570 002, within 10 (Ten) days from the date of this publication, otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Site No.1, Block No. 23, formed by Madhuvana House Building Co-operative Society Ltd., situated at Srirampura 2nd Stage, Devaraja Mohalla, Mysore, site measuring East to West 40 Feet and North to South 60 Feet, totally measuring 2400 Sq. Ft., bounded on: East: Road, West: Site No.05, North: Road & South: Site No. 02.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 03-02-2025
Place: Mysore

### PUBLIC NOTICE

Notice is hereby given that Mrs. SANA AHMED, wife of Mr. Rafeeque Ahmed @ Rafiq Ahmed, has agreed to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No. 2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE-570 002, within 15 (Fifteen) days from the date of this publication, otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Site No.110 and 111, situated at Bannimantap 'C' Layout, Mandi Mohalla, Mysore, site measuring East to West 100 Ft. and North to South 80 Ft., totally measuring 8000 Sq. Ft., bounded on: East: Property No.109, West: Property No.112, North: Property No. 135 and 136 and South: 15 Meters Road.

Sd/- Dhirendra Kumar R. Mehta,
Advocate
KEY-ANS LAW SOLUTIONS
Date: 03.02.2025
Place: Mysore



### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ವಿಶ್ವನಾಥ್ ಎಂ ಬಿನ್ ಕೆ ಮಹದೇವು ರವರ 7/6ಎ, 1ನೇ ಕ್ರಾಸ್, 5ನೇ ಮೇನ್, ಜಯನಗರ, ಮೈಸೂರು ರವರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಎಂ.ಎಸ್. ಜಯಕುಮಾರ್ ಬಿನ್ ಶಿವನಂಜಪ್ಪರವರಿಂದ ಕೊಂಡುಕೊಳ್ಳಲು ಕ್ರಯಕ್ಕೆ ಪಡೆಯಲು ತೀರ್ಮಾನಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್, ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟವಾದ ದಿನ ದಿಂದ 7(ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು, ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.70/5 ರಲ್ಲಿರುವ 28 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ರಸ್ತೆ ; ಪಶ್ಚಿಮಕ್ಕೆ : ರಸ್ತೆ ; ಉತ್ತರಕ್ಕೆ : ಜವರಯ್ಯರವರ ಜಮೀನು ; ದಕ್ಷಿಣಕ್ಕೆ: ಗಣೇಶರವರ ಜಮೀನು.

Sd/- Vinay Babu, B.A., LL.B.,
Advocate, Neethi Law Associates, #EWS-63, Panchamantra Road, Kuvempunagara, Mysore-570 023
Mob: 9448516336
Date: 03-02-2025

### ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

**ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)**

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

| ಕ್ರ ಸಂ | ಟೆಂಡರ್ ಪ್ರಕಟಣೆ ಮತ್ತು ದಿನಾಂಕ | ಸೇವೆಯ ವಿವರ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| 1 | KMF/2024-25/IND1206/CALL-2 | ಒಕ್ಕೂಟಕ್ಕೆ ಅಗತ್ಯವಿರುವ ಅಗ್ರೋ ಬೇಸ್ಡ್ ಬ್ರಿಕೆಟ್ಸ್ ಅನ್ನು ಖರೀದಿಸುವ ಬಗ್ಗೆ. | 10.02.2025 ಸಂಜೆ 5.30 ಗಂಟೆಯವರೆಗೆ |
| 2 | KMF/2024-25/SE2756/CALL-3 | ಒಕ್ಕೂಟದ ಮೆಗಾ ಡೈರಿಯಲ್ಲಿ 800 KLD ಸಾಮರ್ಥ್ಯದ ತ್ಯಾಜ್ಯನೀರಿನ ಸಂಸ್ಕರಣಾ ಘಟಕದ(ರಾಸಾಯನಿಕದೊಂದಿಗೆ) ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಮಾನವ ಸಂಪನ್ಮೂಲವನ್ನು ದ್ವೈವಾರ್ಷಿಕ ಅವಧಿಗೆ ದರ ಗುತ್ತಿಗೆಯನ್ನು ವಹಿಸಿಕೊಡುವ ಬಗ್ಗೆ. | 10.02.2025 ಸಂಜೆ 5.30 ಗಂಟೆಯವರೆಗೆ |

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,